ಆಯ್ದ ಕವಿತೆಗಳು

ಡಾ.ಸಿದ್ಧಲಿಂಗ ಪಟ್ಟಣಶೆಟ್ಟಿ

ವಿಶ್ವಕನ್ನಡ
ಸಮ್ಮೇಳನ
ಸಾಹಿತ್ಯಮಾಲೆ

ಆಯ್ದ ಕವಿತೆಗಳು

ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು – ೫೬೦ ೦೦೨

AAYDA KAVITEGALU : A collection of selected poems by **Dr. Siddhaling Pattanshetti,** Published by **Manu Baligar**, Director, Department of Kannada and Culture, Kannada Bhavana, J.C.Road, Bengaluru - 560 002.

ಈ ಆವೃತ್ತಿಯ ಹಕ್ಕು : ಕರ್ನಾಟಕ ಸರ್ಕಾರ

ಮುದ್ರಿತ ವರ್ಷ : ೨೦೧೧
ಪ್ರತಿಗಳು : ೧೦೦೦
ಪುಟಗಳು : XXIV + ೧೪೦
ಬೆಲೆ : ರೂ. ೪೫/–

ರಕ್ಷಾಪುಟ ವಿನ್ಯಾಸ : **ಕೆ. ಚಂದ್ರನಾಥ ಆಚಾರ್ಯ**

ಮುದ್ರಕರು :
ಮೆ॥ ಮಯೂರ ಪ್ರಿಂಟ್ ಆ್ಯಡ್ಸ್
ನಂ. ೬೯, ಸುಬೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦ ೦೨೦ ದೂ : ೨೩೩೪೨೬೨೪

ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು ೫೬೦ ೦೦೧

ಸಿಎಂ/ಪಿಎಸ್/೨೬/೧೧

ಶುಭ ಸಂದೇಶ

ವಿಶ್ವ ಕನ್ನಡ ಸಮ್ಮೇಳನದ ಸಂಭ್ರಮಾಚರಣೆಯ ಸಂದರ್ಭದಲ್ಲಿ ಕನ್ನಡ ನಾಡು ಏಕೀಕರಣಗೊಂಡು ೫೫ನೇ ವರ್ಷಕ್ಕೆ ಹೆಜ್ಜೆಯನ್ನಿಟ್ಟಿದೆ. ಈ ಸಂದರ್ಭವನ್ನು ರಚನಾತ್ಮಕವಾಗಿ ದಾಖಲಿಸಿ ಸ್ಮರಣೀಯಗೊಳಿಸಬೇಕೆಂಬುದು ಸರ್ಕಾರದ ಮಹದಾಶಯ. ಅದಕ್ಕಾಗಿ ಬೆಳಗಾವಿಯಲ್ಲಿ **"ವಿಶ್ವ ಕನ್ನಡ ಸಮ್ಮೇಳನ"** ವನ್ನು ಇದೇ ಮಾರ್ಚ್ ತಿಂಗಳಿನಲ್ಲಿ ಆಯೋಜಿಸಲಾಗಿದೆ. ಇದನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸುವುದು ಕರ್ನಾಟಕ ಸರ್ಕಾರದ ಆಶಯವಾಗಿದೆ. ಇದರ ಅಂಗವಾಗಿ ನಾಡಿನ ವಿವಿಧ ಕ್ಷೇತ್ರಗಳಲ್ಲಾಗಿರುವ ಪ್ರಗತಿಯ ಆತ್ಮಾವಲೋಕನದ ಜೊತೆಗೆ ಕನ್ನಡ ಸಾಹಿತ್ಯದ ಸೃಜನಶೀಲ ಮತ್ತು ಸೃಜನೇತರ ಪ್ರಕಾರಗಳ ೧೦೦ ಕೃತಿಗಳನ್ನು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಪ್ರಕಟಿಸಲಾಗುತ್ತಿದೆ. ಕನ್ನಡದ ಖ್ಯಾತ ಲೇಖಕರ ಮಹತ್ವದ ಕೃತಿಗಳನ್ನು ಪ್ರಕಟಿಸಿ, ಸುಲಭ ಬೆಲೆಯಲ್ಲಿ ಸಾಹಿತ್ಯಾಸಕ್ತರಿಗೆ ಒದಗಿಸುವ ಹಂಬಲ ನಮ್ಮದು.

ಈ ಸಾಹಿತ್ಯ ಮಾಲಿಕೆಯಲ್ಲಿನ ಕೃತಿರತ್ನಗಳನ್ನು ಕನ್ನಡಿಗರು ಸಹೃದಯತೆಯಿಂದ ಸ್ವಾಗತಿಸುವ ಮೂಲಕ ಇವುಗಳ ಪ್ರಯೋಜನವನ್ನು ಪಡೆದುಕೊಂಡರೆ ಸರ್ಕಾರದ ಈ ಯೋಜನೆ ಸಾರ್ಥಕವಾಗುತ್ತದೆ ಎಂದು ಭಾವಿಸುತ್ತೇನೆ.

ದಿನಾಂಕ ೨೪.೦೧.೨೦೧೧

(ಬಿ.ಎಸ್. ಯಡಿಯೂರಪ್ಪ)

ಕರ್ನಾಟಕ ಸರ್ಕಾರ

ಗೋವಿಂದ ಎಂ. ಕಾರಜೋಳ
ಕನ್ನಡ ಮತ್ತು ಸಂಸ್ಕೃತಿ,
ಸಣ್ಣ ನೀರಾವರಿ ಹಾಗೂ ಜವಳಿ ಸಚಿವರು

ವಿಧಾನಸೌಧ
ಬೆಂಗಳೂರು – ೦೧

ಚೆನ್ನುಡಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ವಿಶ್ವ ಕನ್ನಡ ಸಮ್ಮೇಳನದ ಅಂಗವಾಗಿ ಸುಮಾರು ೧೦೦ ಕನ್ನಡದ ಮೇರುಕೃತಿಗಳನ್ನು ಮರುಮುದ್ರಿಸಲು ಉದ್ದೇಶಿಸಿರುತ್ತದೆ.

ಈ ಯೋಜನೆಯಡಿ ಕನ್ನಡ ಸಾಹಿತ್ಯದ ಬೇರೆ ಬೇರೆ ಕಾಲಘಟ್ಟಗಳಲ್ಲಿ ರಚನೆಗೊಂಡ ಕಥೆ, ಕಾದಂಬರಿ, ವಿಚಾರ ಸಾಹಿತ್ಯ, ಪ್ರಬಂಧ, ವಿಮರ್ಶೆ, ನಾಟಕ, ಕವನ ಸಂಕಲನ– ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳ ಕೆಲವು ಪ್ರಾತಿನಿಧಿಕ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಈ ಪ್ರಾತಿನಿಧಿಕ ಕೃತಿಗಳನ್ನು ಸರ್ಕಾರದಿಂದ ರಚಿತವಾದ ಆಯ್ಕೆ ಸಮಿತಿಯು ಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಕೃತಿಗಳನ್ನು ಮುದ್ರಣಕ್ಕೆ ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಎಲ್ಲಾ ವಿದ್ವಾಂಸರಿಗೂ ನನ್ನ ಧನ್ಯವಾದಗಳು. ಈ ಮಹತ್ವದ ಕೃತಿಗಳನ್ನು ಸಹೃದಯ ಕನ್ನಡಿಗರಿಗೆ ಸುಲಭ ಬೆಲೆಯಲ್ಲಿ ತಲುಪಿಸಬೇಕೆಂಬುದು ನಮ್ಮ ಹೆಗ್ಗುರಿಯಾಗಿರುತ್ತದೆ. ಕನ್ನಡ ಸಾಹಿತ್ಯದ ಮೈಲಿಗಲ್ಲುಗಳಾಗಿರುವ ಈ ಪುಸ್ತಕಗಳು ಭಾವಿ ಪೀಳಿಗೆಯವರಿಗೆ ದಾರಿದೀಪಗಳಾಗಿವೆ. ಈ ಕೃತಿಗಳ ಪ್ರಯೋಜನವನ್ನು ಕನ್ನಡ ಜನತೆ ಹಾಗೂ ವಿದ್ಯಾರ್ಥಿಗಳು ಪಡೆದರೆ ನಮ್ಮ ಶ್ರಮ ಸಾರ್ಥಕವೆಂದು ಭಾವಿಸುತ್ತೇನೆ.

ದಿನಾಂಕ ೧೮.೧.೨೦೧೧ **(ಗೋವಿಂದ ಎಂ. ಕಾರಜೋಳ)**

ಎರಡು ನುಡಿ

ಕರ್ನಾಟಕ ಸರ್ಕಾರವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ 'ವಿಶ್ವಕನ್ನಡ ಸಮ್ಮೇಳನ'ದ ಅಂಗವಾಗಿ ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿರುವ ಸಾಹಿತಿಗಳ ಮಹತ್ವದ ಕೃತಿಗಳನ್ನು ಓದುಗರಿಗೆ ಒದಗಿಸಬೇಕೆಂಬ ಸದಾಶಯ ಹೊಂದಿರುತ್ತದೆ. ಈ ಯೋಜನೆಯಡಿ ಸುಮಾರು ೧೦೦ ಕೃತಿಗಳನ್ನು ಪ್ರಕಟಿಸಲು ಉದ್ದೇಶಿಸಿದೆ.

ಈ ಕೃತಿಗಳನ್ನು ಆಯ್ಕೆಮಾಡಲು ಖ್ಯಾತ ವಿದ್ವಾಂಸರಾದ ಪ್ರೊ. ಎಲ್.ಎಸ್. ಶೇಷಗಿರಿರಾವ್‌ರವರ ಅಧ್ಯಕ್ಷತೆಯಲ್ಲಿ ನಾಡಿನ ಹೆಸರಾಂತ ಸಾಹಿತಿ / ವಿದ್ವಾಂಸರುಗಳನ್ನೊಳಗೊಂಡ ಆಯ್ಕೆ ಸಮಿತಿಯನ್ನು ರಚಿಸಿದೆ. ಈ ಆಯ್ಕೆ ಸಮಿತಿಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಗೆ ಕನ್ನಡ ಸಾಹಿತ್ಯದ ವಿವಿಧ ಕಾಲಘಟ್ಟಗಳಲ್ಲಿ ಬಂದ ಪ್ರಾತಿನಿಧಿಕ ಕೃತಿಗಳನ್ನು ಆಯ್ಕೆ ಮಾಡಿರುತ್ತದೆ. ಆಯ್ಕೆ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರಿಗೆ ಸರ್ಕಾರದ ಪರವಾಗಿ ವಂದನೆಗಳು ಸಲ್ಲುತ್ತವೆ. ಈ ಪುಸ್ತಕಗಳನ್ನು ಹೊರತರಲು ಅನುಮತಿ ನೀಡಿ ಸಹಕರಿಸಿದ ಎಲ್ಲಾ ಲೇಖಕರು ಹಾಗೂ ಹಕ್ಕುದಾರರುಗಳಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಕನ್ನಡದ ಮೇರುಕೃತಿ ಸಾಹಿತ್ಯ ಮಾಲಿಕೆಯನ್ನು ಓದುಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ದಿನಾಂಕ ೧೭.೦೧.೨೦೧೧

(ರಮೇಶ್ ಬಿ.ಝಳಕಿ)
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

ಅಧ್ಯಕ್ಷರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳನ್ನು ಪುನರ್‌ಮುದ್ರಣ ಮಾಡಲು ಒಂದು ಯೋಜನೆಯನ್ನು ಕೈಗೊಂಡಿತು. ಕೃತಿಗಳ ಆಯ್ಕೆಗಾಗಿ ಸರ್ಕಾರವು ಒಂದು ಸಮಿತಿಯನ್ನು ರಚಿಸಿತು. ಈ ಮಹತ್ವದ ಯೋಜನೆಯ ಸಮಿತಿಯ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವ ಸುಯೋಗ ನನ್ನದಾಯಿತು.

ಈ ಯೋಜನೆಯ ಮಹತ್ವವನ್ನು ನಾನು ವಿವರಿಸುವ ಅಗತ್ಯವಿಲ್ಲ. ಕನ್ನಡದ ಶ್ರೇಷ್ಠ ಕೃತಿಗಳನ್ನು ಸುಲಭ ಬೆಲೆಗೆ ಕನ್ನಡಿಗರ ಕೈಗಳಲ್ಲಿರಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಹಲವು ಯೋಜನೆಗಳನ್ನು ಕೈಗೊಂಡಿರುವುದಕ್ಕಾಗಿ ಸರ್ಕಾರವನ್ನೂ ಇಲಾಖೆಯನ್ನೂ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಕನ್ನಡ ಸಂಸ್ಕೃತಿಗೆ ಈ ಯೋಜನೆಗಳು ಮಹತ್ವದ ಕೊಡುಗೆಯನ್ನು ನೀಡುತ್ತವೆ.

ಕನ್ನಡದ ಮೇರುಕೃತಿಗಳನ್ನು ಆರಿಸುವುದು ಸುಲಭದ ಕೆಲಸವಲ್ಲ. ಇಂತಹ ಆಯ್ಕೆಯಲ್ಲಿ ಬೇರೆ ಬೇರೆ ಅಭಿಪ್ರಾಯಗಳಿಗೆ ಸಾಧಾರವಾಗಿಯೇ ಅವಕಾಶವಿರುತ್ತದೆ. ಕನ್ನಡ ನಾಡಿನ ಶ್ರೇಷ್ಠ ಸಾಹಿತಿಗಳು ಈ ಸಮಿತಿಯ ಸದಸ್ಯರಾಗಿದ್ದದ್ದು ಸುದೈವದ ಸಂಗತಿ. ಕೃತಿಗಳನ್ನು ಚರ್ಚಿಸಿ ಮಹತ್ವದ ನಿರ್ಧಾರಕ್ಕೆ ಬಂದ ಸಮಿತಿಯು ಸಾಧ್ಯವಾದ ಕಾರ್ಯವನ್ನು ಸಾಧಿಸಿದೆ. ಇದಕ್ಕಾಗಿ ನಾನು ಸಮಿತಿಯ ಎಲ್ಲ ಸದಸ್ಯರಿಗೂ ಕೃತಜ್ಞನಾಗಿದ್ದೇನೆ.

ಈ ಕಾರ್ಯದ ನಿರ್ವಹಣೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರು ನೆರವಾಗಿದ್ದಾರೆ. ಅವರ ಮತ್ತು ಅವರ ಸಿಬ್ಬಂದಿಯವರ ಅಮೂಲ್ಯ ಸಹಕಾರಕ್ಕೆ ನಾನು ಕೃತಜ್ಞ.

ಕನ್ನಡ ನಾಡಿನ ಮನೆಮನೆಗಳಲ್ಲಿ ಸಾಹಿತ್ಯದ ಮಂಗಳ ದೀಪದ ಬೆಳಕನ್ನು ಹರಡುವ ಈ ಯೋಜನೆಯ ಪೂರ್ಣಪ್ರಯೋಜನವನ್ನು ಕನ್ನಡಿಗರು ಪಡೆದುಕೊಳ್ಳಲಿ ಎಂದು ಹಾರೈಸುತ್ತೇನೆ.

ಸಿರಿಗನ್ನಡಂ ಗೆಲ್ಗೆ !

ಎಲ್.ಎಸ್. ಶೇಷಗಿರಿ ರಾವ್
ಅಧ್ಯಕ್ಷ
ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

ದಿನಾಂಕ ೧೬.೧೨.೨೦೧೦

ಪ್ರಕಾಶಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ 'ವಿಶ್ವಕನ್ನಡ ಸಮ್ಮೇಳನ'ದ ಅಂಗವಾಗಿ ಸುಮಾರು ನೂರು ಪುಸ್ತಕಗಳನ್ನು ಪ್ರಕಟಿಸಲು ಉದ್ದೇಶಿಸಿರುತ್ತದೆ. ಈ ಯೋಜನೆಯಡಿ ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಈ ಮೂರೂ ಕಾಲಘಟ್ಟಗಳಲ್ಲಿ ರಚನೆಗೊಂಡ, ಕನ್ನಡದಲ್ಲಿ ಮಹತ್ವದ ಕೃತಿಗಳೆಂದು ಪರಿಗಣಿತವಾಗಿರುವ ಪುಸ್ತಕಗಳನ್ನು ಸರ್ಕಾರವು ನೇಮಿಸಿರುವ ಆಯ್ಕೆ ಸಮಿತಿಯು ಮರುಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಸಾಹಿತ್ಯ ಮಾಲೆಯಲ್ಲಿ ಈಗಾಗಲೇ ಇಲಾಖೆಯು ಸಮಗ್ರ ಸಾಹಿತ್ಯ ಪ್ರಕಟಣೆಯಡಿ ಪ್ರಕಟಿಸಿರುವ ಲೇಖಕರ ಕೃತಿಗಳನ್ನು ಪರಿಗಣಿಸಿರುವುದಿಲ್ಲ.

ಕನ್ನಡದ ಮೇರುಕೃತಿಗಳ ಮರುಮುದ್ರಣಕ್ಕೆ ಪುಸ್ತಕಗಳನ್ನು ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಅಧ್ಯಕ್ಷರಾದ ಪ್ರೊ: ಎಲ್.ಎಸ್. ಶೇಷಗಿರಿ ರಾವ್‌ರವರಿಗೆ ಹಾಗೂ ಸಮಿತಿಯ ಸದಸ್ಯರುಗಳಾದ ಡಾ. ಚಂದ್ರಶೇಖರ ಕಂಬಾರ, ಡಾ. ಹಂಪ ನಾಗರಾಜಯ್ಯ, ಡಾ. ಎಂ.ಎಂ.ಕಲಬುರ್ಗಿ, ಡಾ. ದೊಡ್ಡರಂಗೇಗೌಡ, ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ಅರವಿಂದ ಮಾಲಗತ್ತಿ, ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಡಾ. ಪಿ.ಎಸ್. ಶಂಕರ್, ಶ್ರೀಮತಿ ಸಾರಾ ಅಬೂಬಕರ್, ಡಾ. ಪ್ರಧಾನ್ ಗುರುದತ್ತ ಇವರುಗಳಿಗೆ ನನ್ನ ಕೃತಜ್ಞತೆಗಳು. ಈ ಯೋಜನೆಯಡಿ ಮರುಮುದ್ರಣಕ್ಕೆ ಆಯ್ಕೆಯಾಗಿರುವ ಪುಸ್ತಕಗಳ ಮುದ್ರಣಕ್ಕೆ ಅನುಮತಿ ನೀಡಿದ ಎಲ್ಲ ಲೇಖಕರಿಗೂ, ಹಕ್ಕುದಾರರಿಗೂ ಮತ್ತು ಕರಡಚ್ಚು ತಿದ್ದಿದವರಿಗೂ ನನ್ನ ವಂದನೆಗಳು.

ಸದರಿ ಪ್ರಕಟಣಾ ಯೋಜನೆಯ ಪುಸ್ತಕಗಳನ್ನು ಹೊರತರಲು ಸಹಕರಿಸಿದ ಶ್ರೀ ಎಚ್. ಶಂಕರಪ್ಪ, ಜಂಟಿ ನಿರ್ದೇಶಕರು, (ಸು.ಕ.), ಶ್ರೀಮತಿ ವೈ.ಎಸ್.ವಿಜಯಲಕ್ಷ್ಮಿ, ಸಹಾಯಕ ನಿರ್ದೇಶಕರು ಹಾಗೂ ಪ್ರಕಟಣಾ ಶಾಖೆಯ ಸಿಬ್ಬಂದಿಗೆ ನನ್ನ ನೆನಕೆಗಳು. ವಿಶ್ವಕನ್ನಡ ಸಮ್ಮೇಳನದ ಲಾಂಛನವನ್ನು ಸಿದ್ಧಪಡಿಸಿಕೊಟ್ಟ ಹಿರಿಯಕಲಾವಿದರಾದ ಶ್ರೀ ಸಿ. ಚಂದ್ರಶೇಖರ ಅವರಿಗೂ ನನ್ನ ನೆನಕೆಗಳು ಹಾಗೂ ಈ ಪುಸ್ತಕಗಳನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುವ ಮಯೂರ ಪ್ರಿಂಟ್ ಆ್ಯಡ್ಸ್‌ನ ಮಾಲೀಕರಾದ

ಶ್ರೀ ಬಿ.ಎಲ್. ಶ್ರೀನಿವಾಸ್ ಮತ್ತು ಸಿಬ್ಬಂದಿ ವರ್ಗದವರಿಗೂ ನನ್ನ ನೆನಕೆಗಳು.

ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಓದುಗರಿಗೆ ಹಲವಾರು ವರ್ಷಗಳಿಂದ ದೊರಕದೇ ಇದ್ದ ಎಷ್ಟೋ ಪುಸ್ತಕಗಳು ಲಭ್ಯವಾಗುತ್ತಿರುವುದು ಹೆಮ್ಮೆಯ ಸಂಗತಿ. ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಸಾಹಿತ್ಯಾಭಿಮಾನಿಗಳಿಗೆ ಅಕ್ಷರದಾಸೋಹ ನಡೆಸುವ ಆಶಯ ನಮ್ಮದು. ಈ ಕೃತಿಗಳನ್ನು ಕನ್ನಡಿಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಮನು ಬಳಿಗಾರ್

ದಿನಾಂಕ ೧೧.೦೧.೨೦೧೧

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

ಅಧ್ಯಕ್ಷರು
ಪ್ರೊ. ಎಲ್.ಎಸ್. ಶೇಷಗಿರಿರಾವ್

ಸದಸ್ಯರು
ಡಾ॥ ಚಂದ್ರಶೇಖರ ಕಂಬಾರ
ಡಾ॥ ಎಂ.ಎಂ. ಕಲಬುರ್ಗಿ
ಡಾ॥ ದೊಡ್ಡರಂಗೇಗೌಡ
ಡಾ॥ ಅರವಿಂದ ಮಾಲಗತ್ತಿ
ಡಾ॥ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ
ಡಾ॥ ಪ್ರಧಾನ್ ಗುರುದತ್ತ
ಡಾ॥ ಹಂಪ ನಾಗರಾಜಯ್ಯ
ಡಾ॥ ಎಚ್.ಜೆ. ಲಕ್ಕಪ್ಪಗೌಡ
ಶ್ರೀಮತಿ ಸಾರಾ ಅಬೂಬಕರ್
ಡಾ॥ ಪಿ.ಎಸ್. ಶಂಕರ್

ಸದಸ್ಯ ಕಾರ್ಯದರ್ಶಿ
ಶ್ರೀ ಮನು ಬಳಿಗಾರ್, ಕ.ಆ.ಸೇ.
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ನನ್ನ ಮಾತು

ಕಾವ್ಯ ನನ್ನ ಮೊದಲ ಪ್ರೀತಿ. ಕತೆ, ವಿಮರ್ಶೆ, ನಾಟಕ, ಅನುವಾದ ಮುಂತಾದ ನನ್ನ ಗದ್ಯ ಕೃತಿಗಳಲ್ಲಿಯೂ ಕಾವ್ಯದ ಗಂಧವೇ ಸೂಸುತ್ತಿರುವುದನ್ನು ಆಸಕ್ತರು ಗುರುತಿಸಿದ್ದಾರೆ. ಕನ್ನಡದಲ್ಲಿ ನನ್ನ ಮೊದಲ ಕವನ ಸಂಕಲನ 'ನೀನಾ' ೧೯೬೪ ರಲ್ಲಿ ಪ್ರಕಟವಾಯಿತು. ಅನಂತರ ಈ ವರೆಗೆ ಹತ್ತು ಸಂಕಲನಗಳು ಪ್ರಕಟವಾಗಿವೆ.

ಈಗ ಪ್ರಕಟವಾಗುತ್ತಿರುವುದು ನನ್ನ ಆಯ್ದ ಕವಿತೆಗಳ ಮೂರನೆಯ ಪ್ರಾತಿನಿಧಿಕ ಸಂಗ್ರಹ. ನನ್ನ ಆರಂಭದ ಕೆಲವು ಸಂಕಲನಗಳಿಂದ ಪ್ರೀತಿ, ಪ್ರಣಯದ ವಸ್ತುವನ್ನು ಪ್ರಧಾನವಾಗಿ ಇಟ್ಟುಕೊಂಡು ಮಿತ್ರರಾದ ಡಾ. ಎಚ್. ಎಸ್. ವೆಂಕಟೇಶಮೂರ್ತಿಯವರು 'ಪಟ್ಟಣಶೆಟ್ಟರ ಆಯ್ದ ಕವಿತೆಗಳು' ಎಂಬ ಹೆಸರಿನಿಂದ ೧೯೮೩ ರಲ್ಲಿ ಸಂಪಾದಿಸಿದ್ದರು. ಕರ್ನಾಟಕ ವಿಶ್ವವಿದ್ಯಾಲಯದವರು ಮೂರು ವರ್ಷಗಳ ಅವಧಿಗಾಗಿ ನನ್ನ 'ಅಂತರಂಗದ ಕವನಗಳು' ಎಂಬ ಆಯ್ದ ಕವಿತೆಗಳ ಸಂಗ್ರಹವನ್ನು ಪಠ್ಯವಾಗಿಸಿದ್ದರು. ಅದು ೧೯೯೪ ರಲ್ಲಿ ಪ್ರಕಟವಾಗಿತ್ತು. ಗದುಗಿನ ತೋಂಟದಾರ್ಯ ಮಠದ ಪೂಜ್ಯಶ್ರೀ ಡಾ. ಸಿದ್ಧಲಿಂಗ ಮಹಾಸ್ವಾಮಿಗಳು ನನ್ನ ಮೇಲಿನ ಅಭಿಮಾನ ಮತ್ತು ಪ್ರೀತಿಯಿಂದಾಗಿ ೨೦೦೦ ಜೂನ್‌ದಲ್ಲಿ ಆ ವರೆಗಿನ ನನ್ನ ಎಲ್ಲ ಸಂಕಲನಗಳನ್ನು 'ಪಟ್ಟಣಶೆಟ್ಟಿ ಸಮಗ್ರ ಕಾವ್ಯ' ಎಂಬ ಹೆಸರಿನಿಂದ ಪ್ರಕಟಿಸಿದ್ದರು.

ನನ್ನ ಆಯ್ದ ಕವಿತೆಗಳ ಈ ಸಂಕಲನವನ್ನು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ೨೦೧೧ ರಲ್ಲಿ ಬೆಳಗಾವಿಯಲ್ಲಿ ನಡೆಯಲಿರುವ ವಿಶ್ವ ಕನ್ನಡ ಸಮ್ಮೇಳನದ ಸಂದರ್ಭದಲ್ಲಿ ಪ್ರಕಟಿಸುತ್ತಿರುವುದು ನನಗೆ ಸಂತೋಷವನ್ನುಂಟು ಮಾಡಿದೆ. ಈ ಸಂಕಲನಕ್ಕೆ ಪ್ರೊ. ಓ. ಎಲ್. ನಾಗಭೂಷಣಸ್ವಾಮಿ ಅವರು ಮುನ್ನುಡಿ ಬರೆದದ್ದು ನನ್ನ ಸಂತೋಷವನ್ನು ಹೆಚ್ಚಿಸಿದೆ. ಪ್ರಾಮಾಣಿಕ ವಿಮರ್ಶಕರಾಗಿರುವ ಅವರು ಸ್ವತಃ ಒಂದು ಕವಿತೆಯಂತಿದ್ದಾರೆ. ಅವರು ತಮ್ಮ ನಿಬಿಡ ವ್ಯಸ್ತತೆಯಲ್ಲಿಯೂ ನನ್ನ ಕವಿತೆಗಳ ಬಗ್ಗೆ ಕೆಲವು ಮಾತು ಬರೆದಿದ್ದಾರೆ. ಸ್ವಾಮಿ ಅವರಿಗೆ ಕೃತಜ್ಞತೆಯ ವಂದನೆಗಳು.

ಪ್ರಸ್ತುತ ಸಂಕಲನದ ಪ್ರಕಟಣೆಗೆ ಕಾರಣರಾದ ಎಲ್ಲ ಮಿತ್ರರನ್ನು ನೆನೆಯುವ ಈ ಸಂದರ್ಭದಲ್ಲಿ, ಸದಾ ಕಾಲ ನನ್ನ ಕಾವ್ಯಕ್ಕೆ ಪ್ರೇರಕ ಶಕ್ತಿಯಾಗಿ, ಅರ್ಥವಾಗಿ, ಬೆಳಕಾಗಿ ನುಡಿಯುತ್ತಿರುವ ಎಲ್ಲವನ್ನೂ ಎಲ್ಲರನ್ನೂ ಪ್ರೀತಿ, ಅಭಿಮಾನ, ಆದರದಿಂದ ನೆನೆಯುತ್ತೇನೆ.

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ,
ಧಾರವಾಡ – ೫೮೦ ೦೦೪
೨೮. ೦೧ ೨೦೧೧

–ಸಿದ್ಧಲಿಂಗ ಪಟ್ಟಣಶೆಟ್ಟಿ

ಮುನ್ನುಡಿ

ಕವಿ ಸಿದ್ಧಲಿಂಗ ಪಟ್ಟಣಶೆಟ್ಟಿಯವರು ಹಿರಿಯರು. ತಮ್ಮ ಆಯ್ದ ಕವಿತೆಗಳೊಡನೆ ನನ್ನ ಮಾತನ್ನು ಸೇರಿಸಬೇಕೆಂದು ಬಯಸಿದ್ದಾರೆ. ಅದು ಅವರ ಪ್ರೀತಿ, ಅಭಿಮಾನ.

ಈಗ ಮತ್ತೆ ಮೊದಲಿಗೆ ಓದಿದ್ದು ಎಪ್ಪತ್ತರ ದಶಕದಲ್ಲಿ, ನನ್ನ ಹರೆಯದ ಕಾಲದಲ್ಲಿ, ಓದಿ ನೆನಪಿದ್ದ ಕವಿತೆಗಳನ್ನು, ಹಾಗೆ ನೆನಪಿದ್ದ ಕವಿತೆಗಳೊಡನೆ ಅವರೇ ಆಯ್ದಿರುವ ಉಳಿದ ಕವಿತೆಗಳೂ ಈ ಓದಿನಲ್ಲಿ ಸೇರಿಕೊಂಡು ಪಟ್ಟಣಶೆಟ್ಟಿಯವರ ಕವಿತೆಯ ಕ್ಯಾನ್‌ವಾಸು, ಅರುವತ್ತರ ದಶಕದ ಮಧ್ಯ ಭಾಗದಿಂದ ಗುರುತಿಸಲಾಗುವ ಕನ್ನಡ ಕಾವ್ಯದ 'ಸಂಕ್ರಮಣ' ಕಾಲದ ಚಿತ್ರ, ಕವಿತೆಯಿಂದ ನಾನು ಈಗ ಅಪೇಕ್ಷಿಸುವ ಸಂಗತಿ, ಎಲ್ಲವೂ ಸೇರಿಕೊಂಡು ಈ ಕೆಲವು ಮಾತು ರೂಪ ತಳೆದಿವೆ.

'ಕ್ಯಾನ್‌ವಾಸು' ಅನ್ನುವ ಮಾತು ಬಂತು. ಚಿತ್ರಕಾರ ಹಾಗೆ ಪಟ್ಟಣಶೆಟ್ಟಿಯವರ ಆರಂಭ ಕಾಲದ ಕವಿತೆಗಳಲ್ಲಿ ಮುಖ್ಯ ರೂಪಕ. ಅದಿರಲಿ. ಕ್ಯಾನ್‌ವಾಸು ಎಷ್ಟೇ ದೊಡ್ಡದಾದರೂ ಬದುಕಿನಷ್ಟು ದೊಡ್ಡದಾಗದು. ಹಾಗೊಮ್ಮೆ ಬದುಕಿನಷ್ಟೇ ದೊಡ್ಡದಾದರೆ ಅಲ್ಲಿ ಮೂಡಿದ್ದು ಚಿತ್ರವಾಗಿ ಉಳಿಯುವುದೇ ಇಲ್ಲ.

೧೯೬೪ ರಲ್ಲಿ ಪ್ರಕಟವಾದ **ನೀನಾ** ಕಣ್ಣಳತೆಗೆ ಒದಗುವ ಕ್ಯಾನ್‌ವಾಸಿನ ಮೇಲೆ ಬಿಡಿಸಿದ ಪ್ರಖರ ಚಿತ್ರ. ಅಷ್ಟೇ ಅಲ್ಲ, ಪಟ್ಟಣಶೆಟ್ಟಿಯವರ ಮುಂದಿನ ಕವಿತೆಗಳ ಸ್ಕೆಚ್ಚುಗಳೂ ಭಾವರೇಖೆಗಳಾಗಿ ಇಲ್ಲಿ ಮೂಡಿವೆ. ನೀನಾ ಅನ್ನುವ ಶೀರ್ಷಿಕೆ 'ನೀನಾ!' ಅನ್ನುವ ಆಶ್ಚರ್ಯ, 'ನೀನಾ?' ಅನ್ನುವ ಪ್ರಶ್ನೆ ಮತ್ತು 'ನೀ–ನಾ, ನೀನು ಮತ್ತು ನಾನು' ಎಂದು ತಮ್ಮ ಕವಿತೆಯ ಸೀಮೆಯನ್ನು ಗುರುತಿಸುವ ಗಡಿ ಕಲ್ಲು ಎಲ್ಲವೂ ಹೌದು. ಪಟ್ಟಣಶೆಟ್ಟಿಯವರ ಇಲ್ಲಿನ ಅತಿ ಹೆಚ್ಚು ಕವಿತೆಗಳಲ್ಲಿ ಮಾತಾಡುತ್ತಿರುವ ವ್ಯಕ್ತಿ ಮತ್ತು ನೀನು ಅನ್ನುವ ಇನ್ನೊಂದು ವ್ಯಕ್ತಿಯ ಸಂಬಂಧದ ವಿವಿಧ ವರ್ಣಗಳೇ ಮುಖ್ಯ. ನೀನು ಅನ್ನುವುದೇ ಇಡೀ ಲೋಕ, ಇಡೀ ಬದುಕು, ಮತ್ತೆ ನಾನು ಕೂಡಾ ಅನ್ನುವ ದನಿ ಕೇಳುತ್ತದೆ. ಈ ಭಾಗದ ಎಲ್ಲ ೨೩ ಕವಿತೆಗಳ ಪ್ರೇರಣೆ, ವಸ್ತು ಮತ್ತು ಉದ್ದೇಶ 'ನೀ' ಮಾತ್ರವೇ. ಹರೆಯ ಹೊಸದಾಗಿರುವಾಗ 'ನೀನು' ಮೂಡಿಸುವ ಆಶ್ಚರ್ಯ, ಪ್ರಶ್ನೆ, ಭಯ, ಮತ್ತು ಕೊಡುವ ನೋವು ಇವೆಲ್ಲ ಅತ್ಯಂತ ಮೊನಚಾಗಿಯೂ ಇರುತ್ತವೆ, ಅತ್ಯಂತ ಪ್ರಾಮಾಣಿಕವೂ ಆಗಿರುತ್ತವೆ.

'ನಿನ್ನ ಆಗಮನಕೆಂದೆ / ಆಕಾಶಗಂಗೆಯನು / ಹಾಲ್ಜೇನುಗಳಲದ್ದಿ ನಿರ್ಮಿಸಿದ್ದೆ' ಅನ್ನುವ ಹಾಗೆ ನಿನಗಾಗಿ ನಾನು ಮಾಡಲಾಗದ ಅಸಾಧ್ಯ ಈ ಸೃಷ್ಟಿಯಲ್ಲಿ ಯಾವುದೂ ಇಲ್ಲ ಅನ್ನುವ ಅದಮ್ಯ ವಿಶ್ವಾಸವೂ, 'ನಿನ್ನ ಮರೆಯೂs ಮಾತು ಮರೆತುಬಿಡು ನೀನು' ಅನ್ನುವ ಹಾಗೆ ಇವತ್ತಿನ ಈ ತೀವ್ರ ಸ್ಥಿತಿಯೇ ಬದುಕಿನುದ್ದಕ್ಕೂ ಇರುತ್ತದೆ ಅನ್ನುವ ಅಚಲ ನಂಬಿಕೆಯೂ, 'ಕಣ್ಣ ಗುಡ್ಡಿಗಳ ಹಿಲಾಲನ್ನೇ ಹಿಡಿದೇನು' ಅನ್ನುವ ಹಾಗೆ ತಾನು ನೋಯುತ್ತಾ ಆ ನೋವೇ ಸುಖ ಅನ್ನುವ ಉತ್ಪ್ರೇಕ್ಷೆಯೂ ತೀರ ಸಹಜ. ಈ ಎಲ್ಲ ಉನ್ಮಾದ ಉದ್ವೇಗ ಉದ್ರೇಕ ನೋವು ಇತ್ಯಾದಿಗಳೂ ಆ ವಯಸ್ಸಿಗೆ ತೀರ ತೀರ ಸಹಜವೇ ಹೌದು. ಇದರೊಡನೆ ರೂಪಕಗಳನ್ನು ಸಮರ್ಥವಾಗಿ ಹೊಂದಿಸುವ ಕೌಶಲವೂ, ಭಾಷೆಯನ್ನು ಗಾಯಕ್ಕೆ ಹಚ್ಚುವ ಮುಲಾಮಿನ ಹಾಗೆ ಬಳಸುವ ಶಕ್ತಿಯೂ ಸೇರಿದರೆ ಎಲ್ಲ ಹದಿಹರೆಯದವರ ಎದೆಯಾಳದ ಮಾತು ಆಗಿಬಿಡುತ್ತವೆ ರಚನೆಗಳು. ಕನ್ನಡದಲ್ಲಿ ಬಿ. ಆರ್. ಲಕ್ಷ್ಮಣರಾವ್ ಮತ್ತು ಸಿದ್ಧಲಿಂಗ ಪಟ್ಟಣಶೆಟ್ಟಿ ಇಬ್ಬರೂ ಇಂಥ ಹಲವು ರಚನೆಗಳನ್ನು ಮಾಡಿದ್ದಾರೆ. **ನೀನಾ** ಸಂಕಲನದ ಭಾಷೆ ನವೋದಯ ಕವಿತೆಯ ಬಳಕೆಗಳು ನವ್ಯದ ರೂಪಕನಿಷ್ಠ ಮನೋಧರ್ಮದೊಡನೆ ಬೆರೆತು ರೂಪುಗೊಂಡಂತೆ ಕಾಣುತ್ತದೆ.

ಆದರೆ ಹೊಸ ಹರೆಯದ ಭಾವ ಎಷ್ಟು ತೀವ್ರವೋ ಅಷ್ಟೇ ಪರಿಮಿತವೂ ಆದದ್ದು. ಅದನ್ನೇ ನೆಚ್ಚಿಕೊಂಡು ಬದುಕಿನ ಉಳಿದೆಲ್ಲ ಸಂಗತಿಗಳನ್ನೂ ತನ್ನ ರಚನೆಯಿಂದ, ಮನಸ್ಸಿನಿಂದ ದೂರವಿಟ್ಟು ಕವಿ ಹೆಚ್ಚಿನದನ್ನು ಸಾಧಿಸಲಾಗದು.

ಎರಡನೆಯ ಸಂಕಲನ **ಔರಂಗಜೇಬ** (೧೯೬೭) ದಿಂದ ಆಯ್ದ ಕವಿತೆಗಳಲ್ಲಿ ನನ್ನೆದೆಯ ಕಳವಳದ / ತಳಮಳವನೆಲ್ಲ ಹರವಿಬಿಟ್ಟಿದ್ದೇನೆ. / ಮಾರಲಿಟ್ಟಿದ್ದೇನೆ. ಕೊಳ್ಳುವಿರ?' ಅನ್ನುವ ನಾ–ನೀಗಳಲ್ಲದ ಹೊರ ಜಗತ್ತಿನ ಹಂಬಲ ಕಾಣುತ್ತದೆ. ಇತಿಹಾಸದ ಕಡೆಗೆ ಹೊರಳುವ ಸಣ್ಣ ಸೂಚನೆ ಇದೆ. ಆದರೂ ಏಕಾಂಗಿತನ, ಅನಾಥಭಾವ ಇವುಗಳದೇ ಹೆಚ್ಚಿನ ಪಾಲು ಈ ಕವಿತೆಗಳಲ್ಲಿ. ಇಲ್ಲಿನ ಔರಂಗಜೇಬ ಸ್ವಗತದ ಮೂಲಕ ತಾನೆಂಥವನು ಅನ್ನುವುದನ್ನು ಅನಾವರಣ ಮಾಡಿಕೊಳ್ಳುತ್ತಾನೆ. ನನ್ನ ನೋವು, ನನ್ನ ಸಂಶಯ, ನನ್ನ ಒಂಟಿತನ, ನನ್ನ... ಹೀಗೆ ನಾನು ಅನ್ನುವ ವ್ಯಕ್ತಿತ್ವದ ಚಡಪಡಿಕೆಗಳೇ ತುಂಬಿರುವ ಆಸ್ಥಾನ. ಈ ನೋವು, ಸಂಶಯ, ಒಂಟಿತನಗಳನ್ನೇ ಸುಖಿಸುವ ಮನೋಧರ್ಮವಿದೆಯೋ, ಅಥವಾ ಆ ಕಾಲದಲ್ಲಿ ತೀರ ಪ್ರಚಲಿತವಾಗಿದ್ದ ನವ್ಯ ಕಾವ್ಯದ ಆಸಕ್ತಿ ಹೀಗೆ ಬರೆಯಲು ಪ್ರೇರಣೆ ಕೊಟ್ಟಿದೆಯೋ, ಅಂತೂ ಇಲ್ಲಿನ ಕವಿತೆಗಳಲ್ಲಿ 'ರಾಜಗುವರನ ಶೀವಿಯಲ್ಲಿ ನಡೆಯುತ್ತ / ಸೈಕತ–ಲೋಕದ ರಾಜಮಾರ್ಗದ ಮೇಲೆ / ಬಾಗಿ ನಡೆದಿದ್ದೇನೆ' ಅನ್ನುವ ಹತಾಶ,

ಅಸಹಾಯಕ, ದುರ್ಬಲ ಮನುಷ್ಯನ ಮಾತುಗಳು ಕೇಳಿಸುತ್ತವೆ. ಈಗ ಓದಿದರೆ ಸಹಾನುಭೂತಿಗಿಂತ ಹೆಚ್ಚಾಗಿ ಮರುಕ, ಕನಿಕರದ ಭಾವಗಳು ಮೂಡುತ್ತವೆ. ದೀರ್ಘಕಾಲ ಕಾಯಿಲೆ ಬಿದ್ದವರು ತಮ್ಮ ನರಳಾಟವನ್ನೇ ಸುಖಿಸುವ ಹಾಗೆ, ತೀರ ತಮ್ಮನ್ನು, ತಮ್ಮನ್ನು ಮಾತ್ರವೇ ಕೇಂದ್ರವಾಗಿಟ್ಟುಕೊಂಡು ಯೋಚನೆ ಮಾಡಿಕೊಳ್ಳುವ ಹಾಗೆ ಕಾಣುತ್ತದೆ. ಈಗ ಓದುವಾಗ ಈ ಕವಿತೆಗಳು ಅಷ್ಟು ಇಷ್ಟವಾಗಲಿಲ್ಲ. ಏಕಾಂಗಿತನ, ಅಸಹಾಯಕತೆ ಇವೆಲ್ಲ ಮನುಷ್ಯನ ಮೂಲಭೂತ ಸ್ಥಿತಿಯೇ ಇರಬಹುದು. ಆದರೆ ನಮ್ಮ ಅನುಭವಕ್ಕೆ ಸಂಚಾರಿಭಾವಗಳಾಗಿ ಮಾತ್ರ ಆಗಾಗ ಬಂದು ಹೋಗುತ್ತವೆ, ಭ್ರಮೆಯೇ ಆಗಿದ್ದರೂ ಬದುಕು ನಮ್ಮನ್ನು ಸೆಳೆಯುತ್ತದೆ. ಬದುಕಿನ ಸೆಳೆತಕ್ಕಿಂತ ಸ್ವವೇದನಾತಲ್ಲೀನ ಸ್ಥಿತಿಯ ರಚನೆಗಳಾಗಿ ಕಾಣುತ್ತವೆ ಇವು. ಈ ಭಾಗದ ಕವಿತೆಗಳಲ್ಲಿ 'ನೆನಪ ಗಂಧರ್ವರು' ಮಾತ್ರ ಮನಸ್ಸು ತುಂಬುತ್ತದೆ. ಬೇಂದ್ರೆಯವರ 'ಯಾರಿಗೂ ಹೇಳೋಣ ಬ್ಯಾಡ' ಕವಿತೆ ಅತ್ಯುತ್ತಮ ನಿದರ್ಶನವಾಗಿರುವ ಪ್ರಬುದ್ಧತೆಯ ಎಚ್ಚರವನ್ನಿಟ್ಟುಕೊಂಡೂ ಬಾಲ್ಯದ ಮುಗ್ಧ ಸುಖಕ್ಕೆ ಹಿಂದಿರುಗುವ ಆಸೆಯ ಹಲವು ಕವನಗಳು ಕನ್ನಡದಲ್ಲಿವೆ. ಪಟ್ಟಣಶೆಟ್ಟರ 'ನೆನಪ ಗಂಧರ್ವರು' ಕೂಡ ಆ ಬಗೆಯ ಒಂದು ಒಳ್ಳೆಯ ರಚನೆ.

೧೯೭೬ ರಲ್ಲಿ ಪ್ರಕಟವಾದ **ಪರದೇಸಿ ಹಾಡುಗಳು** ಸಂಕಲದಿಂದ ಆಯ್ದಿರುವ ಕವಿತೆಗಳಲ್ಲಿ ಹೊಸದೊಂದು ಆಯಾಮ ಸೇರಿಕೊಂಡದ್ದು ಕಾಣುತ್ತದೆ. ಅದು ಸುತ್ತಲ ಸಮಾಜದ ಬಗ್ಗೆ, ಲೋಕದ ಬಗ್ಗೆ ಇರುವ ಸಿಟ್ಟು ಅಸಹನೆಗಳಿಂದ ಮೂಡಿದ ವ್ಯಂಗ್ಯ, ಕಟಕಿಗಳ ಆಯಾಮ. 'ನಿನ್ನೆ ಭೆಟ್ಟಿಯಾಗಿದ್ದರು' ಕವಿತೆಯಲ್ಲಿ ಸಿಟ್ಟಿಗೆ ಕಾರಣವಾಗಿರುವ ನಡೆ–ನುಡಿಗಳು ಒಂದಾಗದಿರುವ ಜನ, ಅಂಥವರ ಮಧ್ಯ ಬದುಕುತ್ತ 'ಈಗ ಬರೀ ನೆನಪುಗಳ ಇತಿಹಾಸ. / ಇಲ್ಲ, ಬದುಕುವ ಹಕ್ಕು ಉಳಿದಿಲ್ಲ ನನಗೆ / ನಾನು ಸಾವಿನ ಚೀಲ' ಅಂದುಕೊಳ್ಳುವ ನಿರೂಪಕ ಎಪ್ಪತ್ತರ ದಶಕದಲ್ಲಿ ರಾಜಕೀಯ ತಳಮಳದ ನಡುವೆ ಪರಿಮಿತ ವ್ಯಕ್ತಿತ್ವದ ಗೋಡೆ ಒಡೆಯಲಾಗದೆ ನೊಂದ ಮಧ್ಯಮ ವರ್ಗದ ಸೂಕ್ಷ್ಮ ಮನಸ್ಸಿನ ವ್ಯಕ್ತಿಗಳ ಪ್ರತಿನಿಧಿಯಾಗಿ ಕಾಣುತ್ತಾನೆ. 'ಯಾದವಾಡ' ಈ ಸಂಕಲನದಲ್ಲಿರುವ ತೀರ ಬೇರೆಯ ಥರದ, ಪಟ್ಟಣಶೆಟ್ಟಿಯವರ ಹೆಚ್ಚು ಚರ್ಚಿತವಾಗದ ಕವಿತೆ ಎಂದು ತೋರುತ್ತದೆ. ಸ್ಥಳೀಯ ಚರಿತ್ರೆಯಾಗಿ, 'ನಾ' ಅನ್ನುವುದು ಹಿಂದೆ ಸರಿದು, 'ನೀ' ಅನ್ನುವುದರಲ್ಲಿ ಜೀವಂತ ವ್ಯಕ್ತಿಚಿತ್ರಗಳು ಸೇರ್ಪಡೆಗೊಂಡು, ತಮ್ಮ ಪಾಡಿಗೆ ತಾವು ಬದುಕುವ ಜನರೇ ಚರಿತ್ರೆಯಾಗಿ ರೂಪುಗೊಂಡಿದ್ದಾರೆ. 'ಯಾದವಾಡ' ಕವಿತೆಯ ವರೆಗೆ ಜನ ಇಷ್ಟು ಪ್ರಮಾಣದಲ್ಲಿ ಶೆಟ್ಟರ ಕವಿತೆಗಳಲ್ಲಿ ಕಂಡಿರಲಿಲ್ಲ. ಇದ್ದರೂ 'ನಾ' ಅನ್ನುವುದರ

ನೆರಳುಗಳಾಗಿ ಸುಳಿದು ಹೋಗುತ್ತಿದ್ದರು. ಚರಿತ್ರೆ, ತತ್ವ ಇತ್ಯಾದಿಗಳು ಏನೇ ಹೇಳಲಿ, ದೇಶವೊಂದರ ಬದುಕಿನಲ್ಲಿ ಸಾಮಾನ್ಯ ಜನರ ದಿನನಿತ್ಯದ ಆಸಕ್ತಿಗಳೇ ಅವರ ಮನಸ್ಸನ್ನು ತುಂಬಿರುತ್ತವೆ. ಎಪ್ಪತ್ತರ ದಶಕದಲ್ಲಿ ಆದ ಸಾಮಾಜಿಕ ಪಲ್ಲಟಗಳು, ನಿಧಾನವಾಗಿ ಆವರಿಸುತ್ತಿದ್ದ ಭ್ರಷ್ಟತೆ, ಹೊರಳಿಕೊಳ್ಳುತ್ತಿದ್ದ ಪುಟ್ಟ ಊರುಗಳ ಚಿತ್ರಣ ಇವೆಲ್ಲ ದಿನ ಬಳಕೆಯ ಮಾತಿನ ಲಯದಲ್ಲಿ ಒಟ್ಟಿಗೆ ಸೇರಿ ಈ ಕವಿತೆ ಪಟ್ಟಣಶೆಟ್ಟಿಯವರ ಕಾವ್ಯ ಇನ್ನೊಂದು ಮಗ್ಗುಲಿಗೆ ಹೊರಳಿದ್ದನ್ನು ಸೂಚಿಸುತ್ತವೆ.

೧೯೭೭ ರ **ನೂರಾರು ಪದ್ಯ**ಗಳಲ್ಲಿ ಇನ್ನೊಂದು ಹೊಸ ಅಂಶ ಸೇರ್ಪಡೆಯಾದದ್ದು ಗಮನಕ್ಕೆ ಬರುತ್ತದೆ. ಅದು 'ಕಾಲಡಿಗೆ ಕಣ್ಣಡಿಗೆ ನುಣ್ಣನೆಯ ಸಾವು / ನಾನು ಜರ್ರನೆ ಜಾರಿ ತೂಗುತಿಹ ಸಾವು' ಮತ್ತು 'ನಮ್ಮ ಬದುಕಿನ ಒಡೆಯರಲ್ಲ ನಾವು / ಯಾರದೋ ಬದುಕಿನ ನೆರಳು ಮಾತ್ರ' ಅನ್ನುವ ತತ್ವದ ಆಯಾಮ. ಆದರೂ ಇಲ್ಲಿ ಆಯ್ಕೆಯಾಗಿರುವ ಕವಿತೆಗಳಲ್ಲಿ ಗತಕಾಲಕ್ಕೆ ಮರಳುವ ಬಯಕೆ, ಸಮಾಜದ ಬಗ್ಗೆ ಕಟಕಿ ಇವೆಲ್ಲ ಮರೆಯೇನೂ ಆಗಿಲ್ಲ. ಯಾವ ಕವಿ ತಾನೇ ತನ್ನ ವ್ಯಕ್ತಿತ್ವದ ವಿಧಿಯಿಂದ ಹಾಗೆ ಪೂರಾ ಪಾರಾಗಲು ಸಾಧ್ಯ!

೧೯೮೨ ರ **ಮತ್ತೆ ಬಂದಿದ್ದಾಳೆ** ಒಟ್ಟೂ ಭಾರತದ ಸ್ಥಿತಿಗತಿಗಳ ಅವಲೋಕನದ ಹಾಗಿದೆ. 'ಮತ್ತೆ ಬಂದಿದ್ದಾಳೆ'ಯಲ್ಲಿ ಕಾಣುವ ತೀವ್ರವಾದ ಟೀಕೆ, ಮತ್ತೆ ಹಲವು ಕವಿತೆಗಳಲ್ಲಿ ದೇಶದ ಸ್ಥಿತಿಯ ಬಗ್ಗೆ ಇರುವ ವಿಮರ್ಶೆ ಕಾಣುತ್ತಿರುವಾಗಲೇ ಹೊಸ ಕನಸಿನ, ಹೊಸ ಬದುಕಿನ ಸಾಧ್ಯತೆಗಳನ್ನು ಹೇಳುವ ರಚನೆಗಳೂ ಇವೆ. ಆದರೆ ಅವು ಕೇವಲ ಹಂಬಲ ಮಾತ್ರವಾಗಿ ಕೇಳುತ್ತವೆ. ವ್ಯಕ್ತಿಯಾಗಿ ಬಾಲ್ಯಕಾಲಕ್ಕೆ ಹಿಂದಿರುಗುವ ಅಪೇಕ್ಷೆ, ಪ್ರಬುದ್ಧ ಮನುಷ್ಯನಾಗಿ ಭವಿಷ್ಯವು ವರ್ತಮಾನಕ್ಕಿಂತ ಚೆನ್ನವಿರಬಹುದು, ಅಲ್ಲಿಗೆ ತಲುಪಬೇಕು ಅನ್ನುವ ಹಂಬಲ ಎರಡೂ ವಿರುದ್ಧ ಸೆಳೆತಗಳೇ. ಆದರೆ ಈ ವಿರುದ್ಧ ಸೆಳೆತಗಳ ಪ್ರಚೋದನೆ ಮಾತ್ರ ಒಂದೇ: ವರ್ತಮಾನದಿಂದ ಬಿಡಿಸಿಕೊಳ್ಳುವ ಚಡಪಡಿಕೆ.

೧೯೮೬ ರ **ಅಯಸ್ಕಾಂತ** ಸಂಕಲನದಿಂದ ಆಯ್ದ ಕವಿತೆಗಳು ವರ್ತಮಾನದಿಂದ ಪಾರಾಗಬೇಕೆಂಬ ಚಡಪಡಿಕೆಯ ಧ್ವನಿಯನ್ನೇ ಕೇಳಿಸುತ್ತವೆ. 'ಕಾಯುತ್ತಲಿದ್ದಾರೆ ಅಲ್ಲಿ ಬಾಗಿಲದಲ್ಲಿ / ನಾಲ್ವರೂ ನನಗಾಗಿ / ಬಿಡು ನನ್ನ ನಾ ಹೋಗಬೇಕು' ಅನ್ನುವ ಸಾಲುಗಳು ಈ ಪಾರಾಗುವ ಆಸೆ ಸಾವಿನ ಪ್ರೀತಿಯಾಗಿಯೂ ಕೇಳಿಸುತ್ತವೆ. 'ಕೈಯೆತ್ತಿ ಕರೆದರು / ಇಹದ ತುದಿಗೇರಿದರು / ಬಿಡು ನನ್ನ, ನಾನಿನ್ನು / ಅವರಾಗಿ ಅವರೊಳಗೆ ಸೇರಬೇಕು / ಕಥೆಯಾಗಿ ಮಣ್ಣೊಳಗೆ ಮೂಡಬೇಕು' ಪ್ರಾಚೀನರೊಡನೆ ಸೇರಿ, ಭವಿಷ್ಯದಲ್ಲೂ ಉಳಿಯುವ ಅಪೇಕ್ಷೆ;

ಇದು ಕೇವಲ ಬಾಲ್ಯದ ಲೋಕಕ್ಕೆ ಹಿಂದಿರುಗುವ ಬಯಕೆಯಲ್ಲ, ನೆನಪಿನ ಗಂಧರ್ವರನ್ನು ಕರೆಯುವ ಮಾತಲ್ಲ; ಸಾರ್ಥಕವಾಗಿ ಬದುಕು ಸಾಗಿಸಿ ಹೋದವರೊಡನೆ ಒಂದಾಗುವ, ಅವರು ಇಂದು ನಮಗೆ ಸಾರ್ಥಕವೆನಿಸಿದಂತೆ ನಾವೂ ಮುಂದಿನವರಿಗೆ ಸಾರ್ಥಕವೆನಿಸಬೇಕೆಂಬ ತುಡಿತ. ಈ ಆಕರ್ಷಣೆ ಅಯಸ್ಕಾಂತದ ಆಕರ್ಷಣೆ. ಅಯಸ್ಕಾಂತ ಕಬ್ಬಿಣವನ್ನು ಮಾತ್ರ ಸೆಳೆಯುತ್ತದೆ; ನಾನು ಕಬ್ಬಿಣ, ಆದರೆ ನಾಳಿನವರಿಗೂ ಬೇಕಾಗುವ ಚಿನ್ನವಾಗುವ ಆಸೆ ಇರುವವನು, ತುಕ್ಕು ಹಿಡಿಯಲೊಲ್ಲದವನು– ಮನುಷ್ಯನ ಈ ಸಾರ್ವಕಾಲಿಕ ಅಪೇಕ್ಷೆ ಇಲ್ಲಿ ಕವಿತೆಯಾಗಿದೆ.

೧೯೬೪ ರ **ಇಂದು ರಾತ್ರಿಯ ಹಾಗೆ** ಸಂಕಲನದ ಕವಿತೆಗಳು ಭಾವ ಮತ್ತು ನೋಟದ ವೈರುಧ್ಯಗಳನ್ನು ಒಟ್ಟಿಗೆ ಹಿಡಿಯುವ ಹಂಬಲದವು ಅನ್ನಿಸುತ್ತದೆ. ೨೦೦೦ ದ **ಇಷ್ಟು ಹೇಳಿದ ಮೇಲೆ** ಸಂಕಲನದಿಂದ ಆಯ್ದ ಕವಿತೆಗಳಲ್ಲಿ ಬೆಳುದಿಂಗಳೇ ಮುಖ್ಯ ರೂಪಕ. ಬೇಂದ್ರೆ ಕವಿತೆಯ ಬೆಳುದಿಂಗಳು ಇಲ್ಲಿ ಇನ್ನೊಂದು ರೂಪ ತಾಳಿದೆ. ಇದ್ದದ್ದು ಬಯಕೆಯ ಇನ್ನೇನೋ ಆಗಿ ಕಾಣಿಸುವಂತೆ ಮಾಡುವ ಬೆಳುದಿಂಗಳು ಗತಕಾಲದ ನೆನಪುಗಳನ್ನೆಲ್ಲ ಬೇರೆ ರೀತಿಯಲ್ಲಿ ಕಣ್ಣಿಗೆ ತೋರುತ್ತದೆ. 'ಇಷ್ಟು ಹೇಳಿದ ಮೇಲೆ' ಕವಿತೆಯನ್ನು ಕುತೂಹಲಕ್ಕೆಂದು 'ನಿನ್ನ ಮರೆಯೂ ಮಾತು ಮರೆತುಬಿಡು' ರಚನೆಯೊಂದಿಗೆ ಹೋಲಿಸಿ ನೋಡಿ. ಹಾಗೆಯೇ ಕೊನೆಯ ಸಂಕಲದ ಕವಿತೆಗಳನ್ನೂ ನೋಡಿ. ಕವಿ ನಲವತ್ತು ವರ್ಷಗಳ ಸುದೀರ್ಘ ಯಾತ್ರೆಯ ನಂತರ ಮತ್ತೆ ಹೊರಳಿ ನೋಡುವ, ನೋಡಿ ನೋಯುತ್ತ ಸಂಶಯ ಪಡುವ, ಇಷ್ಟೇ ಇನ್ನಾಗದು ಅನ್ನುವ ಶರಣಾಗತಿಯ ಭಾವವನ್ನು ಅನುಭವಿಸುವ ಹಾಗೆ ಈ ರಚನೆಗಳಿವೆ.

ಮ್ಯಾನ್ ಸ್ಪೀಕಿಂಗ್ ಟು ಮೆನ್ ಅನ್ನುವ ಮಾತನ್ನು ಕವಿತೆಯ ಬಗ್ಗೆ ಹೇಳುವುದುಂಟು. ಹೇಳುವುದು ಸರಿ, ಆದರೆ ಕೇಳುವ, ಕೇಳಿದ್ದನ್ನು ಭಾವಿಸುವ, ಭಾವಿಸಿದ್ದನ್ನು ಬದುಕಿನ ಕ್ರಿಯೆಯಲ್ಲಿ ವ್ಯಕ್ತಪಡಿಸುವ ಜನ ಇದ್ದಾರೋ? ಬಸವಣ್ಣನಂಥವನೇ 'ನಾನು ಲಕ್ಷದ ಮೇಲೆ ತೊಂಬತ್ತು ಸಾವಿರ ವಚನ ಹೇಳಿದ್ದು ಬೆಟ್ಟಕ್ಕೆ ನರಿ ಬೊಗುಳಿದಂತಾಯಿತು' ಅನ್ನುತ್ತಾ ಅಲವತ್ತುಕೊಳ್ಳುವುದಿಲ್ಲವೇ? ಸರಿಯೋ ತಪ್ಪೋ, ಒಳ್ಳೆಯದೋ ಅಲ್ಲವೋ, ಮಿಕ್ಕವರಿಗೆ ಬೇಕೋ ಬೇಡವೋ, ಹೇಳದೆ ಇರಲಾರೆ, ಹೀಗಲ್ಲದೆ ಬೇರೆ ಥರ ಹೇಳಲಾರೆ ಅನ್ನುವ ತಿಳಿವಳಿಕೆಯ, ಸಂಶಯದ, ಶರಣಾಗತಿಯ, ಕಳವಳದ, ಹಿಂಜರಿಕೆಯ, ಒಂದಿಷ್ಟು ಹೆಮ್ಮೆಯ ಮಾತು ಈ ರಚನೆಗಳಲ್ಲಿ ಕೇಳುತ್ತವೆ– ಕೇಳಿಸಿಕೊಂಡರೆ.

ಓದುಗನಾಗಿ ಹೀಗೆ ನನ್ನ ಅನಿಸಿಕೆಗಳನ್ನು ತಮ್ಮ ರಚನೆಗಳೊಂದಿಗೆ ಸೇರಿಸಿಕೊಳ್ಳಲು ಬಯಸಿರುವ ಪಟ್ಟಣಶೆಟ್ಟಿಯವರ ಪ್ರೀತಿಗೆ ನಮಸ್ಕಾರ.

– ಓ. ಎಲ್. ನಾಗಭೂಷಣ ಸ್ವಾಮಿ

ಪರಿವಿಡಿ

ಶುಭ ಸಂದೇಶ iii
ಚೆನ್ನುಡಿ iv
ಎರಡು ನುಡಿ v
ಅಧ್ಯಕ್ಷರ ಮಾತು vi
ಪ್ರಕಾಶಕರ ಮಾತು vii
ಆಯ್ಕೆ ಸಮಿತಿ ix
ನನ್ನ ಮಾತು x
ಮುನ್ನುಡಿ xii

೧. ನೀನಾ : ೧೯೬೪
೦೧.೦೧ ದುರಂತ ೧
೦೨.೦೨ ಚಿತ್ರಕಾರ ೩
೦೩.೦೩ ಬೆಂಕಿ ೪
೦೪.೦೪ ಬೇಗೆ ೫
೦೫.೦೫ ಕುದಿವ ಕೂಸು ೬
೦೬.೦೬ ತಾಪ ೭
೦೭.೦೭ ಸ್ವಾಗತ ೮
೦೮.೦೮ ನೀ ಮಾತ್ರ ಬರಲಿಲ್ಲ ೯
೦೯.೦೯ ಗೀತ ೧೦
೧೦.೧೦ ಸಂಜೆ ೧೧
೧೧.೧೧ ನೀ ಬಂದು ಹೋದೊಡನೆ ೧೨
೧೨.೧೨ ಆಲ್ಬಮ್ ೧೩
೧೩.೧೩ ಸಮತೆ ೧೪
೧೪.೧೪ ರಾತ್ರಿಗೆ ೧೬

೧೫.೧೫ ಸೆಳಕು ೧೭
೧೬.೧೬ ಪಾಕಶಾಲೆ ೧೮
೧೭.೧೭ ವ್ಹಿ. ಪಿ. ಆರ್ಡರ್ ೨೦
೧೮.೧೮ ಗೊಳಲಿ ೨೨
೧೯.೧೯ ನಿನ್ನ ಮರೆಯೂs ಮಾತು ೨೪
೨೦.೨೦ ಹಿಂಗಾದಿ ೨೫
೨೧.೨೧ ರಂಗಮಂಚ ೨೬
೨೨.೨೨ ಮಿಡುಕಾಡಬೇಡ ೨೭
೨೩.೨೩ ಮನಸೆ, ಬೇರೆಡೆ ಹೊರಡು ೨೯

೨. ಔರಂಗಜೇಬ : ೧೯೬೭
೨೪.೦೧ ಡೊಂಬರಾಟ ೩೦
೨೫.೦೨ ರಿಣ ೩೦
೨೬.೦೩ ಒಂಟಿ ೩೧
೨೭.೦೪ ಕೊಳ್ಳುವಿರ? ೩೨
೨೮.೦೫ ನೆನಪ ಗಂಧರ್ವರು ೩೩
೨೯.೦೬ ಔರಂಗಜೇಬ ೩೪

೩. ಪರದೇಸಿ ಹಾಡುಗಳು : ೧೯೭೬
೩೦.೦೧ ನನ್ನೆ ಭೆಟ್ಟಿಯಾಗಿದ್ದರು ೩೭
೩೧.೦೨ ಚೀಲ ೩೯
೩೨.೦೩ ಆಗ್ರಾ ಮತ್ತು ತಾಜಮಹಲ್ ೪೦
೩೩.೦೪ ಕಲ್ಪನಾ ಎಂಬ ಗೆಳತಿ ೪೧
೩೪.೦೫ ಪ್ರೀತಿಪಾತ ೪೨
೩೫.೦೬ ಯಾದವಾಡ ೪೩

೪. ನೂರಾರು ಪದ್ಯಗಳು : ೧೯೭೭
೩೬.೦೧ ಕೊಡುಗೆ ೪೫
೩೭.೦೨ ಚಿಲ್ಲರೆ ೪೫
೩೮.೦೩ ಬೆಳಕ ಹಕ್ಕಿ ೪೬
೩೯.೦೪ ಅಂತರ ೪೬
೪೦.೦೫ ವಸ್ತು ೪೭

೪೧.೦೬ ಛಾಯಾಮಾತ್ರರು ೪೮

೫. ಪ್ರತೀಕ್ಷೆ : ೧೯೭೯

೪೨.೦೧ ಸಾವು ೪೯
೪೩.೦೨ ಕವನ ೫೦
೪೪.೦೩ ನಿನ್ನೆ ಸಾಯಂಕಾಲ ೫೧
೪೫.೦೪ ಕವನ ಬರೆಯುವ ಧಂಧೆ ೫೩
೪೬.೦೫ ಸೀಮಾ ೫೫
೪೭.೦೬ ಪರಿವರ್ತನೆ ೫೬
೪೮.೦೭ ಗಂಡಾಂತರ ೫೭
೪೯.೦೮ ರಾಜ್ಯೋತ್ಸವ ಕವಿ ಸಮ್ಮೇಲನದ ಅಧ್ಯಕ್ಷರ ಪೀಠಿಕಾ ಭಾಷಣ ೫೮
೫೦.೦೯ ಧಾರವಾಡದಲ್ಲಿ ೬೦
೫೧.೧೦ ನೆನಪುಗಳು ೬೨

೬. ಮತ್ತೆ ಬಂದಿದ್ದಾಳೆ : ೧೯೮೨

೫೨.೦೧ ಮತ್ತೆ ಬಂದಿದ್ದಾಳೆ ೬೪
೫೩.೦೨ ಶಬ್ದದಾರತಿ ೬೯
೫೪.೦೩ ನಾವು ಭಾರತೀಯರು ೭೦
೫೫.೦೪ ಬನ್ನಿರಣ್ಣ ಬನ್ನಿರಿ ೭೧
೫೬.೦೫ ಇಲ್ಲ ಭಾರತ ಬರಿಯ ಕನಸಿನಲ್ಲಿ ೭೨
೫೭.೦೬ ಅಭಯ ೭೪
೫೮.೦೭ ಬಾರೆ ತಾಯಿ ಹರಸು ಬಾ
೫೯.೦೮ ಬಂದಿಹೆವು ೭೬
೬೦.೦೯ ಸ್ವಪ್ನ ೭೭
೬೧.೧೦ ಬೆಳಗು ೭೮
೬೨.೧೧ ಸುಖ ೭೯
೬೩.೧೨ ಬೇಂದ್ರೆ ೮೦

೭. ಅಯಸ್ಕಾಂತ : ೧೯೮೬

೬೪.೦೧ ಚತುರರು ೮೩
೬೫.೦೨ ಬೆಳಕು ೮೫

೬೬.೦೩ ಚಿಗುರು ೮೭
೬೭.೦೪ ಕರುಳ ವಿಳಾಸ ೮೭

೮. ಇಂದು ರಾತ್ರಿಯ ಹಾಗೆ : ೧೯೯೪

೬೮.೦೧ ಆಮಂತ್ರಣ ೯೦
೬೯.೦೨ ಹಾಡು ೯೨
೭೦.೦೩ ಅರ್ಥ ೯೩
೭೧.೦೪ ಕನಸು ೯೪
೭೨.೦೫ ಅಕ್ಕರೆ ೯೬
೭೩.೦೬ ಸರ್ವಜ್ಞ ೯೭

೯. ಇಷ್ಟು ಹೇಳಿದ ಮೇಲೆ : ೨೦೦೦

೭೪.೦೧ ಈ ಬದುಕು ೧೦೦
೭೫.೦೨ ನಂಟು ೧೦೧
೭೬.೦೩ ನನ್ನ ಬೆಳದಿಂಗಳು ೧೦೧
೭೭.೦೪ ಮಾಯದಂಥಾ ಬೆಳದಿಂಗಳ ೧೦೩
೭೮.೦೫ ಹುಡುಕಾಟ ೧೦೮
೭೯.೦೬ ಕಂಪ್ಯೂಟರ್ ಕವಿತೆ ೧೧೨
೮೦.೦೭ ಇಷ್ಟು ಹೇಳಿದ ಮೇಲೆ ೧೧೪

೧೦. ಅಪರಂಪಾರ : ೨೦೦೫

೮೧.೦೧ ಅಪರಂಪಾರ ೧೧೫
೮೨.೦೨ ಬಟ್ಟೆ ೧೧೮
೮೩.೦೩ ಮುಂಬಯಿಯ ಆಕಾಶ ೧೨೦
೮೪.೦೪ ಮನಸುಗಳ ಕಟ್ಟು ೧೨೨
೮೫.೦೫ ವಲಸೆ ಹೋಗುವುದಿಲ್ಲ ೧೨೩
೮೬.೦೬ ಸೆಟ್ಟಿಯ ಅಂಗಡಿ ೧೨೪
೮೭.೦೭ ಸಮುದ್ರ ೧೨೯
೮೮.೦೮ ಹಾಡು ಕಳೆದಿದೆ ೧೨೯

೧೧. ಹೊಸ ಹಾಡು ಪಾಡು : ೨೦೧೦

೮೯.೦೧ ಹುಡುಗರೇ ಹೀಗೆ ೧೩೧
೯೦.೦೨ ಸುಂದರಿ ೧೩೩

೯೧.೦೩ ನನ್ನವ್ವ ೧೩೪
೯೨.೦೪ ಸರಕು ೧೩೫
೯೩.೦೫ ಮುಂದಿನ ಮನೆ ೧೩೬
೯೪.೦೬ ಹರಕೆ ೧೪೦

ಆಯ್ದ ಕವಿತೆಗಳು

೧. ನೀನಾ : ೧೯೬೪

೧. ದುರಂತ

ಈ ದುರಂತದಲಿ ನಿನಗೆ ನಾಯಕಿ ಪಟ್ಟ.
ನೀನು ದುಃಖಾಂತಗಳ ಸಫಲ ಅಭಿನೇತ್ರಿ.

ನಾನೊ?
ನೀನು ಸಿಂಹಾಸನವನೇರಿ ಮೆರೆವಾಗ
ಯಾವುದೋ ದೂರದೂರೊಂದರಲ್ಲಿ
ಕವನಗಳ ಬದುಕುತ್ತ
ಅಳಿವ ಸೂರ್ಯನನೆ ದಿಟ್ಟಿಸಿದ ಭೂಪ
ಮೈತುಂಬ ಮೆತ್ತಿ ನಿನ್ನ ಅಂದಿನ ಮೈತ್ರಿ.

ಎದೆಯ ಅಳುಕಿನಲಿ ಮೊನೆಯಾಗಿ ಬಂದಿ ನೀ,
ನಿನ್ನೆದುರು ನಾ ಮೇಣ–ಮುದ್ದೆಯಾದೆ
ಮಧು ಗುಲಾಬಿಯ ಪಕಳೆ, ಮಂದಾರವಾದೆ
ನೆನಪಾಗಿ ಬಂದು ನೀನೊಮ್ಮೆ ಚುಚ್ಚಿದರೂನು
ನನ್ನೆದೆಯ ಬಿಳಿ ಹಾಳೆಗಳ ಮೇಲೆ
ಗಾಯಗೊಂಡ ಕಲೆ ಕವನವಾಗುವುದು.

ಆಗಾಗ ಒಮ್ಮೊಮ್ಮೆ ನೆನೆಸುವೆನು ಮಾತ್ರ
ಕೊನೆಯ ದಿನದಲಿ ನನಗೆ ಪೆನ್‌ಶನ್ ಬಂದ ಹಾಗೆ.
ನಿನ್ನ ನೌಕರಿ ಮಾಡಿ
ಈಗಲೇ ಅರವತ್ತು ದಾಟಿರುವುದು,
ಮಿಲನಗಳ ವೇತನವ ನೀನೇಕೆ ಕೊಟ್ಟೀಯೆ?
ಬೇಡುವಂತಹ ಹೇಡಿಯೂ ನಾನಲ್ಲ.

ಬೆಲೆಯುಳ್ಳ ವೀಣೆಯಲಿ ಬಿಗಿದ ತಂತಿ ನೀ,
ನಿನ್ನ ಬಿಗಿತದಲೆ ಬಾರಿಸಿ ಬಿಡು
ನನ್ನಳಲಿನಳಲನ್ನು,
ನಿನ್ನೆದೆಯ ನೆಳಲನ್ನು.

ನೀನು ಬಿಂಗರಿಯಾಗಿ ಗಿವ್ಣ್‌ ಎಂದು ತಿರುಗಿದರೆ
ನಾನು ನಿದ್ದೀ ಹಿಡಿದು ಹಾಡಿ ಬಿಡುವೆ,
ನಿನ್ನ ಹೊಯ್ದಾಟದಲಿ ನನಗೆಲ್ಲಿ ಶಾಂತಿ?

ಆದರೆಲ್ಲಾ ಕನಸು.
ದುಃಖಾಂತ ನಾಟಕದ ಕೊನೆಯ ದೃಶ್ಯ,
ಬಿರುಗಾಳಿಯಲಿ ಉಲ್ಟಾ ನಿಂದಂತೆ ಛತ್ರಿ.
ನೀನು ದುಃಖಾಂತಗಳ ಸಫಲ ಅಭಿನೇತ್ರಿ!

* * * *

೨. ಚಿತ್ರಕಾರ

ನಿನ್ನ ಎದೆಯೂರಲ್ಲಿ ಬರಗಾಲ ಬಿದ್ದಾಗ
ಗುಳೆ ಹೊರಟ ದರಿದ್ರ ಚಿತ್ರಕಾರನು ನಾನು.

ಭಾವ ಕುಂಚವನು ನಿನ್ನ
ಕಣ್ಣ ಬಟ್ಟಲದ ದಿಟ್ಟಿ ಬಣ್ಣದಲದ್ದಿ
ನಾ ತೆಗೆದ ಚಿತ್ರಗಳನಲ್ಲಿಯೇ ಬಿಟ್ಟಿರುವೆ,
ಚಿತ್ರಗಳ ಛಾಯೆಯನು ಹೊತ್ತು ತಂದಿರುವೆ
ಛಾಯೆಗಳ ಆಭಾಸ ನುಂಗಿ ನಿಂದಿರುವೆ.

ಬೆಳದಿಂಗಳಿನ ಬಿಳಿಯ ಕ್ಯಾನವಾಸಿನ ಮೇಲೆ
ಚಂದ್ರನಲಿ ನಮ್ಮೆರಡು ಬಿಂಬಗಳ ನೋಡಿ
ಅಂದು ನಾ ವರ್ಣಿಸಿದ ಚಿತ್ರಗಳು ಈಗಲೂ
ನಿನ್ನ ಪಡಸಾಲೆಯಲಿ
ನಿನ್ನ ಏಕಾಂತದಲಿ
ಗುನುಗುನಿಸುತಿರಬಹುದು.

ಶಬ್ದಗಳ ಸ್ಟ್ಯಾಂಡು, ಟೇಬಲ್ಲು ಹೊಂದಿಸಿ
ನಾ ತೆಗೆದ ತೈಲ ಚಿತ್ರಗಳು,
ಈ ಕೊಳದ ನಿರ್ಮಲ ಜಲದಿ
ಕಾಲನಿಳಿಬಿಟ್ಟು ಕುಳಿತಿರುವಾಗ
ತಿರುತಿರುಗಿ ಮತ್ತೆ ನೆನಪ ಕೆತ್ತುತಲಿಹವು.

ಕಾಂತಿ ಕುಂಚವ ಹಿಡಿದು ನಿನ್ನ ಚಿತ್ರವ ಬರೆವ
ಹುಚ್ಚು ಹಂಬಲವನ್ನೆ ಮೆಲುಕು ಹಾಕುತಲಿರುವ
ಗುಳೆ ಹೊರಟ ದರಿದ್ರ ಚಿತ್ರಕಾರನು ನಾನು.

* * * *

೩. ಬೆಂಕಿ

ಕಣ್ಣಿನಲಿ ನಭ, ಚಂದ್ರ, ಚಿಕ್ಕೆಗಳು
ಚೆಲ್ಲುವರೆದಿಹವು!
ಮರುಚಣಕೆ
ಚಿಕ್ಕೆಗಳ ಜೋಕಾಲಿ ಜೀಕುತಿಹ ಚಂದ್ರ.

ಮನಸಿನಲಿ ಮಿಡುಕುತಿಹ ಮಿಡಿನಾಗರ
ಕಚ್ಚಿ, ಕೊಚ್ಚಿ ಸೆಳೆಯುವುದೊ
ನಮ್ಮ ವಿಷವನೆ ಹೀರಿ ಹೊರಡುವುದೊ,
ಕೈಯ ಗಡಿಯಾರದಲಿ ಲೆಕ್ಕ–ಪತ್ರ.

ಅಬ್ಬ,
ದೇಹ ಸಿಗರೇಟಿನೊಲು ಉರಿದು ಬಿಡಬಹುದೆ?

.....ಒಮ್ಮೆಲೇ ನಾಟಕಕೆ ಕೊನೆಯ ಅಂಕಿನ ಪರದೆ,
ಕಂಪನಿ ದಿವಾಳಿಯಲಿ ನೂರು ಚೂರು.

ಕಳೆವ ದಿನಗಳೆ ನನಗೆ ಮುರುಕು ಕೈಗೋಲು,
ಒಂದು, ಎರಡು, ಮೂರು...

* * * *

೪. ಬೇಗೆ

ನೂರೇಳು ಮಳೆಗಾಲ ಇಳೆಯಾಳಕಿಳಿದರೂ
ನೀನು ಹಚ್ಚಿದ ಬೇಗೆ ಹೊಗೆಯಾಡುತಿಹುದು.
ಕನಸು ಆಸೆಯ ಬೂದಿ ಬಯಲ ಗಾಳಿಯ ಪಾಲು,
ಜನಕೆ ನಮ್ಮಯ ಬದುಕು ನಗೆಯಾಗುತಿಹುದು.
ಒಮ್ಮೆ ಉರಿದಾರಿರುವ ಹಣತೆ ಉರಿಯಲೆ ಇಲ್ಲ
ಮನಸು ಬರಡಾಗಿಹುದು ಬಲ್ಬು ಸುಟ್ಟಂತೆ,
ಎದೆಯು ಟೈಂಪೀಸಾಗಿ ಟ್ರಿಣ್‌ಟ್ರಿಣಿಸುತಿಹುದು
ಜೀವನವೆ ನರಳಿ ನಿಟ್ಟುಸಿರನಿಟ್ಟಂತೆ.

ನಯನಗಳ ಬಯಲಿನಲಿ ಮನವಾರೆ ಹಾರಾಡಿ
ಯಾವ ಗಾಳಿಗೆ ತೇಲಿ ಹೋಯಿತೋ ಹಕ್ಕಿ
ಭೇರುಂಡ ಮನೆ ಮಾಡಿ ಎದೆಯ ರಕುತವ ಹೀರಿ
ಮಾಯವಾಗಿಹುದಿಂದು ನೆತ್ತಿಯನು ಕುಕ್ಕಿ.

* * * *

೫. ಕುದಿವ ಕೂಸು

ಅತೃಪ್ತಿಯನೆ ನಾನು ನೀರಡಿಸಿ ಕುಡಿದಿರುವೆ
ಹೊಟ್ಟೆ ನಗಾರಿಯೊಲು ಬಿಗಿದು ಹೋಗಿಹುದು
ನೀ ತಿರಸ್ಕರಿಸಿ ಎದ್ದು ಬಾರಿಸಿದಾಗ
ಢಣ ಢಣಣ... ಢಣ ಢಣಣ...
ಕವಿತೆಗಳ ಉಸುರುವೆನು
ನಿನ್ನ ತೃಪ್ತಿಗೆ ಎಂದು.

ಬೆಂಕಿಯನು ಮೈತುಂಬ ಬಳಿದುಕೊಂಡುದರಿಂದ
ಒಳಗೆ ಬೆಂಕಿಯ ರಕುತ ಕತಕತನೆ ಕುದಿಯುತಿದೆ
ತಿಂದ ಅನ್ನದ ರಸವು ಲಾವಾರಸ.

ಮೈಗೆ ಹಚ್ಚಿದ ಗಂಧ,
ಹೂವುಗಳ ಮಕರಂದ,
ನಿನ್ನ ಮುಖ ಮೈ ಅಂದ
ಸೋರಿ ಹೋಗುವುದೆಲ್ಲ
ಆಕಾಶಕೆನೆ ದೊಡ್ಡ ತೂತೊಂದು ಬಿದ್ದು.

ಮಹಾಪೂರದೀ ಭರಭರಾಟದಲಿ
ಬದುಕು ಮೂರಾಬಟ್ಟೆ,
ಕುದಿವ ಸುಣ್ಣದ ಭಟ್ಟಿಯೊಳು ನಡುವೆ
ಸಿಕ್ಕು ಬೋರಾಡುತಿಹ ಕೂಸಿನಂತೆ.

* * * *

೬. ತಾಪ

ಹೊಡಮರಳಿ ಗದಬಡಿಸಿ
ಎದೆಯೊಳಗೆ ನಡುಗುತಿವೆ ಧೂಮಕೇತುಗಳು
ಹೊಯ್ದಾಡಿ ನರಳುತಿವೆ
ನಮ್ಮ ನಡುವಣ ಎಲ್ಲ ಮಿಲನ ಸೇತುಗಳು.

ಸಿಟ್ಟು ಮುಖ ತೋರಿದರೆ, ಸಿಡಿಸಿಡಿದು ಹೋದರೆ
ನನಗಮಾವಾಸ್ಯೆ, ಖಗ್ರಾಸ ಗ್ರಹಣ.
ನೀ ನೂಕಿ ತಳ್ಳಿದರೆ ಭೆಟ್ಟಿ ಬಾಗಿಲವನ್ನು
ನಾನು ದೇಶಾಂತರಕೆ ಹೊರಟೆ, ಭ್ರಮಣ.

ನೀನು ಉರಿಬಿಸಿಲಾಗೆ
ನಾನು ಪುಂಡಿಯ ಧೂಳು,
ನೀ ಕಿಲುಬು ತಾಟಾಗೆ
ನಾನು ಹಳಸಿದ ಕೂಳು.

ನೀ ಬೇಟೆ ಹೊರಟಿರುವ ಹೊನ್ನಿಗದ ಹಿಂಡು
ನಾನೊರಗಿ ಮೈಮರೆತ ಮೊಲದ ದಂಡು.

* * * *

೭. ಸ್ವಾಗತ

ನಿನ್ನ ಆಗಮನಕೆಂದೆ
ಆಕಾಶಗಂಗೆಯನು
ಹಾಲ್ಜೇನುಗಳಲದ್ದಿ ನಿರ್ಮಿಸಿದ್ದೆ.

ಸೌರಭವು ಮನದುಂಬಿ, ಮುನ್ನುಗ್ಗಿ
ದಾರಿಯನು ಉಡುಗಿತ್ತು,
ಕಾತರಿಸಿ ನಿಂದಿತ್ತು.
ಕೋಟಿ ಕಲ್ಪನೆಗಳನು ಹೆಣೆದು ಮಾಲೆಯ ಮಾಡಿ
ಕುಂತಲವ ಸಿಂಗರಿಸಲೆಂದಿದ್ದೆ.

ಎದೆಯೊಳಗೆ ಟುಕುಟುಕು:
'ಬಾ' 'ಬರಲಿ' 'ಬಾ' ಎಂದು.
ಉರಿದು ಚಣ ಹೊತ್ತು ಕಳೆದಿರುವಾಗ
'ತಟ್ ತಟ್ ತಟ್' ತೊಟಕಿಕ್ಕುತಿರುವ
ಈ ನನ್ನ ಹಳೆ ಸ್ಟೋವಿನಂತೆ.

ಸಿಂಗಾರಗೊಂಡಿರುವೆ ನಿನ್ನ ಬಯಕೆಯನುಟ್ಟು
ಹಂಬಲವನುಸುರಿರುವೆ,
ಕನಸು ಕಣ್ಣೆವೆಗಳನು ಅರ್ಧ ತೆರೆದು
ನೀಲ ಗಗನದ ಮಹಾದ್ವಾರವನೆ ತೆರೆದಿರುವೆ,
ಬಾ, ಸ್ವರ್ಣ ಸ್ವಾಗತವು!

* * * *

೮. ನೀ ಮಾತ್ರ ಬರಲಿಲ್ಲ

ನಿನ್ನ ಕಣ್ಣಿನ ಮುಗುಳ್ನಗೆಯ ಸ್ಟೆನ್ಸಿಲ್ ಕಾಪಿಗಳು
ಎದೆಯ ಸೈಕ್ಲೊಸ್ಟೈಲಿನಲಿ ನಿತ್ಯ ನೂರಾರು ಪ್ರತಿ.

ನೀನೆದೆಯ ಕ್ಯಾನವಾಸಿನ ಮೇಲೆ
ಎಳೆದ ಹಲವಾರು ಗೆರೆ,
ಸಾಸಿರದ ಬಣ್ಣಗಳ ಚುಕ್ಕೆ, ಸೊನ್ನೆಗಳು
ಮಿನುಗುತಿವೆ ದಿನ ರಾತ್ರಿ ನೀಲಿಯಂಬರದಲ್ಲಿ.

ಸುಕ್ಕುಗಟ್ಟಿ, ಹಾಲುಕ್ಕಿ, ಸ್ಟೋ ಆರಿ
ಉರಿದ ಬೇಗೆಯ ಮೇಲೆ ಮಳೆಯು ಹುಯ್ದಂತೆ
ನಿತ್ಯ ಸುಡುತಿರುವೆ ಹಸಿ ಬಾಳೆ ದಿಂಡಿನೊಲು.

ಮತ್ತೆ ಹತ್ತತ್ತರವತಾರಗಳ ವಿಷ್ಣು
ಎಷ್ಟು ಸಲ ಮುಗಿಸಿದನೊ, ಪಾಪ.
ನಾನಸಂಖ್ಯ ವಸಂತಗಳನ್ನು
ಶಿಶಿರಗಳ ಕಂದರದಿ ನೂಕಿರುವೆನು,
ನೀ ಮಾತ್ರ ಬರಲಿಲ್ಲ...

* * * *

೯. ಗೀತ

ಮನಸಿನಂಗಳದಲ್ಲಿ ಮತ್ತೆ ಸುಂಟರಗಾಳಿ!

ಧರೆಯ ಅಧರವನದುಮಿ ಮಾವು ಚಿಗಿತವು ಬನದಿ
ಒಂದೊಂದು ಕುಸುಮಕಣ ಕುಣಿಕುಣಿದು ಹೇಳುತಿದೆ
ನಿನ್ನ ಬರವನೆ ಸಾರಿ.

ಮಧುರ ಹೃದಯಗಳೆರಡು ಕೂಡಿದ್ದ ಬಗೆ ನೆನೆದು
ನಭದ ನೀಲಿಯ ರೂಪ ತಾಳಿರುವ ವೇದನೆಯು
ಒರಲುತಿದೆ ಕಿಡಿ ಕಾರಿ.
ಮನಸಿನಂಗಳದಲ್ಲಿ ಮತ್ತೆ ಸುಂಟರಗಾಳಿ!

ಮನೆಯ ಹೂದೋಟದಲಿ ಮೂರು ವರುಷದ ವರೆಗೆ
ಮಲ್ಲಿಗೆಯ ನಗೆ ಬೀರಿ ಮೆರೆದ ಮಲ್ಲಿಗೆ ಬಳ್ಳಿ
ಒಣಗಿ ಬೇಸಿಗೆ ಧೂಳಿ.

ಆ ಮುತ್ತು, ಅಪ್ಪುಗೆಯು ಇಂದು ಕಣ್ಣಿನ ನೀಲಿ
ಬರಿ ಭ್ರಮೆಯು ಎನ್ನಲೇ ಆಗಿ ಹೋದುದಕೆಲ್ಲ?
ಊದು ನೆನಪಿನ ಕಾಳಿ.
ಮನಸಿನಂಗಳದಲ್ಲಿ ಮತ್ತೆ ಸುಂಟರಗಾಳಿ!

* * * *

೧೦. ಸಂಜೆ

ಬುಟ್ಟಿ ತುಂಬಿರುವ ಕವಳೆ ಹಣ್ಣುಗಳನ್ನು ಸುರುವಿದಂತೆ
ಕೆಳಗೆ ಇಳಿವ ಮಳೆ.
ನಕ್ಷೆಯಲಿ ಭಾರತದ ರಾಜ್ಯಗಳ ಬರೆದಂತೆ
ಚೆಲ್ಲುವರಿದಿಹ ಮೋಡ.

ಆಚೆ ಮನೆ ಚಿಕ್ಕ ಮಗು
ಅಕಾರಣವೆ ಸಂತತವು ನಕ್ಕಂತೆ
ಇಳಿಜಾರಿನಲಿ ಆಟವಾಡುವ ಬಿಸಿಲು,
ಅನ್ನದಲಿ ಮಜ್ಜಿಗೆಯ ಸಿಹಿ ಸಾರನುಂಡಂತೆ
ತೊಯ್ದ ನೆಲ.

ಇಲ್ಲಿ ಪೃಥಿವಿಯನೆ
ಚಿಕ್ಕೂ ಹಣ್ಣನೆರಡು ಹೋಳು ಮಾಡಿದ ಹಾಗೆ
ಒಂದು ಪರಡೆಯಲಿ ತೂಗುತಿಹ ಶಾಂತಿ
ಅತ್ತ ಕೋಲಾಹಲದ ತೂಗು–ಕಲ್ಲು.

ಇಲ್ಲಿಯೇ ನಿಲ್ಲು,
ಈ ಅದ್ಭುತ ವಿಚಿತ್ರವನು ನೋಡಿ
ಎಲೊ ಖೋಡಿ
ನಿನ್ನ ವೇದನೆಯ ಮಳೆಹುಳವ ಕೊಲ್ಲು.

ಈ ರಜತರೇಖೆಯನು ದಾಟಬೇಡ,
ನೀ ತಾಳ್ಮೆಗೆಡದಲೇ
ಚಿಂತೆಗಳ ಚಪ್ಪಲ್ಲು ಮೆಟ್ಟಿ ಇಲ್ಲಿಯೇ ನಿಲ್ಲು.

* * * *

೧೧. ನೀ ಬಂದು ಹೋದೊಡನೆ

ನೀ ಬಂದು ಹೋದೊಡನೆ ಮತ್ತೆ ಸ್ವರ್ಗಕೆ ಬೆಂಕಿ
ಹತ್ತು ದಿನಗಳ ವರೆಗೆ.
ಮುಂದೇನು, ಮತ್ತೇನು ಎಂಬ ಪ್ರಶ್ನೆಯ ತಿಂಡಿ
ನನಗೆ ಜೋರಾಜೋರಿ ನೀನು ತಿನಿಸಲೆ ಬೇಡ,
ಲಕ್ಷ ತಾಂಡವಗಳನು ಎಡ ಬೆರಳಿನಲಿ ತುಳಿವೆ
ನಿನ್ನ ನೋಡಿದ ಚಣಕೆ.

ಕತ್ತಲೆಯ ಮೈತುಂಬ ಹೊದ್ದು
ಕೋಟಿ ಕೋಟಿ ತಾರೆಗಳನ್ನು ನುಂಗಿ ಬಿಡುವೆ
ನೀ ಬದಿಯಲಿದ್ದಾಗ.

'ಇರದಾಗ?' ಎಂದೇಕೆ ಸಂಶಯದ ವಿಷ ಕೊಡುವಿ?
'ನೇತಿ ನೇತಿ'ಯ ತತ್ತ್ವ ದೀಪ ನೃತ್ಯದ ಭಂಗಿ
ನೀನು ಕಣ್ಣೆದುರಲ್ಲಿ ಕುಣಿಯುತಿರುವಾಗ.
ಹೆಡ್‌ಲೈಟು ಉರಿವಾಗ ಎದುರೊಬ್ಬಳೇ ನೀನು
ಜಗವೆಲ್ಲ ಹುಲುಹುಲುಃ ಗುಜುಗುಜುಃ ಅಡವಿ.
ನಿನ್ನ ದನಿಯನೆ ಹರಡಿ ಬಿತ್ತರಿಸುತಿಹವು
ಮನೆಮನೆಯ ರೇಡಿಯೋ...

ಇಂದು ಮನಸಿನ ಮನದಿ
ಏಕಿಷ್ಟು ಸಿಂಗಾರ ತಳಿರು–ತೋರಣವೆಲ್ಲ?

* * * *

೧೨. ಆಲ್ಬಮ್

ಮಿದುಳ ಹಿಮಗಿರಿಯಲ್ಲಿ ಹೆಪ್ಪುಗಟ್ಟಿದ ದುಃಖ
ನಿನ್ನ ನೋಡಿದ ಚಣಕೆ ನೂರು ಗಂಗಾ ಯಮುನೆ.

ತಟ್ಟಿ ನನ್ನೆದೆಯನ್ನು ಕಾವಲಿಗೆ ನಿಂತಿಹುದು
ನಿನ್ನ ದಿಟ್ಟಿಯ ತಾಪ,
ಒಳಗೆ ಬಂದಾವೇನು ಕಲುಷ, ತಳಮಳವೆಲ್ಲ
ನಿತ್ಯ ನಿರ್ಮಲ ಹೃದಯ
ನಿನಗೆ ಎಡೆಯಾಗಲಿಕೆ.

ನನ್ನೆದೆಯ ಆಲ್ಬಮದಿ ನಿನ್ನ ಚಿತ್ರಗಳೆಷ್ಟು,
ನಭದಿ ನಕ್ಷತ್ರಗಳು!
ತಿರುತಿರುವಿ ಒಂದೊಂದೆ ನೋಡಿ ಸಾಕಾಗುವುದು
ಕಡಲ ನೀರಳೆದವೊಲು!

ನಿನ್ನ ನೋಟದ ಬನದಿ ಒಂದು ಕಿರಿ ಹೂವು ನಾ,
ಕಿತ್ತು ತಲೆಗಿತ್ತು ಬಿಡು
ಒಮ್ಮೆ ಮೂಸಿಸಿಕೊಂಡು.
ಸುಖದಿಂದ ನಾ ನಕ್ಕು ಮರೆತು ಬಿಡುವೆ....

* * * *

೧೩. ಸಮತೆ

ಜಗದೊಳಗೆ ತುಂಬಿರುವ
ಸೌಂದರ್ಯ ಸಂತೃಪ್ತಿಗಳ ರಾಶಿ ಕಂಡು
ನಾನು ಈರ್ಷೆಯ ಕೂಸು,
ನೀ ವಿರಾಗದ ಮರಿಯು.

ದುಃಖದಚ್ಛೇರು ಕೊಬರಿ ಎಣ್ಣೆಯನು
ಮೈತುಂಬ ಸರಿಯಾಗಿ ದಿನ ಸವರಿಕೊಂಡು
ನೀನು ದೈನ್ಯದ ಬಿಸಿಲ ಕಾಸುತಿರುವಿ,
ನಾನಭಾವದ ಮಳೆಗೆ ತೊಯ್ಯುತಿರುವೆ.

ಹಸಿರ ಕಂಡಾಗೆಲ್ಲ ಹಸಿರಿ, ಚಿಗುರುವ ಮನಸು
ನಾ ನಿನಗೆ, ನೀ ನನಗೆ ತೋಡಿರುವ ಕುಣಿಯೊಳಗೆ
ಶೇಕ್ಸ್‌ಪಿಯರನೆಲ್ಲ ದುರಂತಗಳ ನೋಡಿ
ನನ್ನ ಕವನದ ಮಸಿಗೆ ನೀರು ಸುರಿಯುತಲಿಹುದು,
ನಿನ್ನ ಕಣ್ಣಿನ ಕಳೆಗೆ ಮೆಳೆ ಜಡಿಯುತಿಹುದು!

ಅರಳಿರುವ ಹೂವುಗಳ ಕಂಡೆದೆಯು ಕುಣಿದಾಗ
ಮಿಂಚು ಶಿಖರಗಳನ್ನು ಕಂಡು ಮನ ತಣಿದಾಗ
ನನ್ನ ದೇಹದ ಎಲುವು ಚೂರು ಚೂರು,
ನಿನ್ನ ಮಾಂಸವು ಒಣಗಿ ಉಸುಬು ಉಸುಬು!

ವೇದನೆಯ ಅತಿ ಚಹವ ಮಿತಿಮೀರಿ ಕುಡಿದು
ವ್ಯಥೆಯ ಕಥೆಯನು ಕಕ್ಕಿ
ಅಗ್ನಿಮಂಚದ ಮೇಲೆ ವಿಶ್ರಾಂತಿ ಹೊಂದಿದರೆ
ನಾನು ಕಕ್ಕಾವಿಕ್ಕಿ,
ನೀನೊ? ರೆಕ್ಕೆಯಿಲ್ಲದ ಹಕ್ಕಿ!

ಭೋರ್ಗರೆವ ಕಣ್ಣಿಂದ ಹೀಗೆ ನೀ ನೋಡದಿರು
ಆರ್ಭಟಿಸಿ ನನ್ನನೇ ನಾ ತಿಂದು ಬಿಡುವೆ,
ನನ್ನ ನಿರಾಕೃತಿಗೆ ನೀ ಬೆದರಿಕೊಂಡು
ಜಲಪ್ರಪಾತದ ಗರ್ಭದಂತರವ ಹೊಕ್ಕು
ಕೂಗಬಯಸುವ ಕಿರಿಯ ಇರುವೆಯಾದೀಯೆ,
ಠುಸ್ಸೆನುವ ನಿರ್ವೀರ್ಯ ಫಟಾಕ್ಷಿಯಾದೀಯೆ,
ಬೆಂಕಿ–ಕಂಕುಳದಲ್ಲಿ ಕಪ್ಪುರದ ವಡೆಯಾಗಿ
ನನ್ನೊಡನೆ ನೀನೂನು ಭಸ್ಮವಾದೀಯೆ!

* * * *

೧೪. ರಾತ್ರಿಗೆ

ನಿನ್ನ ನಿಡುದೋಳಿನಲಿ
ಪವಡಿಸಲು ಬರುತಿರುವ ಈ ಪೊಗರ್ಜಾಲವನು
ಎಸೆದು ಬಿಡು ಬೀಸಾಕಿ ಆ ಕೊಳ್ಳದಲಿ,
ಕುತ್ತಿಗೆಯ ಹಿಸುಕಿ ಬಿಡು
ಹಡೆದ ಮಾರ್ಜಾಲ ಮರಿಯ ತಿಂದಂತೆ!

ನಿನ್ನ ಗರ್ಭದಲಿ ಹೊಡಮರಳಿ ಸುಡುತಿರುವ
ಕೋಟಿ ಸೂರ್ಯರನಿಂದು
ನನ್ನೆದೆಯ ನೀರಿನಲಿ ಎದ್ದಿ ತೆಗೆದು ಬಿಡು,
ಇದ್ದಲಿಯ ಮಾಡುವೆನು!

ಸುಮ್ಮನಿರದಿರು ನೀನು,
ಇಂದು ಬದುಕಿನ ಮೌನ ಕೃತಿಗೆ ಬೆಲೆಯಿಲ್ಲ;
ಆಣೆ, ವಚನಗಳೆಲ್ಲ ಇಂದು ಬಾಡಿದ ಹೂವು.
ಹುಚ್ಚನಿಸ್ವಿಟು ಆಡಿದೊಲು
ಮಬ್ಬುಗತ್ತಲೆಯಲ್ಲಿ ನಡೆದ ಈ ಭ್ರಮೆ-ಯಾತ್ರೆ
ಮುಳ್ಳು ಕಲ್ಲನು ಎಡವಿ ಬಿದ್ದು ಬಿಡಲಿ!

ನಕ್ಕು ಬಿಡು ನೋಡಿ,
ಒದ್ದು ಚಿಮ್ಮದನು ಕಾಲ್ಚೆಂಡಿನಂತೆ
ಮತ್ತೆ ಮುಂದಕೆ ಸಾಗು!

* * * *

೧೫. ಸೆಳಕು

ಶ್ರಾವಣದ ಸೆಳಕುಗಳು ಗಾಳ್ಯಾಗ ಹರದಾಂಗ
ತಡತಡದ ಬರತೈತಿ ನೆನಪ ನನಗ.
ಬೆಂಕೀನ ನುಂಗೇನ ಬೆಳತನಕ ಕುಂತೇನ
ಮೈಯೆಲ್ಲ ಸುಣ್ಣಽದ ಭಟ್ಟಿ ಆತ!

ಮನಸೀನ ಬಾಳೀಗೆ ಗಚ್ಚಽನ ಬಡದೈತಿ
ಬೆಳ್ಳಽನ ಸಿಡಿಲೊಂದು ಕಣ್ಣ ಕುಕ್ಕಿ.
ಹರವೀದ ಪಾರಽಜ ಬಳಬಳದ ಹಾಕೇನ
ಮತಮತ್ತ ಹ್ವಾದೀತ ಹೊರಗ ಹೊರಗ!

ದೂರೀನ ಗುಡ್ಡದ ಮ್ಯಾಲೀನ ಬಣದಂಗ
ಮಂಜಾಗೆ ಉಳದೈತೆ ನಿನ್ನ ರೂಪ
ಮತ್ತೊಮ್ಮೆ ಕೂಡೂವ ಆಸೇವ ಹಾಳಾಗಿ
ಸೀಲು ಬಿದ್ದಿರುವಂಥ ಕಾರ್ಡು ಆತ!

ಚಂದಾನ ಕತಿಯಾಗಿ ಆಡವರಿಗನುವಾತ
ನಿನ ಕೂಡ ನಡದಿದ್ದ ಹತ್ತ ಹೆಜ್ಜಿ,
ಇಸ ಆಗಿ ವಾಸಽನಿ ಹಿಡದೈತಿ ನಿನ ಕೂಡ
ನಾ ಅಂದ ತಿಂದಿದ್ದ ನಾಕ ತುತ್ತ!

* * * *

೧೬. ಪಾಕಶಾಲೆ

ತಲೆ–ಪಾಕಶಾಲೆಯಲಿ ಹೊಗೆಯಾಗಿ ಹರಡಿರುವಿ!

ಎದೆಯ ಎಲುಬಿನ ಹಸಿಯ ಬಾಳೆಗಳ ಹೆಚ್ಚಿ ನಾ
ನಿನ್ನೆದುರು ಕುಳಿತು ಇದೊ ಅಡಿಗೆ ಮಾಡುತಲಿರುವೆ,
ಪ್ರತಿಭೆಯೊಗ್ಗರಣೆಯನು ಹಾಕಿ ಕರುಳಳಲಿನಲಿ
ಬೇಡವೆಂದೆನಿಸಿದರು ನಿನ್ನ ಹಾಡುತಲಿರುವೆ

ನೀನೇಕೆ ಮನಸಿನಲಿ ಶಾಂತಿಯನು ಕದಡಿರುವಿ?
ತಲೆ–ಪಾಕಶಾಲೆಯಲಿ ಹೊಗೆಯಾಗಿ ಹರಡಿರುವಿ!

ಮಳೆಯಲ್ಲಿ ತೊಯ್ದರೂ ನೀರಡಿಸಿ ಬಳಲಿರುವೆ
ನಿನ್ನ ರಕ್ಷೆಯ ಕವಚ ಹೊತ್ತು ಸೋಲುತಲಿರುವೆ,
ನಾ ಪ್ರಪಾತದ ಮಿಂಚು ನಗೆ ಹೂತು ಹಾಕಿರುವೆ
ನಿಷ್ಪ್ರಾಣ ಹಿಮಗಿರಿಯನಿಂದು ಹೋಲುತಲಿರುವೆ

ವ್ಯಥೆಯ ಮಸಿಯಿಂದೇಕೆ ನನ್ನ ಕಥೆ ಬರೆದಿರುವಿ?
ತಲೆ–ಪಾಕಶಾಲೆಯಲಿ ಹೊಗೆಯಾಗಿ ಹರಡಿರುವಿ!

ಅಂದು ತೋಳಲಿ ಮೆರೆದ ಚೊಕ್ಕ ಚಂದಿರ ಬಿಂಬ
ಇಂದು ಗ್ರಹಣದ ವಿಷವ ಕುಡಿದು ಹೊರಳಾಡುತಿದೆ,
ಸ್ವಸ್ಥ ದೇಹದ ಕಾಂತಿ ನಿಸ್ತೇಜಗೊಂಡುದಕೆ
ಸನ್ನಿಪಾತವನಪ್ಪಿ ನರಳಿ ತೊಳಲಾಡುತಿದೆ

ಕನ್ನಡಿಯ ಪಾರಜವ ನೀ ತಿಕ್ಕಿ ತೊಳೆದಿರುವಿ,
ತಲೆ–ಪಾಕಶಾಲೆಯಲಿ ಹೊಗೆಯಾಗಿ ಹರಡಿರುವಿ!

ತಿರುಗಣಿಯ ಮಡದಲ್ಲಿ ನನ್ನ ಸುತ್ತಿಸಿ ನಿತ್ಯ

ನಿನ್ನ ಮನರಂಜನೆಯ ಮಾಡಿಕೊಳ್ಳುತಲಿರುವಿ,
ನಿನ್ನಕ್ಷಿಯಂಜನವು ನಕ್ಕು ಕೇಕೆಯ ಹಾಕೆ
ಕೊರೆದು ಕಾಲದ ಚರ್ಮ ಮೂಡಿಕೊಳ್ಳುತಲಿರುವಿ!

ಏಕೆ ಅವಮಾನಿಸುತ ಮುಖಕೆ ಮಸಿ ಬಳಿದಿರುವಿ?
ತಲೆ–ಪಾಕಶಾಲೆಯಲಿ ಹೊಗೆಯಾಗಿ ಹರಡಿರುವಿ!

* * * *

೧೭. ವ್ಹಿ. ಪಿ. ಆರ್ಡರ್

ಕವಿರಾಯ,
ಕಿನಾರೆಯೋಣಿ, ಮಹಪೂರ,
ನದಿ ಬೀದಿ, ಇದೆ ಇದೇ ಜಗತ್ತು.
(ಎಲ್ಲರಿಗೆ ಗೊತ್ತು!)

ಮಾನ್ಯರೆ,
ನನ್ನ ಸದರೀ ವಿಳಾಸಕ್ಕೆ
ನಿಮ್ಮ ಜನರಲ್ ಸ್ಟೋರಿನಿಂದ
ಉತ್ಸಾಹದಿಂದ
ಈ ಕೆಳಗೆ ನಾನು ವಿವರಿಸಲಿರುವ ವಸ್ತುಗಳ
ವ್ಹಿ. ಪಿ. ಪೋಸ್ಟಿನಿಂದ
ದಯವಿಟ್ಟು ಬೇಗನೆ ಕಳಿಸಿ.

ಅಂದು ನಾನೂ ನೀವು ಕೂಡಿ
ನಕ್ಕಿದ್ದ ನಗೆ
ಚೊಕ್ಕ ಅಪ್ಪಟ ಚಿನ್ನ
(*ಗೋಲ್ಡ್ ಕಂಟ್ರೋಲ್ ಆಗ ಇರಲಿಲ್ಲ ಇನ್ನ!*)
ಮೊಟ್ಟಮೊದಲಿನ ಗುಟ್ಟು ಬಟ್ಟಬಯಲು ನಗೆ
ಬಹಳ ಎಚ್ಚರಿಕೆಯಿಂದ ಪೆಟ್ಟಿಗೆಯಲ್ಲಿ
ತಳದಲ್ಲಿ ಮೂಡಿಸಿ ಕಳಿಸಿ.

'ನಿನ್ನ ಹೆಸರೇನೊಲವೆ...?'
'ನಿಮಗೆ ಗೊತ್ತಿಲ್ಲವೆ...?'
ಎಂದೆಲ್ಲ ಕನವರಿಸಿ
ಅದರ ಹಿನ್ನೆಲೆಯಲ್ಲಿ ತಾಳ ಹಾಕಿದ ದನಿಯ
ಕಪ್ಪುರದ ಹೋಳಿಕೆಯಲಿ ನಡುವೆ ಸೇರಿಸಿ ಹಾಕಿ
ಮಿದುವಾಗಿ ಇಟ್ಟು ಬಿಡಿ.
ಇಬ್ಬರೂ ಕೂಡಿ ಸುಮ್ಮನೇ ಕುಳಿತಾಗ
ಎದೆಯ ಮಿಡಿತಗಳೆ ನುಡಿದ ಕವನಗಳನ್ನು

ಮಲ್ಲಿಗೆಯ ಪಕಳೆಯಲಿ ಚೆನ್ನಾಗಿ ಮುದ್ರಿಸಿ.
ತಪ್ಪುಗಳು ಇರದಂತೆ ಎಚ್ಚರಿಕೆ ವಹಿಸುವುದು
ತುಂಬ ಅಗತ್ಯ, ಬಹಳ ಉಚಿತ.
ಮುದ್ರಿಸಿದ ಹಾಳೆಗಳ ಸರಿಯಾಗಿ ಕಟ್ಟಿಟ್ಟು
ಪೆಟ್ಟಿಗೆಯ ನಾಲ್ವೆಡೆಗು ಹೊಂದಿಸಿಟ್ಟು ಬಿಡಿ.

ಅಂದು ನಾ ಬರೆದಿದ್ದ ಪತ್ರಗಳ
ನಡುವೆ ಹಾಕಿದರೊಳಿತು.

ನಿಮ್ಮ ಅಂದಿನ ಎಲ್ಲ ಎಲ್ಲ ಸಾಹಸವನ್ನು
ಆಗ ಕೊಡಿಸಿದ ಸಿಲ್ಕು ಸೀರೆಯಲಿ ಕಟ್ಟಿ
ಚಚ್ಚೌಕು ಮಾಡಿ, ನಡುವೆ ಇಟ್ಟು ಬಿಡಿ.

ನಿಮ್ಮ ಕಣ್ಣಿನ ಕಾಂತಿ ಕುಣಿಕೆಗಳ ಹುರಿ ಹಾಕಿ
ಗಟ್ಟಿ ದಾರವ ಮಾಡಿ
ನಾವಂದು ಉಸುರಿದ್ದ ಉಸುರೆಲ್ಲವನ್ನೂ
ಕಟ್ಟಿ ಮೇಲಿಟ್ಟು ಪೆಟ್ಟಿಗೆಯ ಮುಚ್ಚಿ ಬಿಡಿ.

ಇತ್ತೀಚೆ ಎಂದಾದರೊಮ್ಮೊಮ್ಮೆ ನೆನೆಸಿ
ನೀವತ್ತ ಅಳುವಿನೆಳೆ ಕಬ್ಬಿಣದ ಪಟ್ಟಿಗಳ
ಮೇಲೆ ಬಿಗಿದು ಬಿಡಿ.
ಕೊನೆಗೊಮ್ಮೆ ನಕ್ಕು ನಗು-ಮೆಳೆಯ ಜಡಿದು ಬಿಡಿ.

ಹಾಗಿಡಿ ಹೀಗಿಡಿ ಎಂದುದಕೆ
ದಯವಿಟ್ಟು ತಪ್ಪಾಗಿ ತಿಳಿಯದಿರಿ.

ಶೀಘ್ರ ಕಳಿಸುವಿರೆಂದು ಆಶಿಸುವೆ,
ವಿಶ್ವಾಸವಿರಲಿ.

ಇತಿ ನಿಮ್ಮ,
ನಾನೆ *(ನಿಮ್ಮಾಣೆ, ನನ್ನಾಣೆ,*
ಭಗವಂತನಾಣೆ!)

೧೮. ಗೊಳಲಿ

ನರಗಳನು ಹುರಿಹುರಿ ಹಾಕಿ
ನಿನ್ನ ತೋಳನು ಬಳಸಿ ಗಂಧದಲಿ
ನಾನೆಳೆದು ನಿಂತಾಗ
ಯಾವ ಗಗನದಿ ತೊದಲು ತುಳುಕಾಡಿತೊ....

ನೀನು ಬೆಂಕಿಯ ಪುತ್ರಿ,
ನಾ ಆಜ್ಯದವತಾರವಾಗಿರುವಾಗ
ನಮ್ಮೆದೆ ವಸಂತವನು ನುಂಗಿ
ಯಾವ ಬನದಲಿ ಹಸಿರು ಮಿಡುಕಾಡಿತೊ....

ನಿನ್ನ ಹೆಸರೆತ್ತಿದರೆ
ಹೂವರಳಿ ಗಂಧ ಹೊರಹೊಮ್ಮಿ ಚಿಮ್ಮುತಲಿತ್ತು,
ನನ್ನೆವೆ–ಪತಂಗಕ್ಕೆ ನೀನು ಬಾಲಾಗಸಿಯು
ಭಾವ–ಗಗನದಿ ನಾವಿಬ್ಬರೂ ಹಾರುತಿರೆ
ಯಾವ ದಾರವು ಎಲ್ಲಿ ತೊಡಕಾಯಿತೊ....

ಉಕ್ಕನ್ನು ಬಿತ್ತಿ ಮಲ್ಲಿಗೆಯ ಬೆಳೆದು
ಮಧುರಸವ ಹಿಂಡಿ ದಿನದಿನವು ಕುಡಿದಿಹೆವು.
ನಮಗೆ ತಿಳಿಯದ ಹಾಗೆ
ಏಕೆ ಉಲ್ಕಾಪಾತವಾದ ಹಾಗೆ
ನಮ್ಮ ಬದುಕೆಲ್ಲ ಬರಡಾಯಿತೊ....

ನೀ ಪ್ರವಾಹದ ಗತಿಯ ಗರ್ಭದಲ್ಲಿದ್ದಿ
ನಿಂತ ಮದಡು ಜಲ ಕಲಕಿ ಅರಸಿದೆ ನಾನು.
ನೀ ವಿಚಾರದ ಸುಳಿಯ ಪರದೆಯೊಳಗಡಗಿದ್ದಿ
ನಾನು ವ್ಯವಹಾರದಲಿ ನಿನ್ನ ಬಯಸಿದ್ದೆ.

ನೀನು ನಭ–ನೀಲಿಯಲಿ ನಕ್ಷತ್ರವಾಗಿದ್ದಿ
ಕೆರೆಯ ನೀರಿನ ಬಿಂಬದಲ್ಲಿ ನಾ ನೋಡಿದ್ದೆ.
ಮೆದುಳಿನಲಿ ಸೀತೆಗಿನ್ನೊಮ್ಮೆ ಜನ್ಮವ ನೀಡಿ
ಈ ಹುಚ್ಚು ಮರುಳ ಮನ
ಏಕೆ ರಾಮಾಯಣದಿ ನಿನ್ನ ಹುಡುಕಾಡಿತೊ!

* * * *

೧೯. ನಿನ್ನ ಮರೆಯೂಽ ಮಾತು

ಕಾಳಿಂಗ ಸರ್ಪಗಳ ಹೆಡಿ ಮೆಟ್ಟಿ ಹಾಡೇನು
ಯೌವನವ ಹೆಡಮುರಗಿ ಕಟ್ಟಿ ತುಳಿದಾಡೇನು
ನಿನ್ನ ಮದುವೆಯ ರಾತ್ರಿ ಮೆರವಣಿಗೆಯಾಗುತಿರೆ
ಕಣ್ಣ ಗುಡ್ಡಿಗಳ ಹಿಲಾಲನ್ನೇ ಹಿಡಿದೇನು
ನಿನ್ನ ಮರೆಯೂಽ ಮಾತು ಮರೆತು ಬಿಡು ನೀನು!

ಕರುಳ ಸೀಮಂತ ಮಣಿ ಕುರುಳೊಳಗೆ ಇಟ್ಟೇನು
ತೆಯ್ದು ನನ್ನೆಲುವುಗಳ ಬೆಂಡೋಲೆಯಿಟ್ಟೇನು
ಸರಿಯಾಚೆ ತೊಲಗೆಂದು ನೀ ನೂಕಿ ತಳ್ಳಿದರು
ದೈನ್ಯದಲಿ ನಿನ್ನೆದೆಯ ಬಾಗಿಲವ ತಟ್ಟೇನು
ನಿನ್ನ ಮರೆಯೂಽ ಮಾತು ಮರೆತು ಬಿಡು ನೀನು!

ಡಬಗಳ್ಳಿ ಮೆಳೆಯೊಳಗೆ ಅಳುಅಳುಕಿ ಸತ್ತೇನು
ನನ್ನ ರಕುತವ ಹೀರಿ ಒಳಗೊಳಗೆ ಅತ್ತೇನು
ರಾತ್ರಿಯಂಗಿಯ ತೊಟ್ಟು ಸ್ವರ್ಗ ನರಕದ ಮೆಟ್ಟು
ಮೆಟ್ಟಿ ನಿಮ್ಮನೆ ಕಟ್ಟೆ ದಿನವೂನು ಹತ್ತೇನು
ನಿನ್ನ ಮರೆಯೂಽ ಮಾತು ಮರೆತು ಬಿಡು ನೀನು!

ಕವನಗಳ ಬೋರಂಗಿ ಹಿಡಿಹಿಡಿದು ನಕ್ಕೇನು
ಕುತಗಿ ಮಟ ಕೆಸರಾಗ ಗಕ್ಕನೇ ಸಿಕ್ಕೇನು
ಎಲ್ಲಿ ಹೋದರು ಕೂಡ ಏನಾದರೂ ಕೂಡ
ನಿನ್ನ ನೆನಪಿನ ಅಡವಿ ತಿರುತಿರುಗಿ ಹೊಕ್ಕೇನು
ನಿನ್ನ ಮರೆಯೂಽ ಮಾತು ಮರೆತು ಬಿಡು ನೀನು!

* * * *

೨೦. ಹಿಂಗಾದಿ

ಎಷ್ಟಂತ ಅಸರಂತ ನಿನಗಾಗಿ ಅಳಬೇಕ
ಮಾಡದಲಿ ಮಳಿ ಹನಿಯ ತೀರಿ ಹೋತ
ದೀಪದೆಣ್ಣಿಯನುರಿಯು ಹೀರಿ ಹೋತ
ಹಲಸಿನಽ ತೊಳಿಯಾಗಿ ಕೈಯಿಂದ ಜಾರಿದಿಽ
ಇದಕ ಹತ್ತಿದ ಮಣ್ಣು ಯಾವ ಕಣ್ಣೀರಿಂದ
ತೊಳಿಯಬೇಕ!
ಎಷ್ಟಂತ ಅಸರಂತ ನಿನಗಾಗಿ ಅಳಬೇಕ!

ಮಬ್ಬುಗತ್ತಲದಾಗ ಮಂಜೀನ ಮಳಿಯಾದಿ
ಮಳಿಯಾಗ ಉದುರಿದಽ ಆಣಿಕಲ್ಲ
ಇನ್ನೊಮ್ಮೆ ಬಯಸಿದರ ಪಡೆಯೆನಲ್ಲ!
ಚಿಣಗಿ ಹಾವಿನ ಹಾಂಗ ಕ್ಯಾದೀಗಿ ಬನದಾಗ,
ಮತ್ತ ಮರುಚಣದಾಗ ನೀರುಂಡ ಕೆಂಡದೊಲು
ಹೊಳಿಯದಾದಿ!
ಮಬ್ಬುಗತ್ತಲದಾಗ ಮಂಜೀನ ಮಳಿಯಾದಿ!

* * * *

೨೧. ರಂಗಮಂಚ

ಈ ತುಂಟ ಕಣ್ಣುಗಳ ರಂಗಮಂಚದ ಮೇಲೆ
ನನ್ನೆದೆಯ ಕೌಮಾರ್ಯ ಭೈರವಿಯ ಹಾಡುತಿದೆ!
ಮನೆಯ ಹಿತ್ತಿಲದಲ್ಲಿ ಬಳುಕುತಿಹ ಮಲ್ಲಿಗೆಯು
ಬೆಂದು ಲಾವಾರಸದಿ ತಾರೆಗಳನುಗುಳುತಿದೆ.

ನೀನಿತ್ತ ಹೊರಳಿದರೆ ಟೈಂಪೀಸು ಸಹ ಸ್ತಬ್ಧ.
ನನ್ನೆದೆಯ ಮಾತೇನು, ಇನ್ನುಳಿದ ಜಗವೇನು,
ನೀ ನುಡಿಯತೊಡಗಿದರೆ, ನೀ ನಡೆಯತೊಡಗಿದರೆ
ಇತಿಹಾಸ ಬೆಂಬಿಡಿದು ಓಡೋಡಿ ಬಂದೀತು.

ನಿನ್ನ ನೀಲಿಯ ಸೀರೆ ನೋಡಿ ನಭ ನಾಚಿತ್ತು,
ಶರದ ಪೂರ್ಣಿಮೆ ಮುಖದಿ ತಾಜಮಹಲಿನ ಮೇಲೆ,
ಸುಮನ–ಸಂಪುಟದಲ್ಲಿ ರಾತ್ರಿ ಕೈದಿಯು ಭ್ರಮರ
ಮುಗುಳು ನಗೆ–ಜಾಲದಲಿ ಸಿಕ್ಕ ಹರಿಣಿಯ ಪಾಡು.

ಎಷ್ಟೊಂದು ಸಂಗೀತ, ನಾಟಕಗಳಾದುವೋ
ಈ ತುಂಟ ಕಣ್ಣುಗಳ ರಂಗಮಂಚದ ಮೇಲೆ.
ನನ್ನೆದೆಯ ಕೌಮಾರ್ಯ ಭೈರವಿಯ ಹಾಡುತಿದೆ
ಸಾಗರದ ತೆರೆಗಳನು ಭರದಿಂದ ಬಿಗಿದಪ್ಪಿ.

* * * *

೨೨. ಮಿಡುಕಾಡಬೇಡ

ನಿನ್ನ ಅಂಗಾಲಿನಲಿ ಮದರಂಗಿಯಾದೆ
ಮುಳ್ಳಾಗಲಿಲ್ಲ
– ತಿಕ್ಕಿ ಬ್ರಶ್ಶನು ನೀನು ತೊಳೆಯಬೇಡ!

ಕಣ್ಣಿನಲಿ ಕಾಡಿಗೆ, ಕಾಂತಿ ನಾನಾದೆ
ಕಳವಳದ ಹರಳಾಗಲಿಲ್ಲ
– ಉಜ್ಜಿ ಆ ಚೆಲುವನ್ನು ಕೆಡಿಸಬೇಡ!

ನಿನ್ನ ಮನೆ ತೋಟದಲಿ ಹೂವಾದೆ, ಹುಲುಸಾದೆ
ಹೊಲಸಾಗಲಿಲ್ಲ
– ಒದ್ದು ಝಾಡಿಸಬೇಡ!

ನಿನ್ನ ಕವನಗಳಲ್ಲಿ ಬಸಂತ, ಮೇಘ–ಮಲ್ಹಾರವಾದೆ
ಎಂದಿಗೂ ಹರಿದ ತಂತಿಯ ವೀಣೆ ನಾನಾಗಲಿಲ್ಲ
– ಭೈರವಿಯ ಹಾಡಬೇಡ!

ನಿನ್ನ ಕಾಲಿಗೆ ಗೆಜ್ಜೆ, ಅಂದುಗೆಯ ದನಿಯಾದೆ
ಮೃದು ಸ್ಪರ್ಶವಾದೆ
– ಕುಣಿವುದಕೆ ಒಲ್ಲೆನ್ನಬೇಡ!

ನಾನು ನೀನಾಗುವೆನು
ಕಣ್ಣಂಚಿನಲಿ ಕುಣಿವ ಕಣ್ಣೀರ ಹನಿ ಕಂಡು
– ಒದ್ದೆಯಾಯಿತು ಎಂದು, ಒಜ್ಜೆಯಾಯಿತು ಎಂದು
ಮಿಡುಕಾಡಬೇಡ, ತುಡುಕಾಡಬೇಡ!

ನಾನು
ನೀ ನಕ್ಕ ನಗೆಯಿಂದ ಮಲ್ಲಿಗೆಯ ಸುರಿಮಳೆಯು

ನಿನ್ನ ಬಯಕೆಯ ಕುದುರೆ–ಸುಳಿ ಹಿಡಿದುಕೊಂಡು!
– ಹೆದರಿ ಓಡಿದೆನೆಂದು ಹೇಳಬೇಡ!

ನಿನ್ನ ಬರವನು ಅರಿದು ಊರ ಸಿಂಗರಿಸಿರುವೆ
ದಾರಿ ದಾರಿಗೆ ದೀಪ; ಬಂಗಾರ ಬೆಳಕು
ಮುತ್ತು ರತ್ನಗಳೆಲ್ಲ ಹೆಣೆದು ಕಾಲ್ಕೆಳಗೆ
– 'ಬರೆ ಹೋಗು' ಎಂದು ಕಟು ಉಸಿರಬೇಡ!

ನನ್ನ ಬದುಕಿನ ಕಥೆಗೆ ನೂರು ಬಣ್ಣವ ಹಾಕಿ
ಅಂದ ಅಂದದ ಚಿತ್ರ ಚಿತ್ತಾರ ತೆಗೆದು
ಸೀರೆ ಕುಪ್ಪುಸ ನಿನಗೆ ನೆಯ್ದಿರುವೆನು
– ಹುಲು ಕೊಡುಗೆಯೆಂದು ನೀ ತೆಗಳಬೇಡ!

* * * *

೨೩. ಮನಸೆ, ಬೇರೆಡೆ ಹೊರಡು

ಬೆಳತನಕ ಮಳಿ ಹೊಡೆದು ನಿನ ನೆನಪ ಸುರದೇತಿ
ಎದಿಯ ಕೊರಕಲದಾಗ ನಿನ್ನ ನಗಿ ಕರಗೇತಿ
ಹುಳಿಹುಳಿತು ಚಣಚಣನೆ ಹೊಡೆವ ನನ್ನೆದಿ ನೋಡಿ
ನಿನಗೆ ಜೋಗುಳ ಹಿಡಿವ ನಿದ್ದಿನೂ ಮರಗೇತಿ
ಇದ ನೋಡ ನನ್ನ ಗತಿ!

ನಿನ್ನುಸಿರು ನನ್ನೊಳಗ ಘನವಾಗಿ ಬಂದೇತಿ
ಹಾಡು ಹಾಡಿನ ನಡುವ ನಿನ್ನನs ತಂದೇತಿ!
ದಿನವರಳಿ ಬಾಡುತಿಹ ಹೂವಿನ ರಾಶ್ಯಾಗ
ನಿನ್ನ ತುಟಿಯಲಿ ಕುಣಿವ ಉರಿ ನಗಿಯ ಕಂಡೇತಿ!
ಕೇಳ ನೀ ನನ್ನ ಕತಿ!

ಗುಡಿಯ ಗೋಪುರ ಮ್ಯಾಲ ಹೊನ್ನ ಕಳಸಾ ಹಾಕಿ
ಇಳಿಬೇಕಂದಾಗ ನಿನ್ನ ಕಣ್ಣನು ತಾಕಿ
ಜರ್ರನೇ ಜಾರಿದ್ದೆ ನಿನ್ನ ಪಾದದ ಮ್ಯಾಲ
ಹತ್ತು ಮೊಳ ಸರಿದಾಚೆ ನಿಂತು ನೀ ನಕ್ಕಾಕಿ
ಇನ್ನೇನು ಇದೆ ಬಾಕಿ?

ನಿನ್ನ ನೆನಪs ನೆನಪು, ಭಾಳಂದ್ರ ಗೊಂಬೆರಡು!
ಮತ್ತ ಎಲ್ಲಾ ನನ್ನ ಮುಂದ ಕತ್ತಲ ಹರಡು
ಸಾಕಿನ್ನ ನಿನ್ನ ಕತಿ, ಬರಬರದ ಸಾಕಾತು
ಯಾಕ ಬಯಸುತ್ತಿರುವಿ ಮತಮತ್ತ ನೀ ಬರಡು
ಮನಸೆ, ಬೇರೆಡೆ ಹೊರಡು!

* * * *

೨. ಔರಂಗಜೇಬ : ೧೯೬೭

೧. ಡೊಂಬರಾಟ

ಇಲ್ಲಿ
ಭೂತ ವರ್ತಮಾನಗಳ
ಆಚೆ ಈಚೆ ಎರಡೆರಡು ಗಳ-ಗಳ ನೆಟ್ಟು
ಸೋಲು-ಸರಿಗೋಲು ಕೈಯಲ್ಲಿ ಹಿಡಿದು
ನಿನ್ನ ನೆನಪ-ಹಗ್ಗದ ಮೇಲೆ ನಡೆಯುತ್ತಿರುವೆ
ಜೋಲಿ ಹೊಡೆದರುನೂ
ಸಾವಕಾಶ...

* * * *

೨. ರಿಣ

ನನಗೆ
ನೀಡು ಅಭಾವ ಗೊಂದಲ ಶೋಕ
ಪ್ರತಿಯಾಗಿ ಸಮತೂಕದಲ್ಲಿ
ಉತ್ತಮೋತ್ತಮ ಕವಿತೆ ನಿನ್ನುಡಿಗೆ ಹಾಕುವೆ.
ನಿನ್ನ ರಿಣ ನನ್ನ ಮೇಲಿರಲಾರದು
ಇರಬಾರದು.
ನನ್ನ ತಕ್ಕಡಿಯಲ್ಲಿ ಬಂಗಾರತೂಕ
ನಿನಗೆ.

* * * *

೩. ಒಂಟಿ

ತಲೆಪಕಾಲಿಯಲ್ಲಿ ತುಂಬಿ ನೆನಪ-ಸಿಂದಿ
ಗೋಣು ಹಾಕುತ್ತ ಸಾಗಿ ನಡೆದಿದ್ದೇನೆ
ಒಂಟಿ.
ನೂರು ಗಾವುದ ನಡೆದು ಸಾವಿರದ ದಾಟಿ ಮತ್ತೆ
ಕತ್ತೆ ಮನಸಿನ ಹುಚ್ಚು ಹಂಬಲದ ಹಿರಿಯುಸುಬು
ಕಾಲತಳಕ್ಕೆ ಹಾಕಿ
ರಾಜಗುವರನ ಠೀವಿಯಲ್ಲಿ ನಡೆಯುತ್ತ
ಸೈಕತ-ಲೋಕದ ರಾಜಮಾರ್ಗದ ಮೇಲೆ
ಬಾಗಿ ನಡೆದಿದ್ದೇನೆ.

ಡುಬರಿಯಲ್ಲಿ ಸಂಗ್ರಹಿಸಿ ಇಟ್ಟುಕೊಂಡಿದ್ದೇನೆ
ಭವಿಷ್ಯದ ಹವಿಷ್ಯಕ್ಕೆಂದು
ನಾ ಪಟ್ಟಿದ್ದ, ಉಂಡಿದ್ದ, ಕಂಡಿದ್ದ
ನಿರಾಶೆ ದುಃಖ ನಿರುಪಾಯತೆಯ ಅಸಹಾಯ ಪ್ರಾಣಾಧಾರ.
ಇನ್ನೂರು ಮುನ್ನೂರು ವರ್ಷ ಸಂಶೋಧನೆ
ಮಾಡಬಯಸುವ ಜನರು ದುಃಖದ ಮೂಲ
ಪ್ರವೃತ್ತಿಗಳನರಿಯಬೇಕೆನ್ನುವವರು
ನನ್ನ ಬೆನ್ನಿನ ಮೇಲೆ ಹತ್ತಿ ಬನ್ನಿ.

ಡುಬರಿಯಲ್ಲಿ ಕಟ್ಟಿಟ್ಟುಕೊಂಡಿದ್ದ ಗಂಟು
ಮಹಾ ಶೋಕ-ಶೋಧಕರೆಂದು ನಿಮಗೆ ಕೊಟ್ಟುಬಿಟ್ಟು
ನಿಶ್ಚಿಂತನಾಗಿ
ಸಮೀಪದಲ್ಲೆಲ್ಲಾದರೂ ಒಂದು ಓಯಾಸಿಸ್ ಕಂಡರೆ
ಸತ್ತುಹೋಗುವೆ ಯಾರ ತಂಟೆಗೂ ಬರದೆ.

* * * *

೪. ಕೊಳ್ಳುವಿರ?

ನನ್ನೆದೆಯ ಕಳವಳದ
ತಳಮಳವನೆಲ್ಲ ಹರವಿಬಿಟ್ಟಿದ್ದೇನೆ.
ಮಾರಲಿಟ್ಟಿದ್ದೇನೆ. ಕೊಳ್ಳುವಿರ?

ಬೇಸಿಗೆಯ ಭಾರಿ ಬೇಗೆಗೆ ಇಡೀ
ಅಡವಿ ಚಡಪಡಿಸಿ
ನನ್ನೆದೆಯ ಎಲ್ಲ ಅಂಕುರ–ಶಿಶು
ಚೀತ್ಕಾರ ಮಾಡುತ್ತಿವೆ. ನೀಲಾಂ–
ಬರಿ ಹಾಡುತ್ತಿವೆ. ಇವುಗಳ ಲೋಹಿತದ
ಕೊನೆಯ ಹನಿ ಕೊಳ್ಳುವಿರ?

ಯಾರದೋ ಶಂಕೆ ಸಂದೇಹ
ಅಸ್ಪಷ್ಟ ಅಸಮಂಜಸತೆ ನೂರಾ–
ಎಂಟು ಭಾವಗಳ ಮಿಸಳು ಮೋಸ
ತಲ್ಲಣಿಸಿ ಹಾಕಿವೆ. ಗಲ್ಲು–
ಗೊಳ್ಳುವುದಕ್ಕೆ ಸಿದ್ಧ. ಬದ್ಧಕಂಕಣ
ನಾಗಿ ನಿಲ್ಲುವೆ. ಆದರೀ
ವಂಚನೆಯ ಕೊಳ್ಳುವಿರ?

ಮೈಬಟ್ಟೆ ಕಳಚಿ,
ಹಾಯಾಗಿ ಗಾಳಿಗೊರಗಿದ್ದೆ.
ವಾಸನೆ ತೋರಿಸಬಂದು
ಬಗಲಲ್ಲಿ ಕೇದಿಗೆ ಹೊಡೆ ಚುಚ್ಚಿ
ಗಾಸಿಗೊಳಿಸಿದ್ದಾರೆ, ಹಾಸಿಗೆಗೆ
ನೂಕಿದ್ದಾರೆ. ನನ್ನ
ರೋದನವ ಕೊಳ್ಳುವಿರ?

ನನ್ನ ನಂಬಿಕೆ, ಸಾಚಾತನ,
ಮುಗ್ಧತೆ, ಕಣ್ಣಾಲಿಗಳ ಮಿಂಚ
ಮಾರಬೇಕೆಂದಿರುವೆ
ಕೊಳ್ಳುವಿರ?

* * * *

೫. ನೆನಪ ಗಂಧರ್ವರು

ನನ್ನ ಬಾಲ್ಯದ ಎಲ್ಲ ನೆನಪ ಗಂಧರ್ವರನು ಹಿಡಿದು ಕಟ್ಟಬೇಕೆಂದಿದ್ದೆ,
ಕೇಳಬೇಕೆಂದಿದ್ದೆ.
ಪಾರಾದರು, ಎಲ್ಲೊ ಅಡಗಿದರು.
ಪ್ರಶ್ನೆಗಳು ಮೈ ಮನ ಚುಚ್ಚಿ ನಡುಗಿಸಿದವು.
ರೆಕ್ಕೆ ಕಿತ್ತ ಹಕ್ಕಿಯಂತಾದೆ
ಅತ್ತಿತ್ತ ಸುಮ್ಮನೇ ಸುಳಿದಾಡಿದೆ.
ತಲೆ ಮೇಲೆ ಕೈಯಿಟ್ಟು ಕೈಮುಗಿದು ಬೇಡಿದ್ದೆ:

‘ ಬನ್ನಿ, ಬಾಲ್ಯದ ಸಖರೆ ಬನ್ನಿ ಆಡೋಣ,
ಮನಮನಸುಗಳನೆದುರು ಹರಡಿ
ನಮ್ಮ ಭೂತದ ಮೈಯ ರೋಮಗಳನಮುಕಿ
ಎದುರು ನಿಲ್ಲಿಸಿಕೊಂಡು ಕೇಳೋಣ, ಹೇಳೋಣ:
ಏಕೆ ಭವಿಷ್ಯತ್ತು ಪ್ರಶ್ನೆ–ಕೂಟ?
ಸಖರೇ, ಖರೇ ಬನ್ನಿ.’

ಕಾಯುತ್ತಲಿದ್ದೇನೆ—
ಭೂತ ಭವಿತವ್ಯಗಳ ಕ್ಷಿತಿಜದಂಚಿನಲಿ
ಮರೆಯಾದ ಗಂಧರ್ವರಿನ್ನೊಮ್ಮೆ ಬರುವರೆ?

ಬರಲೇಬೇಕು.

* * * *

೬. ಔರಂಗಜೇಬ

ನಾನು ತಳ–ಊರಿರದ ಔರಂಗಜೇಬ.

ನನ್ನ ಇಲ್ಲಣವಿಡಿದ ಮನಸಿನೊಂದೊಂದು ಭಾಗಕ್ಕೆ
ನೂರು ಮಹಾನಾಗಗಳಡರಿ ಜೋತಾಡುತಿವೆ:
ಹತ್ತಿದ್ದ ನೆತ್ತರದ ಹತ್ಯೆ, ರಾಜಬಂಧನ.... ಓಹ್ ದಾಹ....
ಅಧಿಕಾರಮೋಹ, ನಂಬಿದರ ವಿಶ್ವಾಸದ್ರೋಹ,
ಚಾಚುತ್ತಿವೆ ಚೂಪು ವಿದ್ರೂಪ ನಾಲಗೆ
ಎಂಥ ಹಗೆ
ಹದಗೆಟ್ಟ ನನ್ನೊಡನೆ ಸಾಧಿಸುತ್ತಿವೆ?
ನಾ ಪ್ರಕಂಪಿತದೇಹ.

ಮೈತುಂಬ ನೆನಪ–ಬರೆ–ಗೆರೆ ಮೂಡಿ
ಮಟಮಾಯವಾಗಿ ಮಾಟಮಾಡುತ್ತಿರುವ
ನೋವುಗಳು. ತಾಜಮಹಲಿನ ಗರ್ಭ–
ದೊಳಗಿನ್ನೊಂದು ಸಮಾಧಿಯ ಸೇರಿ
ಉಸಿರು ಬಿಡುತ್ತಿದೆ ನನ್ನ ಸ್ನೇಹ.

ಅಲ್ಲಿ ನಕ್ಕಿದೆ ಕಲೆ.
ಇಲ್ಲಿ ಹೊಯ್ದಾಟ, ಕಳವಳದ ರಂಗು,
ಇಂದು ಮೈದುಂಬಿರುವ ಗುಂಗು.
ಯಾರಿಲ್ಲಿ ಈಸಿದರು ತಿಳಿಭಾವ–ಕೊಳದಲ್ಲಿ?
ನೀರಲ್ಲಿ ಮೂಡಿದ್ದ ಕುಂಕುಮದ ಹೆಜ್ಜೆ
ನಾನು ಗುರುತಿಸಿದಾಗ ಮನದಲ್ಲಿ ಗೆಜ್ಜೆ
ಬಜಾಯಿಸಿ, ಆಗಲೇ ಯಾರೊ ಹಾಡಿದ್ದರು ದೂರ
ಯಾವುದೊ ಕರೆಗೆ ಸಾಗಿದ್ದರು. ಮತ್ತೆ
ಹೊತ್ತಿನ ಮೆತ್ತನೆದೆ ಮೇಲೆ
ಎತ್ತೆತ್ತಾರ ಮತ್ತ ಹೆಜ್ಜೆ ಮೂಡಿ ಮಾಯವಾಗಿಲ್ಲ ಪೂರ.

ನನ್ನನ್ನು, ನಿನ್ನನ್ನು. ಅವಳನ್ನು
ಹವಳ ಮುತ್ತುಗಳನ್ನು, ಧವಳ
ಪಾಪಗಳನ್ನು, ಮರುಳ ಮತ್ತುಗಳನ್ನು
ಕತ್ತು ಹಿಸುಕಿದೆ ಕಣೋ
ನಾನೆ ಸಂಗ್ರಹಿಸಿದ್ದ, ಸಂರಕ್ಷಿಸಿದ್ದ ಸಂದೇಹ ಸೈನ್ಯ.
ಇದರ ಧಾರೆಯ ತಳಕೆ ಸಿಕ್ಕು ನರಳುತ್ತಿದೆ
ನನ್ನ ದೈನ್ಯ.
ಒಂದು ಕಾಲಕ್ಕೆ ಸ್ಪರ್ಧೆಯಲಿ ಕಚ್ಚಾಡಿದಿಚ್ಛೆಗಳು
ಮಚ್ಚೆಮೂರುಪಾಲಾಗಿ ಬಿದ್ದಿವೆ ಇಲ್ಲಿ.
ಕಸುವುಳ್ಳ ಕಟುಕರಿಗೆ ನಾನು ದಯಪಾಲಿಸಿದ ಕತ್ತಿ
ನನ್ನ ಜೀವದ ಬತ್ತಿ
ಕತ್ತರಿಸಬೇಕೆಂದು ನನ್ನ ಕತ್ತಿನ ಮೇಲೆ ತೂಗುತ್ತಿದೆ.
ಯಾರನ್ನು ನಂಬಲೋ? ಏನನ್ನು ನಂಬಲೋ?
ಯಾರು ನನ್ನವರಿಲ್ಲಿ?

ಪ್ರಶ್ನೆಗಳ ನುಂಗಿ, ಬೆಂಕಿ ಬರಸಿಡಿಲುಗಳನುಗುಳಿ
ಧರ್ಮವನ್ನುಸುರಿದ ನನ್ನ ಸುತ್ತಲೂ ಮಿತ್ತು
ಕುಣಿಯುತ್ತ ನಿಂತು
ಆಳ ಕುಣಿ ಕಡಿದು
ನನಗೆ ಕೊನೆ ಪಂಚಾರತಿ ಬೆಳಗಬೇಕೆಂದು
ಕಾದಿದೆ. ನನ್ನ ಹಳವಂಡ–ಭಂಡಾರಗಳ
ತುಂಬಿದೆ ಭಂಡತನದೆಲ್ಲ ಗತ್ತು.
ನಾನೆತ್ತ ಸಾಗಲಿ? ಬದುಕಲಿ?

ಮತ್ತೆ ಅ–
ಸಂಭವದಸಮ ದುರ್ಗದೊಳಹೊಕ್ಕು ನಿರ್ನಾಮ–
ವಾಗುವ ತನಕ ಚಿನ್ನಾಟವಾಡಿದವ. ಮಳೆಯ ಎಳೆ–
ಎಳೆಗುಂಟ ಪಾತಾಳದಾಳ ಸೇರಿ ತೊಳಲಾಡಿದವ.
ನೂರೆಂಟನೆಯ ಆಕಾಶವನ್ನೇರಿ ನೇತಾಡಿ, ಹಗ್ಗ–

ಹರಿದೆಲ್ಲೋ ಬಿದ್ದು ಚಿಂದಿ–ಚಿಪ್ಪಾಡಿಯಾದವ.
ನಾನು ಏನಾಗಿಲ್ಲ? ನನ್ನ
ಬದುಕೆಲ್ಲ ಗಡಿಬಿಡಿ, ತಳಮಳ. ಥಳಥಳ
ಹೊಳೆವ ಬೆಳ್ಳಿಯ ಮೇಲೆ ಕೋಟಿ ಕೀಚಕ–ಕಲೆ.
ಯಾವ ಹಾವಿನ ಹೆಡೆ ನನ್ನ ತಲೆ?

ನಾ ನೆಯ್ದ ಬಲೆಯಲ್ಲೆ ಬಿದ್ದು ವಿಲಿವಿಲಿ ನಾನು.

ರಾಜ್ಯವಾಳಿದ್ದೇನೆ, ಸ್ವತಃ ದುಡಿದಿದ್ದೇನೆ, ಪ್ರಜರ
ಸಲಹಿದ್ದೇನೆ. ಪ್ರಖರ ಸಂಯಮದಿಂದ
ದಿನವೂ ಕುರಾನು ನೂರು ಬಾರಿ ಓದಿದ್ದೇನೆ.
ವರ್ಷವಿಡಿ ರೋಜ, ರಮಜಾನು.
ಮಹಾಫಕೀರ
ನಂತೆ ಬದುಕಿದ್ದೇನೆ. ನಿಟ್ಟುಸಿರ ಬುಟ್ಟಿಯಲಿ
ಜಪೋ–ಫಲ ತುಂಬಿದ್ದೇನೆ.
ಆದರೂ....
ಆದರೂ ಯಾವುದೋ ಸಂದೇಹದಂಗಡಿಯ
ಸಾವಿರದ ಗೊಂಬೆಗಳಲ್ಲಿ ನಾನೂನು ನಿಂತಿರುವೆ.

ಹೆದರಿ ಹೈರಾಣಾಗಿ, ಕಂಗಾಲಾಗಿ ಕೈ ಮೈ ಸೋತು
ಕೂಗತೊಡಗಿದ್ದೇನೆ. ಯಮುನೆಯ ಕರೇ ನೀರ
ನೋಡತೊಡಗಿದ್ದೇನೆ. ಕಣ್ಣಲ್ಲಿ ಮುಖದಲ್ಲಿ ಮುಹರ್ರಮ್
ಸಿಕ್ಕಾಪಟ್ಟೆ ಹಾಡತೊಡಗಿದೆ ಈಗ.
ನಾನು—
ಹೌದು, ನಾನು ತಳ ಊರಿರದ ಔರಂಗಜೇಬ.

* * * *

೩. ಪರದೇಸಿ ಹಾಡುಗಳು : ೧೯೭೬

೧. ನಿನ್ನೆ ಭೆಟ್ಟಿಯಾಗಿದ್ದರು

ವಿಶ್ರಾಂತಿ–ವ್ವಿಸ್ಕೀ ಕುಡಿದು
ಕ್ರಾಂತಿಯುಚ್ಚೆಯ ಹೊಯ್ದು
ದೇಶ ಡಿಸ್ಕಸ್ ಮಾಡಿದ ಮಹನೀಯರು
ಗಡ್ಡದ ಸಂನ್ಯಾಸಿಗಳು ನಾಟಕದಲೆ ಮಾರಿಗಳು
ಒಮ್ಮೊಮ್ಮೆ ಹಗಲಿಡೀ ಬ್ರಹ್ಮಚಾರಿಗಳು
ನಿನ್ನೆ ಭೆಟ್ಟಿಯಾಗಿದ್ದರು
ದಾರಿಯಲ್ಲಿ ಕಾರಿನಲ್ಲಿ ಬಾರಿನಲ್ಲಿ.

ಬಾಯಿಕಲ್ಲಿ ಬಿಚ್ಚಿದರು ಕಣ್ಣಿನಲ್ಲಿ ಕಚ್ಚಿದರು
ಹಂದಿಹಲ್ಲು ಗುಂಡುಕಲ್ಲು ಹರವಿದರು
ಭರತಖಂಡದಲಿ
ಮರದ ಮರೆಯಲ್ಲಿ ನೆರೆದ ಜನರಲ್ಲಿ
ನೇರ ಬಳಸುವುದಕ್ಕೆ
ಇರಲಿ ಬೇಕಾಗಬಹುದೆಂದು.

ಬೈದರು
ಸಕಲ ಸುದ್ದಿಗಳ ವಿಕಲ ಬುದ್ಧಿಗಳ ಹಾ
ರುವ ತಟ್ಟೆಗಳ ಹರಿದ ಬಟ್ಟೆಗಳ
ಬಂಜರ ತಲೆಗಳ ಅಂಜಿದಬಲೆಯರ
ನಂಜಿನಧರಗಳ ತಮಗೆ ಸಾಧಿಸಿದ
ವ್ಯಂಗ್ಯ ಮಣಿಮಾಲೆ ಧರಿಸಿ.

ಕುಟ್ಟಿದರು ಮೇಜು
ಕಟ್ಟಿದರು ಭಾಷಣ ಬಳಸಿ ಗಟ್ಟಿ ಪದಗುಚ್ಛ
ಬೆನ್ನು ತಟ್ಟಿದರು ಬಾಲೆಯರ ಅಟ್ಟಿದರು
ಬಾಲಕರ ತರಲು ಬೀಡಿಕಟ್ಟುಗಳ.

ಚಿಮ್ಮಿದವು ಇವರ ಹಮ್ಮು ಕೆಮ್ಮು ರೋಗ ಭೋಗಗಳು
ಯಾರದೋ ಪ್ರತಿಧ್ವನಿಯಾದವು
ಗಿಟಾರದಲಿ ಗಟಾರದಲಿ ವಠಾರದಲಿ ಭವ್ಯ
ನಾಡಿನಲಿ ನವ್ಯ ಕಾವ್ಯದಲಿ ಹಲ ದಿವ್ಯ ಘಟನೆಗಳಲಿ.

ಹೀಗೆ ದೇಶ ಕಟ್ಟಿದರು
ನಿನ್ನೆ
ಭೆಟ್ಟಿಯಾಗಿದ್ದರು.

* * * *

೨. ಚೀಲ

ನಾನು ಸತ್ತಿದ್ದೇನೆ,
ಹೌದು, ಯಾರು ಬದುಕುತ್ತಾರೆ ಈ ವಯಸ್ಸಲ್ಲಿ
ಈ ದೇಶದಲ್ಲಿ ? ಬದುಕಿ ಮಾಡುವುದಾದರೂ ಏನು?
ಅದಕ್ಕಾಗಿ ಸತ್ತಿದ್ದೇನೆ ಈ ದೇಶದಲ್ಲಿ.

ರಾಷ್ಟ್ರೀಯ ಆರೋಗ್ಯ ಮಿತಿ ಪ್ರಕಾರ
ಸತ್ತವರ ಸಾಲಲ್ಲಿ ಎಂದೋ ಸೇರಿದ್ದೇನೆ
ನನಗೀಗ ಉಳಿದಿಲ್ಲ ಬದುಕುವ ಹಕ್ಕು
ಅದಕ್ಕಾಗಿ ಸತ್ತಿದ್ದೇನೆ.

ಹಲವು ಮಹಾ ಚುನಾವಣೆಗಳ ಗತ್ತುಗಾರಿಕೆಯಲ್ಲಿ
ಮಸಿ ಬಳಿಸಿಕೊಂಡು
ಹತ್ತು ಹೆಜ್ಜೆ ಸಹ ಎದೆ ಸೆಟೆಸಿ ನಡೆಯುವುದು ಮರೆತದ್ದು
ತಟ್ಟನೇ ನೆನಪಾಯ್ತು ಮೊನ್ನೆ ಹೊರಟಾಗ ಕಾಲೇಜಿಗೆ.
ಕೈಯಲ್ಲಿ ಚರ್ಮದ ಚೀಲ ಹೊಸತು ಹಿಡಿದು
ದೊಡ್ಡವನಾದೆ ಎಂದು ದೊಡ್ಡ ಹೆಜ್ಜೆ ಹಾಕಿದೆ
ಸುತ್ತ ನೋಡಿದೆ ನನ್ನ ಹೊಸ ಚರ್ಮಚಕ್ಷುಗಳಿಂದ.
ಅನ್ನಿಸಿತು, ಈಗ ಮಣ್ಣಿನ ಕನ್ನಡಕ ಬೇಕು.
ಎರಡೂ ಕಾಲು ಚೀಲದ ಗೋರಿಯಲ್ಲಿಳಿಬಿಟ್ಟೆ, ಹೊರಟೆ.
ಒಂದು ಎರಡು ಮೂರು....
ಎಷ್ಟು ವರ್ಷಗಳಾಯ್ತು ಮದುವೆಯಾಗಿ.
ಅಂದೇ ಹಿಡಿದಿದ್ದೇನೆ ಚರ್ಮದ ಚೀಲ.

ನಾ ಅನುಭವಸ್ಥ, ಯಾಕಂದರೆ ನಾ ಗೃಹಸ್ಥ. ವಯಸ್ಸಾಗಿದೆ.
ಸೋತಿದ್ದೇನೆ ಪೇಟೆಯಲ್ಲಿ ದಿನಾ ಸಂಜೆ
ಪುಸ್ತಕ ತರಹೋಗಿ ತರಕಾರಿ ತರುತ್ತೇನೆ,
ಚಿಂತನೆಯ ಬದಿಗಿಟ್ಟು ಸರಕಾರ ಸೋಲುವುದ ನೋಡುತ್ತೇನೆ.

ಸಾಯುವುದಕ್ಕೆ ಇಷ್ಟು ಸಾಕಾಗದೆ
ಈ ದೇಶದಲ್ಲಿ? ನಾ ನಗುತ್ತಿದ್ದದ್ದು ನನಗೇ ಒಂದು ಕತೆ.

ಈಗ ಬರೀ ನೆನಪುಗಳ ಇತಿಹಾಸ.
ಇಲ್ಲ, ಬದುಕುವ ಹಕ್ಕು ಉಳಿದಿಲ್ಲ ನನಗೆ
ನಾನು ಸಾವಿನ ಚೀಲ.

* * * *

೩. ಆಗ್ರಾ ಮತ್ತು ತಾಜಮಹಲ್

ಬೃಹತ್ ಗಟಾರಗಳು. ಅನವರತ ನಿರ್ಬಂಧ ದುರ್ಗಂಧ
ನೂರು ಹೇಡಿತನ ಮೋಸಗಳ ಐತಿಹಾಸಿಕ ನಗರ
ಅವಿಶ್ವಾಸದಾಗರ.
ಸಂಜೆ ಮತ್ತೆ ರಾತ್ರಿ ಹತ್ತರ ಮೇಲೆ
ಸಿನೆಮಾದ ಹೊತ್ತಿಗೆ
ಲಹರಿ ಬಂದಂತೆ ಕುಕ್ಕಿ ನೆತ್ತಿಗೆ
ರಿಕ್ಶಗಳನೆಳೆಯುವುದು ಕಡುಬೇಸಗೆ
ಬಲು ಹೇಸಿಗೆ.
ಹುಚ್ಚು ನೋವಿನ ಹೊಲಸು ತವರು
ಹೆಜ್ಜೆ ಹೆಜ್ಜೆಗೆ ಕುಣಿ
ದಾರಿ ತುಂಬ. ಅವ್ಯವಸ್ಥೆಯ ಅಮರ ಸಿಂಹಾಸನ.
ಯಮುನೆಯ ತುಂಬ ಊರ ದನ.
ಉತ್ತರದ ಶಿಷ್ಟ ಮಾದರಿ ಪುರ–ಮಣಿ
ಪುನ್ನಾಮ ನರಕ.

ಆದರೂ
ಯಾವುದೋ ಶಾಪಗ್ರಸ್ತ ಕನಸೊಂದು
ನಿತ್ಯ ಬೆಳದಿಂಗಳಲಿ

ಮುಳ್ಳುಗಳು ನಟ್ಟ ನಗೆಯ ತೊಡೆಯೇರಿ
ಇಲ್ಲಿ ಕೋಟೆಯ ಬಳಿಗೆ ಮೆಲ್ಲನಿಳಿಯುತ್ತದೆ,
ಮಲ್ಲಿಗೆಯ ಮಾರ್ದವತೆಯಲ್ಲೊರಗಿ
ನಯನರಸದಲಿ ಅಮೃತಪಾಷಾಣಗಳನೊರೆಸಿ
ಸಾವ ಹೂವನು ಮುಡಿದು
ಮತ್ತೆ ಬೆಳಗಾದಾಗ ಬಿಳಿಯ ಗೋರಿ
ಕಟ್ಟಿ ಹೋಗುತ್ತದೆ.

* * * *

೪. ಕಲ್ಪನಾ ಎಂಬ ಗೆಳತಿ

ಕತೆಯಾದ ಕತೆ ಬರೆವ ಈ ಹುಡುಗಿ
ಮಾತಾಡಿದರೆ ಮೈ ತುಂಬ ಹರೆ
ತುಳುಕಿ ಬಂದ ಮಳೆ.
ಜೇನು ಹೊಳೆ
ನೆಲದ ಎದೆ ಈ ಮಳೆಗೆ ಕಾದ ಮುಂಗಾರು ಬೆಳೆ
ಮಣ್ಣು ಮುಗುಳು ಗಂಧಗೊಳ್ಳುವ ರೀತಿ.

ನಕ್ಕರೆ ಹತ್ತರ
ನೋಟು ಮುರಿಸಿ ಚಿಲ್ಲರೆ ಮಾಡಿ ನಾಣ್ಯಗಳನ್ನು
ನನ್ನ ಚಿಕ್ಕ ಮಗಳು
ಆಚೆ ಈಚೆ ಕಡೆ ತೂರಿ ಆಡಿದ ಹಾಗೆ.

ಒಡಮುರಿದು ಕಣ್ಣನಗಲಿಸುವುದು ಪ್ರೀತಿ
ಇವಳು ನಕ್ಕರೆ ನುಡಿದರೆ ನುಡಿಸಿದರೆ.

ಇವಳ ಮಾತಿನ ಮಳೆಗೆ
ಹುಲುಸು ಬೆಳೆ ಬಂದದ್ದು, ನಾಯಿ

ಕೊಡೆ ಬಿಚ್ಚಿದ್ದು ಮುಚ್ಚಿದ್ದು ನೆಲಕೆ ಬಿದ್ದದ್ದು
ಬಹಳ ನೋಡಿದ್ದೇನೆ.
ಇವಳು ಅಕ್ಟೋಬರದ ಬಿಸಿಲ ಮುನಿದದ್ದು,
ಚಿತ್ತಿ ಮಳೆಯಂತೆ ನಿರ್ಲಿಪ್ತಳಾದದ್ದು
ಎಲ್ಲದಕ್ಕೂ ಸಾಕ್ಷಿ ನನ್ನ ಕಣ್ಣಿನ ಬೆಂಕಿ.

ಇವಳನ್ನು ಕಂಡಾಗ
ಹುಲಿಯಂತೆ ಬಂದವರು ಬಿಲದ
ಇಲಿಯಾದರು ಬಾನ ಉಲಿಯಾದರು,
ಮಾತು ಮಳೆ ಸುರಿಸಿ ಭೋರ್ಗರೆವ ಹೊಳೆಯಾಗಿ
ಹರಿದವರು ಈಗ ಕೊನೆಯ ದಾರಿಗೆ ಬಂದು
ಕವಲೊಡೆಯುವುದು ದೂರ ಸರಿಯುವುದು
ಅನ್ಯಾಯ.

ಆದರೀಕೆ ತಾ ಬೆಳೆಯಬೇಕು,
ಹದಗೊಂಡು ಹೊಲವಾಗಬೇಕು.

* * * *

೫. ಪ್ರೀತಿಪಾಠ

ಪ್ರೀತಿಯಿಲ್ಲದೆ ಬೇರೆ
ಯಾಕೆ ಬರೆಯುವುದಿಲ್ಲ ಈ ಕವಿಗಳು
ಇಡೀ ಬದುಕಿನ ತುಂಬ ಬೇರೆ
ಕಾಣುವುದಿಲ್ಲವೆ ಈ ಇವರಿಗೆ—

ಪಾಠ ಹೇಳುವ ಹೊತ್ತು ತಲೆ ಮೇಲೆ
ಕೈ ಹೊತ್ತು ಗಲಿಬಿಲಿಗೊಂಡಿದ್ದೆ. ಮೃತಾತ್ಮಗಳಂತೆ
ಪೀಠಸ್ಥರಾಗಿದ್ದ ವಿದ್ಯಾರ್ಥಿಗಳ ಕೇಳಿ

ನೋಡಿ ಹುಡುಗಿಯರ ಕಡೆ ಅವರ ತುಟಿ
ನಗೆಯಾಗಿ ಚಿಮ್ಮಿ
ಎಂಥ ಶಿಕ್ಷಕ ನಾ ಎಂದು ಮೆರೆದಿದ್ದೆ.

ಇಂದು ಕಾದ ಕಬ್ಬಿಣ
ದ ಮೇಲೆ ಸಿಂಪಡಿಸಿದೊಂದು ಹನಿ
ನೀರಿನಂತೆ ಸುಟ್ಟು ಕರಗಿದ್ದೇನೆ,
ಸುರಿದು ಬಟಾಬಯಲಾದ ಮೋಡದ ಹಾಗೆ
ಒರೆಸಿಟ್ಟ ಖಾಲಿ ಬಟ್ಟಲದಂತೆ.

ಪಾಠ ಹೇಳುವುದಕ್ಕೆ, ಉದ್ದುದ್ದ
ವ್ಯಾಖ್ಯೆ ಮಾಡುವುದಕ್ಕೆ, ಮಂಚ
ಏರಿ ಬಿಗಿಯುವುದಕ್ಕೆ ಭಾಷಣ
ಎಲ್ಲದಕ್ಕೂ ಬೇಕು ಪ್ರೀತಿ ವ
ರತಿಯ ತಣ್ಣನ್ನ ತಿಳಿನೀರು.
ಪ್ರಣಯವೊಂದೇ ಕಾವ್ಯ
ದ ಕಾವು ಅನಿಸಿಬಿಟ್ಟಿದೆ ಈಗ.
ಬೇರೆ ಏನೂ ಕಾಣದ ಹಾಗೆ
ಏನಾಗಿದೆ?

* * * *

೬. ಯಾದವಾಡ

ಯಾದವಾಡಕ್ಕ ಭಾಳ ದಿನದಿಂದ ಹೋಗಬೇಕು
ಹೋಗಬೇಕು ಅಂತಿದ್ದೆ. ಹೋಗಾಕ ಆಗಿರಲಿಲ್ಲ.
ಮೊನ್ನೆ ಹೋಗಿ ಬಂದೆ. ಮಾವ ಅಕ್ಕ ಆರೂ ಹುಡುಗೂರು
ಎಲ್ಲಾರೂ ಅರಾಮದಾರ. ಚಾದಂಗಡಿ ಬಸೂ ಬೇವಿನಗಿಡ
ದ ಮಲ್ಲೇಶಿ ಭಾವಿಮನಿ ಇಬ್ರಾಹಿಮ ಭೆಟ್ಟಿ ಆಗಿದ್ದರು.

ಗಡಾದ ದುಂಡವ್ವ ಮಾತ್ರ ಹಾಸಗೀನ್ಅ ಹಿಡದಾಳ. ಗುರು
ಸಿದ್ದಪ್ಪನ ಸೆರೆದಂಗಡಿ ಅಂತೂ ಭರ್ಜರ್ ನಡದೈತಿ.

ಕುರುಬರ ಎಲ್ಲ್ಯಾನ ಗುಡಿಸಲಕ್ಕ ಈಗೊಂದ ತಿಂಗಳ
ಹಿಂದ ಯಾರೋ ಬೆಂಕಿ ಹಚ್ಚಿದ್ದರಂತ. ದುರಗವ್ವನ ಗುಡ್ಯಾಗ
ಒಲೀ ಹೂಡಿದ್ದ. ಗೆಣ್ಯಾನ ಕೂಡ
ಇರೂ ವಿಚಾರದಲೆ ಅವ್ವನ ಹೇಣತೇ ಹಚ್ಚಿದ್ದಳಂತ
ಇವ್ವನ್ನ ಸುಡಾಕ. ಮಾವ ಅಂದ.

ಊರಾಗ ಇನ್ನೊಂದ ವಾರದಾಗ ಲಾಯಿಟ್ ಬರತಾವಂತ.
ಯಾವಾಕ್ಯೋ ಮಂತ್ರಿ ಬರತಾಳಂತ.
ಸರಪಂಚ ಆಗ್ಯಾನಲ್ಲ, ಆ ದೊಡಮನಿ ಮಾದ್ಯಾ,
ಭಾಳ ಉರದಾಡತಿದ್ನಲ್ಲ, ಸಾವಕಾರ ಸಣ್ಣೆಲ್ಲಪ್ಪನ ಬಾಲ
ಹಿಡಕೊಂಡ ತಿರಗತಿದ್ನನಲ್ಲ, ಅವ್ನಾ
ಓಡ್ಯಾಡಾಕ ಹತ್ಯಾನಂತ. ನೂರುನೂರು ಕೈ
ಬೆಚ್ಚಗ ಮಾಡಿದವರಿಗೇ ಮೊದಲ ಲಾಯಿಟ್
ಅಂತ ಇಂಜಿನಿಯರ್ ಹೇಳ್ಯಾನಂತ. ನಮ್ಮ ಹೊಲದ ಹಳ್ಳದಾಗೂ
ಸಿಂದೀ ಗಿಡಕ್ಕ ಗೊಬ್ಬೀ ಕಟ್ಟಾಕಹತ್ತ್ಯಾರೀಗ.
ಫಕ್ಕೀರಪ್ಪನ ಖೂನ ಮಾಡಿದ್ನಲ್ಲ ಸಂಗ್ಯಾ, ನೆನಪಿರಬೇಕಲ್ಲ,
ಬಿಡಗಡಿ ಆಗಿ ಬಂದಾನಂತ. ನನಗೇನ ಭೆಟ್ಟಿ ಆಗಲಿಲ್ಲ.

ಪಿಂಜಾರ ಮರೆಪ್ಪನ ಮಗಳು, ಆ ಬೆಕ್ಕಿನ ಕಣ್ಣಿನ ಹುಡುಗಿ,
ಹಾದೀಮನಿ ಗೂಳಪ್ಪ ಬಾವಿ ಕಡಿಸಿದ್ನಲ್ಲ, ಆ
ಬಾವ್ಯಾಗ ಬಿದ್ದ ಸತ್ತೆಂತ. ಬಸರಿತ್ತ
ಅಂದ ಮಾವ. ಯಾರಿಗೆಂತ ನಾ ಕೇಳಲಿಲ್ಲ.

ಸಂಜೀ ಮುಂದ ನೀಲಮ್ಮಾರ ಗಾಣದಾಗ ಹಾಲ
ಕುಡದು
ಸಾಯಿಕಲ್ ಹತ್ತಿಬಿಟ್ಟೆ.

* * * *

೪. ನೂರಾರು ಪದ್ಯಗಳು : ೧೯೭೭

೧. ಕೊಡುಗೆ

ನನಗೆ ಮುತ್ತು
ಕೊಟ್ಟ
ಮೊಟ್ಟ ಮೊದಲ ಹುಡುಗಿಗೆ
ಮತ್ತು
ಕೊಡುವ
ಕಟ್ಟ ಕಡೆಯ ಹುಡುಗಿಗೆ
ತೊಡುಗೆ ಈ ನೂರ್
ಹಾರು ಪದ್ಯಗಳು.

* * * *

೨. ಚಿಲ್ಲರೆ

ಚಿಲ್ಲರೆ
ಎಂದು ಎಷ್ಟೋ ಜನ ಗಟ್ಟಿ ಚಿಲ್ಲರೆ
ಮಿತ್ರರು ಕವಿಗಳು ಅಧ್ಯಾಪಕರು ವಿಮರ್ಶಕರು
ಹಳಿಯಬಹುದಾದ ಹೊಗಳಬಹುದಾದ
ಹಲವು ಚಿಲ್ಲರೆ ಚಿಕ್ಕ
ಚೊಕ್ಕ ಪದ್ಯಗಳು ಇವು.

* * * *

೩. ಬೆಳಕ ಹಕ್ಕಿ

ನಸುಕಿನಲಿ ಗರಿಗೆದರಿ ಬಂದು
ಕೋಟಿ ಕರ ಲೇಖನಿಗಳಿಂದ
ಪೃಥಿವಿಯಲ್ಲೆಲ್ಲ ನಿನ್ನ ಹೆಸರ ಬರೆಯುವುದು
ಬೆಳಕ ಹಕ್ಕಿ.

* * * *

೪. ಅಂತರ

ಕೆರೀ ದಂಡೀ ಮ್ಯಾಲ ಕುಂತು ಮಾತಾಡೂನು, ಬಾ.
ಎಷ್ಟ ದಿನಾ ಆತು, ನಾವಿಬ್ರೂ ಕೂಡಿ
ಕುಂತಿಲ್ಲ, ಕಣ್ಣಾಗ ಕಣ್ಣಿಟ್ಟ ನೋಡಿಲ್ಲ, ಮಾತಾಡಿಲ್ಲ.
ಎಳೆಬಿಸಿಲ್ನ ಮೈತುಂಬ ತೀಡಿಕೊಂಡಿಲ್ಲ,
ಬೆಳದಿಂಗಳಾ ಎರಕೊಂಡಿಲ್ಲ, ಈಗ ಹುಚ್ಚುಚ್ಚಾರ
ಅನಸ್ತದ ಖರೆ. ಆದರೂ ಹಂಗಲ್ಲ ಅನಕೊಳ್ಳೂಣು.
ಚಂದಪ್ಪನ್ನ ಗಾಳಿಗೆ ತೇಲ್ಯಾಡುವ ಹುಲ್ಲನ್ನ ಬಣ್ಣ
ಬಣ್ಣದ ಹೂಗಳನ್ನ ನಗೆಗಳನ್ನ ಕೆರಿ
ನೀರಾಗ ಮೂಡಿದ ನಮ್ಮ ಗೊಂಬಿಗಳನ್ನ
ದೂರದ ಗುಡ್ಡದ ತುದೀ ಹಾದಿಗುಂಟ
ಉಬ್ಬಸಬಡಕೊಂತ ಹಾರ್‍ಯಾಡುವ ಮೋಡಗಳನ್ನ
ನೋಡೂನು ಹೊಗಳೂನು ಇಂಥಾದ್ದೆಲ್ಲಾ
ಇನ್ನೂ ಏನೇನೋ ಮಾಡೂದು ಬಾಕಿ ಉಳದೈತಿ,
ಭಾಳ ದಿನದಿಂದ ಉಳದೈತಿ.
ಕಣ್ಣಾಗ ಮುಳುಗಿದಿ, ಎದ್ಯಾಗ ಕರಗಿದಿ,
ಎಷ್ಟ ದೂರದ ಹಾದಿ ತುಳದ ಹ್ವಾದಿ...

ನೀಯೇನ ತಪ್ಪ ಮಾಡಲಿಲ್ಲ, ಮಾಡಬಾರದ್ದ ಆಗಲಿಲ್ಲ.
ಬ್ಯಾಸರಾ ಮಾಡಕೋಬ್ಯಾಡಾ, ಬಾ, ಇನ್ನೊಂದ ಸಲ
ಮಾತಾಡೂನು ಕೂಡೂನು ಕತಿ ಆಗೂನು
ಕೆರೀ ದಂಡೀ ಮ್ಯಾಲ ಕುಂತು.

* * * *

೫. ವಸ್ತು

ಕವಿತೆ ಬರೆಯುವುದಕ್ಕೆ ಈ ಹಾಳು ಹುಡುಗಿಯರೆ ಬೇಕೆ?
ಇವರ ಗಲ್ಲದ ಬಣ್ಣ, ಸೊಂಟದ ತಿರುವು, ಕಾಲು ಕೈ
ಕಣ್ಣನ್ನೆ ಮಾತ್ರ ಕವಿತೆಗೆ ಮೂಳೆ ಮಾಂಸ ಮೈಯೆ?

ಮಗಳಿಗೆ ಸ್ವೆಟರ್, ಅವ್ವನಿಗೆ ಹಲ್ಲಿನ ಸೆಟ್ಟು, ಹೆಂಡತಿಗೆ
ಬರೆಯಲು ಪೆನ್ನು, ಕೋಣೆಗೆ ಹೊಸ ಬಲ್ಬು, ನನಗೆ ಚಡ್ಡಿ,
ಹರವಿದೀ ಕಾಗದಗಳಿಗೆ ಫೈಲು, ಪುಸ್ತಕದಂಗಡಿಯ ದುಷ್ಟ
ಮೊನ್ನೆ ರಾತ್ರಿಯ ಹೊತ್ತು ನನ್ನ ಅವಮಾನಿಸಿದ್ದು, ಆಗ
ಡಿಪಾರ್ಟ್‌ಮೆಂಟಿನ ಹೆಡ್ಡ ಕರೇ ಲಡ್ಡ ಹೇಡಿತನವನ್ನೆ
ಬಸಿರಾದದ್ದು ಇತ್ಯಾದಿ ಕವಿತೆಯಾಗುವುದಕ್ಕೆ ಏನಡ್ಡಿ?

ಕವಿತೆಯೆಂದರೆ ಹೊಚ್ಚ ಹೊಸ ನಗುವ ನಗಬೇಕೆ
ನಿಸದಿದ್ದರೂ ಪೋಜಿಗೇ ನಗುವ ಹುಡುಗಿಯೆ?
ಬರಿಯ ಇಪ್ಪತ್ತೆ? ಬಣ್ಣಗಳ ಕಣ್ಕಟ್ಟೆ ? ಮೈತೀಟೆ?

ಯಾವ ಮೂಲೆಯ ಉಸಿರೂ ಕವಿಗೆ ಬೇಟೆ ತುಂಬಿದ ಪೇಟೆ.
ರಸಘಟ್ಟಿ ಕವಿತೆಗೆ.

* * * *

೬. ಛಾಯಾಮಾತ್ರರು

ಬದುಕು ಖರೇ
ಅಲ್ಲದ ಸುದ್ದಿ.
ಇದರ ಮೊನಚು
ಮುಳ್ಳು ತುಂಬಿದ ದಾರಿ
ಯಲ್ಲಿ ಎಲ್ಲೋ ಬಂದು ನಿಂತಿದ್ದೇವೆ.
ಇದರ ಎತ್ತರದ ಗುಮ್ಮಟದ ಯಾವ ಭಾಗ ನಾವು?—
ಗೊತ್ತಿಲ್ಲ.

ತನಗೆ ಬೇಕಾದದ್ದು ಹೀರಿ
ನಮ್ಮಿಂದ
ಮುಂದೆ ಸಾಗಿದೆ ಬದುಕು.
ಯಾರನ್ನು ದೂರುವುದು?
ನಮ್ಮ ಬದುಕೇ ನಮ್ಮೊಡನೆ ಸೆಟಗೊಂಡು
ನಮ್ಮನ್ನೆ ನಾವು ಲೂಟಿ ಮಾಡಿರುವಾಗ
ಹೇಳುವುದು ಯಾರಿಗೆ?
ಮುನ್ನಡೆವುದನಿವಾರ್ಯ ಕುರುಡರಾಗಿ ಮೂಕ
ರಾಗಿ ನಡೆಯಲೇಬೇಕು, ಅಷ್ಟೆ.

ನಮ್ಮ ಬದುಕಿನ ಒಡೆಯರಲ್ಲ ನಾವು
ಯಾರದೋ ಬದುಕಿನ ನೆರಳು ಮಾತ್ರ.

* * * *

೫. ಪ್ರತೀಕ್ಷೆ : ೧೯೭೭

೧. ಸಾವು

ನನ್ನ ಕಣ್ಣಿನ ತುಂಬ ಬಿಳಿಯ ಸುಣ್ಣದ ಬರ್ಫ
ಈ ಹಿಮಾಲಯದಲ್ಲಿ
ದಾರಿಗರಸುವುದು ದಾರಿ ಬಯಸುವುದು ವ್ಯರ್ಥ.

ಇಲ್ಲಿ ನಡೆದಲ್ಲೆಲ್ಲ ದಾರಿ ಹೂ ಹಣ್ಣು ಕಾಯಿ ಕಂಟಕವುಂಟು
ಜಾರಿಕೆಯ ಮಾಯಾಜಾಲದಮಲುಗಳುಂಟು
ಹಸಿ ಹುಸಿಯ ಹಸಿರು ಔಷಧೋಪಚಾರಗಳು
ಪ್ರೀತಿ ಕಂಟಿಗೆ ಬಿಟ್ಟ ನೂರು ಹೂ ಪಕಳೆಗಳು
ನೋವಿನನವರತ ಸನ್ನಿಪಾತಗಳು ಕೊಳ್ಳ ಪ್ರಪಾತಗಳು
ತೀವ್ರತರ ನಿಶಾವಾತಗಳು ಗಂಧ–ಪ್ರಾತಗಳು ಈ
ಹಿಮಾಲಯದ ಅಡಿಯಲ್ಲಿ ಮುಡಿಯಲ್ಲಿ
ದೃಷ್ಟಿಗಳ ದಡದಲ್ಲಿ.

ಸಾವು ಬೆಂಕಿಯ ನಾಡ ದಾಟಿ ಈ ಕಂದರಕೆ
ಬಂದು ನಿಂತಿರುವೆ
ಕಾಲಡಿಗೆ ಕಣ್ಣಡಿಗೆ ನುಣ್ಣನೆಯ ಸಾವು
ನಾನು ಜರ್‍ರನೆ ಜಾರಿ ತೂಗುತಿಹ ಸಾವು.

* * * *

೨. ಕವನ

ಬರೆದವನ ತಪ್ಪಲ್ಲ ಕವಿತೆ. ಅಚ್ಚಿನ ಮನೆಯ ತಪ್ಪು. ಅಲ್ಲಲ್ಲಿ
ಹಲವಾರು ದೋಷಗಳು. ಬೇರೆ ಅಕ್ಷರವೊ ಒಡಕು
ಅಕ್ಷರವೊ ತಿರುವು ಅಕ್ಷರವೊ ; ಅಂತೂ ದೋಷ, ತೊಡಕು.
ಮುದ್ರಣದ ಕಾಲಕ್ಕೆ ಎಲ್ಲವೂ ಸಾಧ್ಯ. ಹೀಗೆಯೇ ಎಂದು ಇಲ್ಲಿ

ಯಾವುದಕ್ಕೂ ನೀವು ಪಟ್ಟು ಹಿಡಿಯುವುದು ಬೇಡ.
ಬರೆವಾಗ ಬೆರಳ ಸಂಚಾಲಿಸಿದ ಕಣ್ಣು ನೋಡಿದ ಕಣ್ಣು
ಈಗ ಮತ್ತೆ ಭಾವ ಭಾಷಿತವಾಗಿ ಯಂತ್ರಸ್ಥವಾಗುವುದನ್ನು
ನಿರೀಕ್ಷಿಸುವ ಕಣ್ಣು ಎಲ್ಲ ಒಂದೆ ಬಲೆ ಬೇರೆ ಅದೆ ಜೇಡ.

ಈ ಬದುಕು ಪರಮಾತ್ಮನಪರಂಪಾರ ಕೃಪೆ. ಕವನ
ಶ್ರೇಷ್ಠ ಉತ್ತಮ ಹೃದ್ಯ. ಮಾನವ ಕವನ ಬರೆದಾಗ
ಅವನಿಗದೆಂಥ ಸಂತೋಷ. ಅದು ಎದುರಲ್ಲೆ ನಡೆದಾಗ ನುಡಿದಾಗ
ಆಶ್ಚರ್ಯ. ಹೂವಾಗಿ ಕುಣಿದು ನಕ್ಕು ಕಾಮನಬಿಲ್ಲಾಗಿ, ಅವನ
ಜಗದ ಅಚ್ಚಿನ ಮನೆಗೆ ಹೋದ ಕರಡು ಪ್ರತಿ ಮುದ್ರಿತ ರೂಪ ಭವ್ಯ
ಹೊಂದಿಸಿಕೊಂಡು ಓದುವುದು ಮಾತ್ರ ನಮ್ಮ ಕರ್ತವ್ಯ.

* * * *

೩. ನಿನ್ನೆ ಸಾಯಂಕಾಲ

ನಿನ್ನೆ ಸಾಯಂಕಾಲ
ಸುಮಾರು ಒಂದು ವರ್ಷದ ನಂತರ
ಪೇಟೆಯಲ್ಲಿ
ಹೆಂಡತಿ ಮಕ್ಕಳೊಡನೆ ಹೋಗಿದ್ದೆ
ಸ್ಪಷ್ಟ ತಿಳಿ ಗದ್ಯವಾಗಿದ್ದೆ
ಮನೆಯವರಿಗೆ ಹೃದ್ಯವಾಗಿದ್ದೆ.

ಅಕಸ್ಮಾತ್ತಾಗಿ
ನನ್ನ ಕಣ್ಣು ಕಿವಿ ಚರ್ಮ
ಯಾವುದೋ ಮರ್ಮ ತಟ್ಟಿದ ಹಾಗೆ
ಪದ್ಯವಾದವು
ಸದ್ಯ ಜೊತೆಯಲ್ಲಿ ಹೆಂಡತಿ ಮಕ್ಕಳು
ಇಕ್ಕಳು ಹಿಡಿತದಲಿ ಸಿಕ್ಕ ಬೆಂಕಿ–
ಕೆಂಡದಂತೆ ಬಚಾವಾದೆ.

ಒಂದು ವರ್ಷದ ಹಿಂದೆ
ನಾನು ಕಂಡಿದ್ದ ಅನು
ಭವಿಸಿದ್ದ ಮಂಕು ಕವಿಸಿದ್ದ ಜೊಲ್ಲು ಸುರಿ
ಸಿದ್ದ ಮೂಗು ಮುರಿದಿದ್ದ ತುಟಿ ಸವರಿದ್ದ
ಮತ್ಸರದ ಮಬ್ಬು ಕಾವಳದಲ್ಲಿ ಕಣ್ಣು
ಹೊಡೆದಿದ್ದ ಮಿಂಚ ಕಡೆದಿದ್ದ ಹುಡುಗಿ
ಯರು ಬಸುರಿಯರು
ಇಲ್ಲ ಬಗಲಲ್ಲಿ ಕುಳಿತ ಮಕ್ಕಳ ಕಿವಿಯಲ್ಲಿ
ಏನೋ ಉಸುರಿದರು
ನನ್ನ ಮಗಳ ಕೊರಳ
ಉದ್ದುದ್ದ ಬೆರಳ ಹೆಂಡತಿಯ
ಉಂಗುರದ ಹರಳ

ಮಗನ ಮೂಗಿನ ವಿವರ
ತಡವರಿಸಿ ನೋಡಿದರು ಪೇಟೆಯಲಿ
ಸೆರಗ ಸರಿಪಡಿಸಿ ಆಡಿಸಿ
ಕಟಿ ಮೇಲೆ ಕೈ ತುಟಿ ಮೇಲೆ ನಾಲಗೆ.
ಅವರ ಇವರ ಬೇರೆ ಯಾರ ಯಾವ ಮಾತೂ
ನನಗೆ ಕೇಳಿಸಲಿಲ್ಲ ಏನೂ ಕಾಣಲಿಲ್ಲ
ಉಲುಕತೊಡಗಿದ್ದವು ನನ್ನ ಪದ್ಯ ಗರ್ಭದಲಿ
ಕಂಕುಳಲಿ ಉಲಿಯತೊಡಗಿದ್ದವು
ಬಂದುಬಿಟ್ಟೆವು ಹಣ್ಣು ಮಾತ್ರ ಕೊಂಡು.

ಹೀಗೇಕೆ ಅವಸರ
ಎಂದಳು ಇವಳು ನನ್ನ ಕಂಠದಲಿ
ಕೇಶದಲಿ ಯಾವ್ಯಾವವೋ ಬಾಹು ಬೆರಳು
ಕನಸು ತುಡಿತ ಎಂದೆ.
ಏನೊ, ನಿಮ್ಮದೊಂದೂ ಅರ್ಥ
ವಾಗುವುದಿಲ್ಲ ಎಂದಳು. ಹೌದು
ನನಗೂ ಹಾಗೇ ಎಂದೆ.

ಬಸ್ ಹತ್ತಿದೆವು.

* * * *

೪. ಕವನ ಬರೆಯುವ ಧಂಧೆ

ಹೆಜ್ಜೆ ಹೆಜ್ಜೆಗೆ ನೂರು ಕವನ ಪಥಗಳು ತೆರೆದು
ಕವಲೊಡೆದು ನಮಗಾಗಿ ಕಾಯುತ್ತ ನಿಂತಿವೆ
ಎಂದು ಹೇಳಿದ ಭೂಪ ಮುಕ್ತಿಬೋಧ.
ವಾಹ್, ಎಂಥ ಶೋಧ!

ನನ್ನ ಮಟ್ಟಿಗೆ ಮಾತ್ರ
ಈ ಕವನ ಬರೆಯುವ ಧಂಧೆ
ಯ ಬದುಕು ನನಗೆ
ದಯವಿಟ್ಟು ದಯಪಾಲಿಸಿದ ಕಷ್ಟಗಳ ಮುಂದೆ
ಏನೆಂದು ಎಷ್ಟೆಂದು ಹೇಳಲಿ?
ಕವನದ ಶತ ಪಥ
ನನಗೆ ಬರೀ ಶತಪಥ.

ಬರೆಯುವುದಕ್ಕೆ ಕೂಡುತ್ತೇನೆ. ಬರೆಯೆಳೆದ ಹಾಗೆ
ಹೆಂಡತಿ ನಗುತ್ತಾಳೆ ದೂರುತ್ತಾಳೆ ಹತ್ತಿರದಲ್ಲಿ
ಬರುತ್ತಾಳೆ. ಮೈತುಂಬ ದೆವ್ವ
ಬಂದವರಂತೆ ನನ್ನನ್ನೆ ಎಡೆ ಹಿಡಿದು–
ಕೊಳ್ಳುತ್ತಾಳೆ. ಹಿತ್ತಿಲದಲ್ಲಿ
ಮಾವಿನಮರಕ್ಕೊರಗಿ ಮತ್ತೆ
ಕವನದ ಆ ಮತ್ತ
ಪ್ರಮದಾ ಮುಖ ನೆನೆಸಿಕೊಳ್ಳುತ್ತೇನೆ.

ಮಗಳು, ಅವಳನ್ನೆತ್ತಿಕೊಂಡು ಅವ್ವ
ಕೆಲಸ ಇನ್ನೇನೆಂದು ಆಳು...
ನನ್ನ ದರಿದ್ರ ಹಾಳು ಮುಖಕ್ಕೆ
ಮತ್ತೆ ಪೆನ್ನಿನ ಮಸಿ ಮಾತ್ರ ಬಡಿಯುತ್ತದೆ,
ನೊಂದ ನರನರವೆ ಭೈರವಿಯ ಮಿಡಿಯುತ್ತದೆ.

ಕವನಕ್ಕೆ ನೂರು ದಾರಿಗಳುಂಟು
ದಾರಿ ದಾರಿಗೆ ನೂರು ಕವಲು ದಾರಿಗಳುಂಟು
ಎಂದ ಕವಿರಾಯನಿಗೆ
ನನ್ನಂತೆ ಪ್ರಶ್ನೆಗಳ ಬಲೆ
ಎದುರು ಬಂದಿತ್ತೆ? ಇತ್ತೆ
ತಲೆ?

ಅಂದ ಹಾಗೆ,
ಕವಿತೆ ಬರೆಯುವುದಕ್ಕೆ ತಲೆ ಬೇಕೆ?
ನಾ ಓದಿದ ಎಷ್ಟು ಕವಿತೆಗಳಲ್ಲಿ ತಲೆ
ಇತ್ತು? ಇದೆ? ಮಸಿ. ಮಸಿ. ಮುಸಿಮುಸಿ
ಹರಿದಾಡುವ ಮಸಿ. ನೀಲಿ ಕೆಂಪು ಹಸಿರು ಕರಿ ಮಸಿ
ಈ ಕವನಗಳ ಜಾತಿ ಇಷ್ಟೇ.
ಬರೆಯುವವರೂ ಈ ಕುಲಕ್ಕಂಟಿ
ಈ ಮರಕ್ಕಂಟಿ ನಾನು ಕುಳಿತಂತೆ
ಬಣ್ಣ ಬಣ್ಣದ ಗೆರೆಯ ನಡುವೆ ಸಿಕ್ಕವರು
ಆದರೂ ನಕ್ಕವರು.

ನಾವೆಲ್ಲ ಅವರೇ. ಅವ್ವ ನೀಲಿ ಇಲ್ಲ ಹಸಿರು
ಮಗಳು ನಾ ಬರೆಯಲಾಗದ ಮುಗುಳು ಬಿಳಿ
ನಾ ನಿರಂತರ ಕಪ್ಪು
ಈಕೆ ಎಲ್ಲ ಕೂಡಿದ ಧಿಗ್ಗನೆನ್ನುವ ಸ್ಪಿರಿಟು
ಎಲ್ಲಿದೆ ತಪ್ಪು?
ಇವರೆಲ್ಲ ನನ್ನ ಕವನ
ಇದ್ದಿರಬಹುದು. ಸುದ್ದೀ ಮಾಡಿ ಮಂದಿ ಹೇಳುವ ಹಾಗೆ
ನಾ ಮಾತ್ರ ಇವರ ಪಾಲಿಗೆ ಕವನ
ನೂರು ದಾರಿಗಳಲ್ಲಿ ಟಿಸಿಲೊಡೆದು ಹರಡಿರುವ
ವಿಸ್ತಾರ ಗಗನ.

* * * *

೫. ಸೀಮಾ

ಮಗಳೆ, ಯಾರೆದುರೂ
ಡೊಗ್ಗಿ ಸಲಾಮು ಹೊಡೆಯುವುದು ಬೇಡ.
ನಿರ್ಧನತೆ ಮೂಲದಲಿ ಮುಳ್ಳಾಡಿಸಿದ್ದಕ್ಕೆ
ಎಲ್ಲರೆದುರೂ ಬಗ್ಗಿ ವಂದಿಸಿ ಸಹಕರಿಸಿ ಪ್ರೀತಿಸಿ
ತೋರಿ ಸಹಾನುಭೂತಿ
ಕುಗ್ಗಿ ಹೋಗಿದ್ದೇನೆ. ಇರಲಿ ಸಹ
ಚಿಂತನ ಇರಬೇಕು. ಆದರೀ ವ್ಯಾಪಾರ–
ವಿಶ್ವದಲಿ ನಿನ್ನ ಯೋಗ್ಯತೆ ತಿಳಿದವರಿಲ್ಲ.

ಚೆನ್ನಾಗಿ ನಗು ತಿನ್ನು ಓದು ಒದೆ
ಬೈದು ಝಾಡಿಸಿ ಬಾ ಆಗ
ಇರದಿದ್ದರೂ ಯೋಗ್ಯತೆ ಕಾಣುತ್ತದೀ ಖೂಳರಿಗೆ.
ನಿನ್ನಲ್ಲಿ ಕಣ್ಣ ಬೆಳಕಿನ ರೇಖೆರೇಖೆಯ ಗುಂಟ
ನೂರು ಸಾವಿರದ ಸ್ರೋತಗಳ ಪ್ರತಿಭೆ
ತುಂಬಿ ತುಳುಕಿದೆ ತಾಯೀ
ಚೆನ್ನಾಗಿ ತಿಳಿದಿರಲಿ ಬರದಿರಲಿ ಬಡತನ.

ನಾನು ಪಟ್ಟಿದ್ದೇನೆ ಇದ್ದೂ
ಇಲ್ಲದಂತಾಗಿದ್ದೇನೆ. ನೋಡಿಕೋ
ಕೊರತೆ ಕೊರೆಯದ ಹಾಗೆ.
ಬೃಹತ್ತಾಗು ಗಂಭೀರಳಾಗು ತಲೆಯೆತ್ತು ತುಳಿ
ದಾರಿ
ಬಿಡುತ್ತಾರೆ ನಿನಗೆ ಹೇಸಿಗಳು ವಂಚಕರು ನೀಚರು
ಧನಬಲದ ಅಧಿಕಾರ ಗರ್ವಿಗಳು.

* * * *

೬. ಪರಿವರ್ತನೆ

ಈ ದೇಶದಲ್ಲಿ ಕ್ರಾಂತಿ
ಆಗುವುದಿಲ್ಲ ಈ ಜನರಿಗೆ ಅದು
ಬೇಕಾಗಿಲ್ಲ ಇವರು ಅದಕ್ಕಾಗಿ
ಬಂದವರಲ್ಲ.

ಈ ದೇಶದ ಅಯ್ದು ಸಾವಿರದ ಇತಿಹಾಸ ಕೊಳೆತು,
ಕಳಿತು ನಮ್ಮೆಲ್ಲರ ದೇಹದಲ್ಲಿ
ಕ್ಷಯವಾಗಿದೆ ಕ್ಯಾನ್ಸರಾಗಿದೆ.
ಈಗ ಕೊನೆಯ ಹಂತಕ್ಕೆ
ಬಂದು ತಲುಪಿದೆ ಗಾಡಿ, ರೋಗದ ಧಾಡಿ.

ಮುಂದೆ ಹೋರಾಡುವುದು ಶಕ್ಯ
ವಿಲ್ಲ. ಬಲ್ಲ ಮೇಲಣ ಮಹಾನುಭಾವರಿಗೆ
ಎಲ್ಲ ಗೊತ್ತು. ಗುಲ್ಲು ಮಾಡದೆ
ಈ ಜನರಿಗೆ ಸಲ್ಲಬೇಕಾದ್ದನ್ನು
ಸಲ್ಲಿಸುತ್ತಾರೆ. ಈಗ
ಸಲ್ಲಿಸಿದ್ದಾರೆ. ನಾವು ಯೋಗ್ಯರಲ್ಲ
ಕ್ರಾಂತಿಗೆ ಪಕ್ವವಾಗಿಲ್ಲ ಕಾಲ
ಅನ್ನುವುದು ತಪ್ಪು. ಯಾವ
ಕಾಲವಾದರೆ ಏನು ಕ್ರಾಂತಿ
ಮಾಡಬೇಕಾದವರು ನೋಡಬೇಕಾದವರು
ಅದರ ಕೆಂಪು ರಕ್ತ
ಮೈಯಲ್ಲಿ ಹರಿಸಬೇಕಾದವರು ಕ್ರಾಂತಿ
ಗೆ ತಯಾರಿಲ್ಲ ಅಷ್ಟೆ.

ಇಂಥ ಮಂದೆಯ ನಡುವೆ
ಇಂಥ ನಾಡಿನ ನಡುವೆ

ಕ್ರಾಂತಿ ಏನು ಮಾಡೀತು?
ಪಾಪ ಆಗುವುದಿಲ್ಲ
ಅನಬಾರದು. ಅದು ಇದ್ದೇ ಇರುತ್ತದೆ
ತನ್ನಷ್ಟಕ್ಕೆ ತನ್ನ ಮನಸ್ಸನ್ನು
ವಯಸ್ಸನ್ನು ರೂಪಿಸುತ್ತಲೇ ರೂಢಿಸುತ್ತಲೇ
ಇರುತ್ತದೆ. ಅದಕ್ಕಾಗಿ ಮನಸ್ಸು
ಮುಕ್ತವಾಗಬೇಕು, ಕ್ರಾಂತವಾಗಬೇಕು
ಅಷ್ಟೆ ಈಗ ಉಳಿದದ್ದು,
ಬೇಕಾದಾಗ ಮಾಡಬೇಕಾದದ್ದು.

* * * *

೭. ಗಂಡಾಂತರ

ನಾನು ಹೆಣ್ಣಲ್ಲ. ಗಂಡಂ
ತೂ ಅಲ್ಲವೇ ಅಲ್ಲ. ನಾ
ನೀ ದೇಶದ ಅತ್ಯಂತ ಮಹತ್ವದ
ಪ್ರಧಾನಿ ವ್ಯಕ್ತಿ.
ಪ್ರತಿನಿತ್ಯ ನನಗೆ ಭಾರೀ ಕೆಲಸ.
ನೂರಾರು ಇಚ್ಚೆಗಳನ್ನು ಕಾನೂನುಗೊಳಿಸಬೇಕು,
ಸಾವಿರಾರು ಕಡೆ ಸಹಿ ಹಾಕಬೇಕು.
ಅದಕ್ಕಾಗಿ ಬಳಿಯಲ್ಲಿ ಸದಾ
ಇಟ್ಟುಕೊಂಡಿರುತ್ತೇನೆ ಎರಡು ಪೆನ್ನು.
ಕಪ್ಪು ಮಸಿ ತುಂಬಿರುವ ನಿಬ್ಬಿನ
ಪ್ರೆಸಿಡೆಂಟ್ ಪೆನ್ನು.
ಅದರ ಮಸಿ ತೀರಿದಾಗ
ಇರಲೆಂದು ಇಟ್ಟು
ಕೊಂಡಿರುವೆ
ಇನ್ನೊಂದು ಬಾಲ್‌ಪಾಯಿಂಟ್ ಪೆನ್ನು
ಉಪದೇಶಪತಿ ಎಂದು ಹೆಸರು ಅದಕೆ.

೮. ರಾಜ್ಯೋತ್ಸವ ಕವಿ ಸಮ್ಮೇಲನದ ಅಧ್ಯಕ್ಷರ ಪೀಠಿಕಾ ಭಾಷಣ

ಕರನಾಟಕಾ ಅಂದ್ರ ನಮ್ಮ ರಾಜ್ಯೇರೆಪಾ.
ಇದನ್ನ ಭಾಳ ಧೂಮಧಾಮಾಗಿ ನಾವು
ಆಚರಸಬೇಕು,
ನಾವೆಲ್ಲಾ ಇವತ್ನಿಂದ ಕನ್ನಡದವ್ರ್‌ಅ
ಆಗಬೇಕು
ಅಂತ ಮಂದಿ ಆಶಾ ಮಾಡ್ತಾರ್ರಿ. ಅದ್ಕ
ನಾವು ಕನಡಾನ್‌ಅ
ಇನ್ನ ಮ್ಯಾಲ ಎಲ್ಲಾ ಕಡೆ
ಮಾತಾಡಬೇಕ್ರೆಪಾ.

ನೋಡ್ರ್ಯಾ, ಇದರಾಗೇನರ ನೀವು
ಹೈಗೈ ಮಾಡಿದರ
ಬರೋಬರ ಆಗಾಕಿಲ್ಲ.
ಯಾಕ್ರೀ ಯಲ್ಲಪ್ಪಣ್ಣಾ?
ನಮ್ಮ ಕರನಾಟಕದ ಸಂಸಕರತಿ—

(ಅಂದಂಗ ಬಸಣ್ಣೆಪ್ಪಾ,
ಯಾವಾಕೆಕಿ ಸಂಸೇಕಾರತಿ?
ಯಾ ನಾಟಕ ಕಂಪನೀದಾಕಿ?
...ಹೋಗಲಿ ಬಿಡ ಈ ಮಂದ್ಯಾಗ
ಇದೆಲ್ಲಾ ಬ್ಯಾಡ ಈಗ. ಈ ಪೋಗರಾಮ ಮುಗದ
ಆ ಪೋಗರಾಮ ಸುರು ಆದ ಕೂಡಲೆ
ಅದನ್ನ ಮಾತಾಡೂನಂತ)

ಭಾಳ ಛೋಲೋ ಏನ್ರೆಪಾ. ಅಗದೀ ಚೆಂದ.
ಇವತ್ತ ಇಲ್ಲಿ ಇಷ್ಟ ಮಂದಿ

ಎಲ್ಲಾ ತಮ್ಮ ತಮ್ಮ ಪುಸ್ತಾಕಗೋಳನ ಹಿಡಕೊಂಡ
ಇಲ್ಲಾ ಹೊರಿಸಿಕೊಂಡ ಬಂದಾರಲ್ಲಾ,
ಆ ಸರಕೆಲ್ಲಾ ಈಗ ನಿಮ್ಮ ಮುಂದ ಬಿಚ್ಚತಾರ.
ಅವರೆಲ್ಲಾರ ವತೀಲೆ ನಿಮ್ಮ ಪರವಾನಿಗಿ
ಅಯ್ತೀ ಅಂದು ವಪ್ಪಿಗೀ ತೊಗೊಂಡು—
ಅಂದಂಗ ಅಚೀ ಕಡೆ ಓಣ್ಯಾಗೂ ಒಂದ
ಪೋಗರಾಮಕ ನಾನ್‌ಅ ಅಧ್ಯಕ್ಷ ಅದೇನೇನ್ರೆಪಾ—
ಹೋಗಿ ಬರ್ತೇನಿ.

ಇವತ್ತಿನ ದಿವಸಾ
ನಾವು
ಕನಡಾ ಅಂದ್ರೇನೂ ಅನ್ನೂದನ್ನ
ತಿಳಕೊಂಡು,
ಆ ಸಂಸೇಕಾರತೀ ಗುರ್ತಾ ಮಾಡಕೊಂಡು
ನನ್ನಂಗ ದೊಡ್ಡ ಮನಸ್ಯಾರಾಗ್ರೀ ಅಂತ
ನಮ್ಮೆಲ್ಲಾರ ವತೀಲೆ ನಂಬ್ರ ವಿನಂತಿ ಮಾಡ್ಕೋತೇನ್ರ್ಯಾ...

ಜೈ ನಮ್ ರಾಜ್ಯಾ!
ಜೈ ನಮ್ ಬಾಶಾ!

* * * *

೯. ಧಾರವಾಡದಲ್ಲಿ

ಧಾರವಾಡದಲ್ಲಿ ಇನ್ನೂ ಕತ್ತಲೆಯಿತ್ತು
ನನ್ನ ಮನಸ ಹಿಂಭಾಗದಲ್ಲಿ ಮನೆಯ ಈ ಭಾಗದಲ್ಲಿ
ಆಚೆ ಅಂಗಳದಲ್ಲಿ ಬಾಳ ತಳದಲ್ಲಿ ತನಗೆ ತಿಳಿತಿಳಿದಲ್ಲಿ
ಎಲೆ ಹೂವುಗಳ ಕೆಳಗೆ ಕಂಟಿಗಳ ಮರೆಗೆ ಗೋಡೆ ಬೇಲಿಗೆ ಒರಗಿ
ಹೊರಗೆ ಒಳಗೆ ಇಲ್ಲಿ ಅಲ್ಲಿ ಧಾರವಾಡದಲ್ಲಿ
ಇನ್ನೂ ಕತ್ತಲೆಯಿತ್ತು.

ಚುಮುಚುಮು ನಸುಕಿನಲಿ ರಶಿಮೆಯೊಡೆಯುವ ಹೊತ್ತು
ವಿಧವಿಧ ಪಾಟಲಗಳು ವಾಚ್ಯಾಂಗ ವ್ಯಂಗ್ಯಾಂಗ ಪಕಳೆ ಬಿಚ್ಚುವ ಹೊತ್ತು
ನಾ ನೀ ಅವರಿವರು ಅತ್ತಿತ್ತ ಸುತ್ತುವ ಹೊತ್ತು
ಧಾರವಾಡದಲ್ಲಿ ಕತ್ತಲೆಯ ಗಸ್ತು ಗಮ್ಮತ್ತು
ಸಾಗಿಯೇ ಇದ್ದವು
ಇನ್ನೂ
ಕತ್ತಲೆಯಿತ್ತು.

ಕಳ್ಳ ಕುಯ್ದವರು ಕಳ್ಳರಾದವರು ಕಳ್ಳು
ಕುಡಿದವರು ಲೋಹಿಯಾ ಹೆಸರು
ಹೇಳುತ್ತ ರಾಮಮನಹರನ ನಿತ್ಯ ಕೊಂದವರು
ಭಾಷಣದ ಅವೇ ರೂಪರೇಷೆ ಜೋಕು ಪಿಸುಮಾತು
ಹೊಸೆಯುತ್ತ ಕುಳಿತಾಗ ಧಾರವಾಡದಲ್ಲಿ ಇನ್ನೂ
ಕತ್ತಲೆಯಿತ್ತು.

ಜೇಪಿ ಹೆಸರಿನಲಿ ನಿರ್ಮಾಣ ನಿರ್ನಾಮಗೈಯುತ್ತ
ಕಂಡಕಂಡವರ ಖಂಡ ಮಾಂಸಗಳ ಬಗೆಯುತ್ತ
ಬರೆಯುತ್ತ ಸಿಕ್ಕಸಿಕ್ಕದ್ದನ್ನು ಸಿಕ್ಕಸಿಕ್ಕಂತೆ ಸಿಕ್ಕುಸಿಕ್ಕಾಗಿ
ಸಾರ್ವಜನಿಕರ ನಿಧಿಯ ಸಂತೃಪ್ತಿಯಲಿ ಮೇಯುತ್ತ
ಲೆಕ್ಕ ಕೇಳಿದರೆ ಲೆಕ್ಕಿಸದೆ ನಡೆಯುತ್ತ

ಹರಿತ ನಾಲಗೆಗಳನು ಉದ್ದಡ್ಡ ಹಿರಿಯುತ್ತ
ರಾಜಾರೋಷ ಕುಡಿದು ಅಡ್ಡಡ್ಡ ಬೀಳುತ್ತ
ಅಪ್ಸರೆಯರೆದುರು ಲಗಾಟ ಹೊಡೆಯುತ್ತ ಗಜಮು ನಿಲ್ಲುತ್ತ
ಗಿಮಿಕ್ಸ್ ಮಾಡುತ್ತ ತೂರಾಟ ನಡೆಸಿದ ಹೊತ್ತು
ಮಸಕುಮಸಕಾಗಿ ಧಾರವಾಡದಲ್ಲಿ ಇನ್ನೂ ಕತ್ತಲೆಯಿತ್ತು.

ರಾಜಕಾರಣದ ಕಳ್ಳ ಹಾದರಗಳು ಕರ್ತವ್ಯ ಚ್ಯುತಿಗಳು
ಬೀಬೀದಿಗೆ ನಡೆದ ನಾಟಕದ ಹೊಲಸು ಹುನ್ನಾರಗಳು
ಸಾಕಷ್ಟು ಕುಣಿದು ತಣಿದು ದಣಿದು
ಗೊರಕೆ ಹೊಡೆಯುವ ಹೊತ್ತು ಇನ್ನೂ ಕತ್ತಲೆಯಿತ್ತು.

ಮನಸು ಹದ ಕಳಕೊಂಡು ಅವರಿವರ ಮೇಲೆ
ರಾಡಿ ಚಿಮ್ಮುತ್ತ ಚೀರುತ್ತ ಹಲುಬುತ್ತಲಿದ್ದಾಗ ಧಾರವಾಡದಲ್ಲಿ
ಇನ್ನೂ ಕತ್ತಲೆಯಿತ್ತು.

ಬೆಳಗಾಗಬೇಕಾಗಿತ್ತು. ಕತ್ತಲೆ ಕಳೆದು ಬೆಳಕಾಗಬೇಕಾಗಿತ್ತು.
ಆದೀತು. ಆಗಲೇ ಅರ್ಥ ಕತ್ತಲೆಗೆ ಬಂದೀತು.
ಅಂದುಕೊಂಡಿರುವಾಗ
ಧಾರವಾಡದಲ್ಲಿ ಇನ್ನೂ ಕತ್ತಲೆಯಿತ್ತು.

* * * *

೧೦. ನೆನಪುಗಳು

ನನ್ನ ಮನೆಯೆದುರು ಬಯಲು ಜಾಗೆಯಲಿ
ನಿತ್ಯ ನಸುಕಿನಲಿ ಬೆಳಕು ಕಣ್ತೆರೆದೊಡನೆ
ನೂರಾರು ಬೆಳ್ಳಕ್ಕಿ ಸಾಲಾಗಿ ಗುಂಪಾಗಿ ಏಕಾಕಿ
ರೆಕ್ಕೆ ಬಡಿಯುತ್ತ ಕುಣಿಯುತ್ತ ನಲಿಯುತ್ತ ಕೇಕೆ
ಹಾಕುತ್ತ ಅಲೆಯುವವು ಸುತ್ತಮುತ್ತ.

ಮೋಡಗಳ ಘನಗಂಧ
ಸಂಜೆಯಾಗಸದಲ್ಲಿ
ಮಂದ ಬೆಳಕಿನ ದಾರದೆಳೆ ಗುಂಟ
ಒಂದೊಂದೆ ಹನಿ ಹನಿ ಹನಿ.

ತಮಾಲ ವೃಕ್ಷದ ತುತ್ತ ತುದಿಯಲ್ಲಿ ಅಡಗಿರುವ
ಕೋಗಿಲೆಯ ದನಿ ಮುಚ್ಚಿ ನಗುತಿರುವ
ಬೆಳದಿಂಗಳೆರಕೊಂಡ
ಎಳೆ ಎಳೆ ಎಳೆ ಎಲೆಗಳೆಷ್ಟೆಷ್ಟೋ ಗುಚ್ಛಗಳು.

ತುಟಿ ತುಟಿಗಳಪ್ಪಿ ನಗೆ ಚಿಮ್ಮಿ ಹೂವುಗಳು
ಹಸಿದ ನಲಿವಿನ ಕರುಣ ಶೃಂಗಾರ ಗೀತ.
ಎದೆಯ ತುಡಿತಕೆ ಮಿಡಿದು ಕಡೆದ ಬೆಣ್ಣೆಯ ರಾಗ
ಕಣ್ಣುಗಳನೆಳೆದಾಗ ಇಳಿಬಿದ್ದ ಜೇನು.

ಕತೆಯಲ್ಲಿ ಕನಸಿನಲಿ ಮಿಂಚಿನಲಿ ಇಳೆಯಾಗಿ
ಮಳೆಯಾಗಿ ಹೊಳೆಯಾಗಿ ಬದುಕಿನಲಿ ಕುಳೆಯಾಗಿ
ಅಂಕುರಂಕುರಗುಂಟ
ಹಾರಾಡತೊಡಗಿರುವ ನಗೆನಿಶಾನಿ.

ಇವಕೆ ಅಳಿವಿಲ್ಲ ಅಳವಿಲ್ಲ

ಆಳವಿಲ್ಲ ತಾಳವಿಲ್ಲ ತಳವಿಲ್ಲ
ಮಣ್ಣು ಮಣ್ಣನ್ನು ಸೇರುವ ತನಕ
ಇವು ನಿರಂತರ ಸೆಲೆಯೊಡೆವ ಹಸಿರು ವ್ಯಕ್ತಿ
ಇವಕ್ಕೆ ಸಾಲುವುದಿಲ್ಲ ಯಾವುದೂ ಅಭಿವ್ಯಕ್ತಿ.

* * * *

೬. ಮತ್ತೆ ಬಂದಿದ್ದಾಳೆ : ೧೯೮೨

೧. ಮತ್ತೆ ಬಂದಿದ್ದಾಳೆ

ಡವಗಿ ಬರ ಕಳೆದೆಷ್ಟೊ ವರ್ಷಗಳು ದಿನಮಾನ
ಇಡೀ ವಾತಾವರಣ ಕಲಕಿ ಹೊಲಸಾಗಿ
ಮಣ್ಣಿನಲಿ ಮನಸಿನಲಿ ಬೆಳೆದು ಹುಲುಸಾಗಿ
ಸೊಳ್ಳೆಗಳು ಕೊಳ್ಳೆಗಳು ಹುದುಲ ಮುಳ್ಳುಗಳು
ಅವತಾರವೆತ್ತಿಹವು ಮೃದುಲ ಸುಳ್ಳುಗಳು
ಮತ್ತೆ ಬರ ಬೆಂಕಿ ಬೇನೆಯ ದೇವಿಯಾಗಮನ
ಡವಗಿ ಬರ ಕಳೆದೆಷ್ಟೊ ವರ್ಷಗಳು ದಿನಮಾನ
ಮತ್ತೆ ಬಂದಿದ್ದಾಳೆ
ಮಾರಿ ಬಂದಿದ್ದಾಳೆ

ಪಂಥ ಕಟ್ಟಿದ್ದಾಳೆ ಸತ್ತು ಹುಟ್ಟಿದ್ದಾಳೆ
ಒಟ್ಟಾಗಿ ಹೊಟ್ಟಾಗಿ ಕಣ್ಣ ಕಸರಾಗಿ
ಸಿದಿಗೆಗಳ ಸಿಂಗಾರ ಬಣ್ಣ ಹಸಿರಾಗಿ
ರಕ್ತ ಬೀಜಾಸುರರ ನಿತ್ಯ ಬಸಿರಾಗಿ
ಹೊಟ್ಟೆಗಿಕ್ಕುತ ಕಿಚ್ಚು ನುಚ್ಚು ಹುಸಿ ರಾಗಿ
ಅತ್ತ ಹುಟ್ಟಿದ್ದಾಳೆ ಇತ್ತ ಕುಟ್ಟಿದ್ದಾಳೆ
ಪಂಥ ಕಟ್ಟಿದ್ದಾಳೆ ಸತ್ತು ಹುಟ್ಟಿದ್ದಾಳೆ
ಮತ್ತೆ ಬಂದಿದ್ದಾಳೆ
ಮಾರಿ ಬಂದಿದ್ದಾಳೆ

ಮತ್ತೆ ಬಂದಿದ್ದಾಳೆ ಮತ್ತು ತಂದಿದ್ದಾಳೆ
ನಮ್ಮ ಗುಣ ಅವಗುಣಾ ಬಹುಗುಣಾಗೊಳಿಸಿ

ಸರ್ವ ಪುರುಷತ್ವಗಳ ಬರಿ ಉಣಾಗೊಳಿಸಿ
ಎಲ್ಲರುಸಿರಾಟಗಳ ಹುಸಿ ಮಜಾ ಮಾಡಿ
ತೃಷಿತ ಕನಸುಗಳ ನಗೆ ಅಸಿಗೆ ಜಾಲಾಡಿ
ಹೊತ್ತು ತಿಂದಿದ್ದಾಳೆ ಕುತ್ತು ತಂದಿದ್ದಾಳೆ
ಮತ್ತೆ ಬಂದಿದ್ದಾಳೆ ಮತ್ತು ತಂದಿದ್ದಾಳೆ
ಮತ್ತೆ ಬಂದಿದ್ದಾಳೆ
ಮಾರಿ ಬಂದಿದ್ದಾಳೆ

ನಿಮ್ಮೆಲ್ಲರಿಗೆ ತಾಯಿ ನಾನೊಬ್ಬಳೆನ್ನುತ್ತ
ದನಿಯಿದ್ದ ಬಾಯಿಗಳ ಬಡಬಡಾ ಮುಚ್ಚಿ
ಹಿರಿಕಿರಿಯ ಗಾಯಗಳ ಕಚಪಚಾ ಕೊಚ್ಚಿ
ಮುನ್ನಡೆದ ನಾವೆಗಳ ಹಾಯಿ ಹರಿದಾಡಿ
ಭಂಡ ಮಾಯೆಗಳನ್ನು ಮಟಮಾಯ ಮಾಡಿ
ನಿಮ್ಮಂಥ ಕಳ್ಳರಿಗೆ ನಾಯಿ ನಾನೆನ್ನುತ್ತ
ನಿಮ್ಮೆಲ್ಲರಿಗೆ ತಾಯಿ ನಾನೊಬ್ಬಳೆನ್ನುತ್ತ
ಮತ್ತೆ ಬಂದಿದ್ದಾಳೆ
ಮಾರಿ ಬಂದಿದ್ದಾಳೆ

ಪೂತನಿಯ ನಾಲಗೆಯ ಹಿರಿದು ಚಾಚಿದ್ದಾಳೆ
ಗೋಳ ಚಿಮ್ಮಿದ್ದಾಳೆ ಪೂರ್ವ ಪಶ್ಚಿಮದಿ
ಖಳರು ಹರಿಸಿದ್ದಾರೆ ನಿತ್ಯ ಸ್ವಸ್ತಿ–ನದಿ
ಬತ್ತಿ ಹೋಗುವುದೆ ನುಡಿ, ಇರವೆ ಸಪ್ತಪದಿ
ಮೃಗಗಳಾಗಿದ್ದೇವೆ ಸಿಂಹ–ಕಾನನದಿ
ನಾಡಿನುದ್ದಕು ತೋಳ ತೋಳ ಬಾಚಿದ್ದಾಳೆ
ಪೂತನಿಯ ನಾಲಗೆಯ ಹಿರಿದು ಚಾಚಿದ್ದಾಳೆ
ಮತ್ತೆ ಬಂದಿದ್ದಾಳೆ
ಮಾರಿ ಬಂದಿದ್ದಾಳೆ

ಇತಿಹಾಸದುದ್ದಕ್ಕೆ ಭವಿತವ್ಯದೆತ್ತರಕೆ

ಹುಳು ಪ್ರಪಂಚವ ಬೆಳೆಸಿ ಗೆಲುವ ಪಡೆದಿಹಳು
ಜಯ ವಿಜಯರೊಡನೆ ವಿಷಗಡಲ ಕಡೆದಿಹಳು
ರುಂಡ ಕುಂಡಗಳಲ್ಲಿ ಈಸಿ ನೆಗೆದಿಹಳು
ಮುಂಡೆ ಚಂಡೆಗಳನ್ನು ತಟ್ಟಿ ನಗುತಿಹಳು
ದಕ್ಷಿಣೋತ್ತರದಲ್ಲಿ ನಿಜ ನಾಮ ಬಿತ್ತರಕೆ
ಇತಿಹಾಸದುದ್ದಕ್ಕೆ ಭವಿತವ್ಯದೆತ್ತರಕೆ
ಮತ್ತೆ ಬಂದಿದ್ದಾಳೆ
ಮಾರಿ ಬಂದಿದ್ದಾಳೆ

ಶಾಸನದಿ ಭಾಷಣದಿ ಕುಣಿವ ಗಂಡಾಂತರವು
ಮಾತು ಮಾತಿಗೆ ಕತ್ತಿ ಕೊಡುತಿಹವು ಮುತ್ತು
ರೇಶಿಮೆಯ ಅನೃತಗಳು ನಡೆಸಿಹವು ಗತ್ತು
ರಾಕ್ಷಸೀ ಸರ್ಪಗಳು ಸುಳಿದಿಹವು ಸುತ್ತು
ನಾಡಿನೊಳ ಹೊರಗೆಲ್ಲ ಇವಳದೇ ಸೊತ್ತು
ಪ್ರಳಯಾಂತ ಭಗ್ನತೆಯ ಭೋ ಚಂಡ ಮಾರುತವು
ಶಾಸನದಿ ಭಾಷಣದಿ ಕುಣಿವ ಗಂಡಾಂತರವು
ಮತ್ತೆ ಬಂದಿದ್ದಾಳೆ
ಮಾರಿ ಬಂದಿದ್ದಾಳೆ

ನಮ್ಮ ನಿಮ್ಮನ್ನೆಲ್ಲ ಮಾರಿ ಬಂದಿದ್ದಾಳೆ
ಬುದ್ಧಿಗಳು ಜೀವಿಗಳು ಮುಷ್ಟಿಯಲಿ ಬದ್ಧ
ಪ್ರತಿಭೆಗಳು ಶಕ್ತಿಗಳು ಇವಳ ಸೇವೆಗೆ ಸಿದ್ಧ
ಹೆಸರು ಕೇಳಿದ ಮುಕ್ತ ಗಂಟಲು ನಿರುದ್ಧ
ಬಾಳ ಬದುಕಿನ ಶಬ್ದ ಕೋಶದಿ ನಿಷಿದ್ಧ
ನೆತ್ತರೋಕುಳಿಯಾಡಿ ಬೀಗಿ ಮೆರೆದಿದ್ದಾಳೆ
ನಮ್ಮ ನಿಮ್ಮನ್ನೆಲ್ಲ ಮಾರಿ ಬಂದಿದ್ದಾಳೆ
ಮತ್ತೆ ಬಂದಿದ್ದಾಳೆ
ಮಾರಿ ಬಂದಿದ್ದಾಳೆ

ಗಂಗೆಯಲಿ ಮುಳುಗೆದ್ದು ತುಂಗೆಯಲಿ ತೇಲಿಹಳು
ದೇಶಕ್ಕೆ ಸರ್ವಸ್ವ ಕೊಟ್ಟಿಹ ವಿರಾಗಿ
ಅದಕಾಗಿ ಸರ್ವಸ್ವ ಸ್ವಾಹಿಸಿದ ನಾಗಿ
ದಿಟ್ಟತೆಯ ಬೆಟ್ಟಗಳನೇರಿ ಬಂದಿಹಳು
ಕ್ರೂರ ಪೂರಗಳನ್ನು ಮೀರಿ ನಿಂದಿಹಳು
ಭಂಗಿಯಲಿ ಮಾತಾಡಿ ಗುಂಗಿನಲಿ ತೇಲಿಹಳು
ಗಂಗೆಯಲಿ ಮುಳುಗೆದ್ದು ತುಂಗೆಯಲಿ ತೇಲಿಹಳು
ಮತ್ತೆ ಬಂದಿದ್ದಾಳೆ
ಮಾರಿ ಬಂದಿದ್ದಾಳೆ

ಕಣ್ಣಿನತಿ ಹಾಸಗಳು ಮಣ್ಣಿನಿತಿಹಾಸದಲಿ
ಮುಗ್ಗರಿಸಿ ಬೀಳುವುದು ನೆನಪಿರಲಿ ಮತಿಗೆ
ಇಲ್ಲದಿರೆ ತಿಳಿಸೋಣ ನಾವೆ ಶ್ರೀಮತಿಗೆ
ಇಂದಿರುವೆ ಎಂದಿರುವೆ ಬಂದಿರುವೆ ತಾಳು
ಛಿದ್ರಗಳ ಮುದ್ರಿಸಿದೆ ಇವಳ ಕಿರಿ ಬಾಳು
ಅಧಿಕಾರದಾನಂದ ಮದಿತ ವ್ಯಾಮೋಹದಲಿ
ಕಣ್ಣಿನತಿ ಹಾಸಗಳು ಮಣ್ಣಿನಿತಿಹಾಸದಲಿ
ಮತ್ತೆ ಬಂದಿದ್ದಾಳೆ
ಮಾರಿ ಬಂದಿದ್ದಾಳೆ

ಎಚ್ಚರೆಚ್ಚರವೆಂದು ಎಚ್ಚರವ ತಪ್ಪಿಸುತ
ಶೂನ್ಯ ಮರ್ಯಾದೆಯಲಿ ಇದು ನಿತ್ಯ ಬಾಧೆ
ಕನಲದಿರಿ ಸ್ನೇಹಿತರೆ ಕಟ್ಟಿ ಹೊಸ ಗಾದೆ
ವಂಚಕರ ಸಂಚು ಕರೆಗೆ ಬೆರಗಾಗುವುದೆ?
ವಿಶ್ವಾಸವಲುಗಿಹುದೆ ಹೀಗೆ ನಲುಗುವುದೆ?
ಕುದುರೆ ಖಚ್ಚರಗಳನು ಹುಚ್ಚರಿಗೆ ಒಪ್ಪಿಸುತ
ಎಚ್ಚರೆಚ್ಚರವೆಂದು ಎಚ್ಚರವ ತಪ್ಪಿಸುತ
ಮತ್ತೆ ಬಂದಿದ್ದಾಳೆ
ಮಾರಿ ಬಂದಿದ್ದಾಳೆ

ಬೆದರದಿರಿ ಬೆಚ್ಚದಿರಿ ಮಾರಿ ಬಂದಿಹಳೆಂದು
ಹೊಳೆಗೆ ನೆರೆ ಶಿರಕೆ ಹೊರೆ ಬಹುಕಾಲವಿರದು
ಬೆಕ್ಕು ನೆಕ್ಕಿದ ಸೊಕ್ಕು ಗಕ್ಕನಿಳಿಯುವುದು
ಸಂಚು ಹೂಡಿದ ಕೆಂಚರೆಲ್ಲರನು ತರೆದು
ಕಾರ್ಮೋಡ ಕವಿದಾಗ ಮಿಂಚು ಬರದಿರದು
ನಾಗರವ ಮೆಚ್ಚದಿರಿ ಭೂರಿ ಸುಂದರವೆಂದು
ಬೆದರದಿರಿ ಬೆಚ್ಚದಿರಿ ಮಾರಿ ಬಂದಿಹಳೆಂದು

ಬೆಕ್ಕು ನೆಕ್ಕಿದ ಸೊಕ್ಕು ಗಕ್ಕನಿಳಿಯುವುದು

* * * *

೨. ಶಬ್ದದಾರತಿ

ತಾಯೆ ಮುಗ್ಧ ಭಾರತಿ
ಇದುವೆ ಶಬ್ದದಾರತಿ

ಮನೆಮನೆಗಳ ಮನಮನಗಳ
ಕತೆಯು ನಿನಗೆ ತರ್ಪಣ
ನಮ್ಮ ನೂರು ಭಾವ ಭವಕೆ
ನೀ ಪವಿತ್ರ ದರ್ಪಣ

ಗಿರಿ ನದಿಗಳು ಹದಿ ವಯಗಳು
ನಿನ್ನ ಉಸಿರ ಧಾರೆಯು
ಮುದಿ ಮತಿಗಳು ಕ್ಷಣ ಕ್ಷಣಗಳು
ನಿನ್ನ ನಭದ ತಾರೆಯು

ಬಗೆಬಗೆ ಹಗೆ–ನಗೆ–ಹೊಗೆಗಳು
ನಿತ್ತದಾಟಪಾಟವು
ಲೆಕ್ಕಕಿರದ ಜೀವಗಣಿತ
ನಿನ್ನ ಕ್ಷಣದ ಮಾಟವು

ಕಾಲ, ರಾಜ, ವೀರರೆಲ್ಲ
ದಾಳಿ ಮಾಡಿ ಮಡಿದರು
ನೀನು ಮಾತ್ರ ನಿತ್ಯ ಸತ್ಯ
ವೇದ ಕುಲದ ಸುರ–ತರು

ತಾಯೆ ಮುಗ್ಧ ಭಾರತಿ
ಇದುವೆ ಶಬ್ದದಾರತಿ

* * * *

೩. ನಾವು ಭಾರತೀಯರು

ನಾವು ಭಾರತೀಯರು
ವಿಮಲ ಭಾವ ವೀರರು

ಗವಿಯ ಹೊಕ್ಕು ಹೊರಗೆ
ಬಂದ ನಾಗರಿಕ ಪುತ್ರರು
ಬೆಂಕಿ ಬೆಳಕು ಮಾತಿಗರ್ಥ
ನೀಡಿದಂಥ ಶಕ್ತರು

ದುರ್ಗೆಯನ್ನು ಪೂಜಿಸುತ್ತ
ದುರ್ಗಗಳನು ರಕ್ಷಿಸಿ
ದಾಸ್ಯ ಕಳಚಿ ಮುಕ್ತಿ ತಂದ
ಸರ್ವ ತಂತ್ರ ರುದ್ರರು

ಹಗಲು ಇರುಳು ಒಂದೆ ಮಾಡಿ
ಮನುಜ ಕುಲವ ರೂಪಿಸಿ
ಇತಿಹಾಸದ ಪುಟಪುಟದಲಿ
ಮುದ್ರೆಗೊಳುವ ಭದ್ರರು

ನಂಜನುಂಡು ಸುಧೆಯ ಸುರಿದು
ಜಗವ ಗುಡಿಯ ಮಾಡುತ
ಜನತೆಯನ್ನೆ ದೇವರಂತೆ
ಕಂಡ ಭಕ್ತಿ–ಶುದ್ಧರು

ನಾವು ಭಾರತೀಯರು
ವಿಮಲ ಭಾವ ವೀರರು.

* * * *

೪. ಬನ್ನಿರಣ್ಣ ಬನ್ನಿರಿ

ಬನ್ನಿರಣ್ಣ ಬನ್ನಿರಿ
ಬದುಕ ಸೊಗಸ ತನ್ನಿರಿ

ವೇಷ ಭಾಷೆ ಜಾತಿ ಪಂಥ
ನೂರು ಮಾತುಗಳನು ಹೇಳಿ
ಮೋಸ ಮಾಡಬೇಡಿರಣ್ಣ
ನಮ್ಮ ಎದೆಗಳನ್ನೆ ಸೀಳಿ

ಸಾವಿರಾರು ವರ್ಷದಿಂದ
ನೋವು ಸಾವುಗಳನು ಸಹಿಸಿ
ಒಂದು ನೆಲೆಗೆ ಬಂದು ನಿಂತ
ಭರತ ಕುಲವ ಮತ್ತೆ ಬೆಳೆಸಿ

ವರ್ತಮಾನ ಗರ್ಭದೊಳಗೆ
ಮೊಳಕೆಯೊಡೆಯುತಿರುವ ಸಮಯ
ಚಿಗುರಬೇಕು ಹಸುಳೆ ಮುಖದಿ
ಆಗಬೇಕು ಮುಖ್ಯ ವಿಷಯ

ಸರ್ವ ಭೇದಗಳನು ಮರೆತು
ಇಂದು ಪ್ರಮುಖ ಘಟ್ಟದಲ್ಲಿ
ಎಲ್ಲರೊಂದೆ ಹೃದಯವಾಗಿ
ಮೊಳಗಬೇಕು ರಾಷ್ಟ್ರದಲ್ಲಿ

ಕೂಡಿ ಕೂಡಿ ಕೂಡಬೇಕು
ವಿಷಮತೆಗಳ ದೂಡಬೇಕು
ನಂಜನುಂಡು ಕೆಚ್ಚಿನಿಂದ
ಹೋರಾಟವ ಹೂಡಬೇಕು

ಅಲ್ಪ ಭಾವ ದುಷ್ಟ ಬೀಜ–
ಗಳನು ನೀವು ಬಿತ್ತಬೇಡಿ
ಹುಗಿದು ಹೋದ ಭಿನ್ನ ಮತಗ–
ಳನ್ನು ಮತೆ ಎತ್ತಬೇಡಿ

ಬನ್ನಿರೆಲ್ಲ ಒಂದೆ ರಂಗ–
ದಲ್ಲಿ ನಟಿಸಿ ನಲಿದು ನಿಲಲು
ನಂಬಿ ಪ್ರೀತಿಯಿಂದ ಬಂದ
ಎಲ್ಲರನ್ನು ಅಪ್ಪಿಕೊಳಲು

ಐಕ್ಯ ಭಾವದಿಂದ ದುಡಿದು
ಘನತೆವೆತ್ತ ದೇಶವನ್ನು
ತ್ಯಾಗ ನಿಷ್ಠೆ ಶ್ರಮದ ಜೊತೆಗೆ
ಕಟ್ಟಬೇಕು ನಾವು ಇನ್ನು

ಬನ್ನಿರಣ್ಣ ಬನ್ನಿರಿ
ಬದುಕ ಸೊಗಸ ತನ್ನಿರಿ.

* * * *

೫. ಇಲ್ಲ ಭಾರತ ಬರಿಯ ಕನಸಿನಲ್ಲಿ

ಬಂಧುಗಳೆ, ಸಾಕಿನ್ನು ಇಷ್ಟು ದಿನ ಕಳೆದದ್ದು
ಮುಳ್ಳು–ಮೋಸಗಳನ್ನೆ ಸುತ್ತಲೂ ಬೆಳೆದದ್ದು
ಇಲ್ಲ ಭಾರತ ಬರಿಯ ಕನಸಿನಲ್ಲಿ.
ಈ ದೇಶ ನಿತ್ಯವೂ ನಲಿದು ಉಸಿರಾಡುವುದು
ಪ್ರಕೃತಿ ನಳನಳಿಸುತ್ತ ತೊನೆದು ಹಸಿರಾಗುವುದು
ನಿಮ್ಮ ವ್ಯವಹಾರದಲಿ ಮನಸಿನಲ್ಲಿ.

ಬರಿಯ ಹುಲು ಮಾತಿನಲಿ ವಚನಗಳ ಸೂಸಿದರೆ
ವೇಷದಾವೇಶಗಳ ವಾಸನೆಯ ಪೂಸಿದರೆ
ಜನತೆ ನಂಬುವುದೆಂದು ಭಾವಿಸಿದಿರಾ?
ಭರತಮಾತೆಯ ಮಾತು ಮಾತಿನಲಿ ಬಂಧಿಸುತ
ಅಧಿಕಾರದಾಮಿಷದಿ ಕಂಡವರ ವಂದಿಸುತ
ನಡೆಯುವುದೆ ನಡೆಯೆಂದು ಆಶಿಸಿದಿರಾ?

ಸಂಜೆ–ಮುಂಜಾವಿನಲಿ ವಂಚನೆಯ ಸಂಚಿನಲಿ
ಮುಳುಗುತ್ತ ತೇಲುತ್ತ ಆಯುಷ್ಯದಂಚಿನಲಿ
ಸತ್ಯ, ಪ್ರಾಮಾಣಿಕತೆ ಬೋಧಿಸುವಿರಾ?
ಬದುಕು ಕಲಿಸುವ ಪಾಠಗಳನಾಚೆ ತೂರುತ್ತ
ಸುಮ್ಮನೇ ಎಲ್ಲರನು ಎಂದಿಗೂ ದೂರುತ್ತ
ಸಾಗಿರುವ ನಿಮ್ಮನ್ನೆ ಶೋಧಿಸುವಿರಾ?

ಉಪದೇಶ ಉಪವಾಸ ನಾಡ ಕಟ್ಟುವುದಿಲ್ಲ
ಪ್ರೀತಿಯಿಲ್ಲದ ನಡತೆ ಎದೆಯ ತಟ್ಟುವುದಿಲ್ಲ
ನಿಜದ ಮಾತನು ನೀವು ಅರಿತಿಲ್ಲವೆ?
ಕಲ್ಲು ಮುಳ್ಳನು ತುಳಿದ ದುಡಿಮೆ ಪ್ರಗತಿಯ ಅನ್ನ
ಸಹನೆ ಸಂತೋಷಗಳೆ ಆಗ ಲಭಿಸುವ ಚಿನ್ನ
ಸ್ವಾರ್ಥ ಸಂಕೋಚಗಳ ಮರೆತಿಲ್ಲವೆ?

ಮುಳ್ಳು ಮೋಸಗಳನ್ನೆ ಸುತ್ತಲೂ ಬೆಳೆದದ್ದು
ಬಂಧುಗಳೆ, ಸಾಕಿನ್ನು ಇಷ್ಟು ದಿನ ಕಳೆದದ್ದು
ಇಲ್ಲ ಭಾರತ ಬರಿಯ ಕನಸಿನಲ್ಲಿ.

* * * *

೬. ಅಭಯ

ಭಾರತಾಂಬೆಯೆ ನಾವು ನಿನ್ನಯ
ಕನಸ ದೀಪದ ಕುಡಿಗಳು
ಪ್ರಜರು ಪ್ರಭುಗಳು ಸಹಜ ಧೈರ್ಯದ
ದಿಟದ ನಲಿವಿನ ನುಡಿಗಳು

ಅಭಯ ಕರವನು ಮೇಲೆ ಹಿಡಿದಿದೆ
ಹಿರಿಯ ಹಿಮಗಿರಿ ದಿನದಿನ
ಚರಣ ತೊಳೆದಿವೆ ಮೂರು ಸಾಗರ
ಪ್ರಕೃತಿ ನೀಡಿದೆ ತನು–ಮನ

ತಾಯೆ ಯಾತಕೆ ಇನ್ನು ಕಾತರ
ಬೇಡ ಪರರೆದುರನುನಯ
ನಿನಗೆ ಲಭಿಸಲಿ ನಿಜದ ವಿಜಯವು
ತೊರೆದು ಹೋಗಲಿ ಹುಲು ಭಯ

ಭಾರತಾಂಬೆಯೆ
ನಾವು ನಿನ್ನಯ
ಕನಸ ದೀಪದ ಕುಡಿಗಳು
ದಿಟದ ನಲಿವಿನ ನುಡಿಗಳು.

* * * *

೭. ಬಾರೆ ತಾಯಿ ಹರಸು ಬಾ

ಬಾರೆ ತಾಯಿ ಹರಸು ಬಾ

ಹಿಮದ ಗಿರಿಯ ಮುಡಿಗೆ ಇಡುವೆ
ಗಂಗೆಯಾಗಿ ತನುವ ತೊಳೆವೆ
ಪ್ರಕೃತಿಯಾಗಿ ನೆರಳ ನೆಡುವೆ
ಜಲಧಿಯಾಗಿ ಪಾದ ತೊಳೆವೆ
ಬಾರೆ ತಾಯಿ ಭಾರತಾಂಬೆ
ಬಾರೆ ನನ್ನ ಹರಸು ಬಾ

ಗತಿಸಿ ಹೋದ ಕತೆಯ ದೀಪ
ಜ್ವಲಿಸಿ ಕಳೆವೆ ಅಂಧಕಾರ
ಕಳೆವೆ ನಿನ್ನ ವ್ಯಥೆಯ ತಾಪ
ತರುವೆ ನಗೆಯ ಬೆಳಕ ಹಾರ
ಬಾರೆ ತಾಯಿ ಭಾರತಾಂಬೆ
ಬಾರೆ ನನ್ನ ಕನಸು ಬಾ

ಹರ್ಷ ಶೋಕಗಳನು ಹೊತ್ತು
ಹೇಗೊ ಕಳೆಯುತಿಹೆನು ಹೊತ್ತು
ನೀನೆ ಕಳೆಯಬಲ್ಲೆ ಕುತ್ತು
ಎಲ್ಲ ದಾರಿ ನಿನಗೆ ಗೊತ್ತು
ಬಾರೆ ತಾಯಿ ಭಾರತಾಂಬೆ
ಬಾರೆ ನನ್ನ ಕನಸು ಬಾ

* * * *

೮. ಬಂದಿಹೆವು

ಭಾರತಮಾತೆಯ ಕಣ್ಣಿನ ಮಣಿಗಳು
ಸ್ವೇದಾಲಂಕೃತ ಮಣ್ಣಿನ ಧಣಿಗಳು
ದಾಸ್ಯದ ಭ್ರಷ್ಟತೆ ಕಚ್ಚುವ ಫಣಿಗಳು
ನಾಳಿನ ಪ್ರಗತಿಯ ಸತ್ಯದ ಕಣಿಗಳು
ನಿಂದಿಹೆವು
ತಾಯಿಯ ಸೇವೆಗೆ ನಿಂದಿಹೆವು

ಉತ್ಸಾಹದ ಚಿರ ಚಿಲುಮೆಯ ತೊರೆಗಳು
ವೈರಿಯ ಪ್ರಾಣಕೆ ಖಡ್ಗಗಳೊರೆಗಳು
ಸ್ವಾತಂತ್ರ್ಯದ ನಿಜ ರಕ್ಷಕ ದೊರೆಗಳು
ಗೌರವ ಮಾನದ ಪುಣ್ಯದ ಹೊರೆಗಳು
ತಂದಿಹೆವು
ದೇಶಕೆ ಘನತೆಯ ತಂದಿಹೆವು

ಕುಣಿದಿದೆ ಕಣಕಣ ನಾಡಿನ ವೃದ್ಧರು
ತರುಣರು ಶಿಶುಗಳು ಸ್ತ್ರೀ ಪರಿಶುದ್ಧರು
ಕೊಂಕರು ಮಂಕರು ಸರಳರು ಸಿದ್ಧರು
ಮುನ್ನಡೆಸಿರುವರು ಬಸವರು ಬುದ್ಧರು
ಬಂದಿಹೆವು
ಬೆಳಕಿನ ರಥಿಕರು ಬಂದಿಹೆವು

ತಾಯಿಯ ಸೇವೆಗೆ ನಿಂದಿಹೆವು
ದೇಶಕೆ ಘನತೆಯ ತಂದಿಹೆವು
ಬೆಳಕಿನ ರಥಿಕರು ಬಂದಿಹೆವು

* * * *

೯. ಸ್ವಪ್ನ

ನಿನ್ನ ನೆನಪಿನ ಹೊನ್ನ ಕನಸಿನ
ದಿವ್ಯ ದ್ವಾರವ ತೆರೆಯುವೆ
ನನ್ನ ಮನಸಿನ ಬಣ್ಣ ಬಣ್ಣದ
ಬನ್ನಗಳ ನಾ ಮರೆಯುವೆ

ಬದುಕಿನಲಿ ಕೆದಕೆದಕಿ ಬರುತಿಹ
ನೋವು ಸಾವಿನ ಆಟವು
ತುಂಬಿ ತನು ಮನ ಇಂತು ಅನುದಿನ
ಎಂಥ ಮೋಹಕ ಮಾಟವು

ನಿತ್ಯ ಚಂಚಲ ಮಧುರ ಜೀವನ
ಯಾಕೆ ಭಾವದ ಶೂಲವು
ಗಗನ ಮಂಡಲದಮರ ಲತೆಯಲಿ
ತೇಲುತಿಹ ಚಿರ ಮೂಲವು

ಏನೆ ಬಂದರು ನನ್ನ ನಾವೆಗೆ
ನೀನೆ ನಿಲುವಿನ ಬಂದರ
ಹುಸಿಯ ಕಸಿವಿಸಿ ಮೋಸ ಬಿಸಿಲಿಗೆ
ನಿಶಿತ ನೆರಳಿನ ಹಂದರ

ತೊರೆದು ಭೀತಿಯ ಅಮಲ ಪ್ರೀತಿಯ
ಸುಧೆಯ ಸೂಸಿದ ಶಶಿಮಣಿ
ದಿನವು ಕೇಳಲಿ ನನ್ನ ಕಿವಿಯಲಿ
ವಿಮಲ ಗೀತದ ಶುಚಿ ದನಿ

ಸ್ಮೃತಿಯ ಸಹಚರಿ ಮುದದ ಮದಕರಿ
ಮನಸ ಕಸಿದಿಹ ಚಂದನ

ಸತ್ಯವಾಗಲಿ ಶ್ರೇಷ್ಠವಾಗಲಿ
ಹೃದಯ ಪೀಠದ ನಂದನ.

* * * *

೧೦. ಬೆಳಗು

ಮನೆಮನೆಯ ಅಂಗಳದ ತಂಗಳು ಪಾರಿಜಾತಗಳುದುರಿ
ಚೆದುರುವುದ ಕಂಡೆ ಪ್ರಮದೆಯರ ಸಿಂಗಾರ
ಮಲ್ಲಿಗೆ ದಂಡೆ ಮಾನಿನಿಯರೆರಡೆರಡು ಬಂಡೆ
ತಂದೆ ಎಲ್ಲಿಗೆ ಶಿವಾ ಈ ಭವಾವಳಿ ಭಾರ

ಎಂದೆ ನರಳುವರ ತಂಡೋಪತಂಡ ಭೇರುಂಡ
ಎದೆ ಸೀಳಿ ರಕ್ತ ಕಾರುವುದ ಕಂಡೆ ಶವ
ಕೊಳೆತು ನಾರುವುದ ಸೆರಗು ಜಾರುವುದ
ಮದಿತ ಅಧಿಕಾರ ನಶಿಸುವುದ ನವನವ

ಬೆಳಗು ಬೈಗಿನಲಿ ಸೊಬಗು ಸೋಗಿನಲಿ ಕರಗಿ
ಬೆಳದಿಂಗಳರ್ಕ ಸೂರ್ಯಗೋಳದ ತರ್ಕ
ಶಿಶುಗಳವಿರತ ಶಶಿ–ಹಾಸ ಮಧು–ಪರ್ಕ
ಧೂಮ್ರಲೋಕದಿ ಸ್ವಪ್ನ–ಕುಂಡದಿ ಗಲಿತ ನಿಃಸ್ವರದಿ

ಪಿಕ ಕಾಕವಾಗುವುದ ನಿತ್ಯ ಬೆಳಗಲಿ ಕಂಡೆ
ಹಿತ–ಗಣಿತ ಶಾಖವಾಗುವುದ ಉಸಿರ ಹಡಗದಿ ಕಂಡೆ.

* * * *

೧೧. ಸುಖ

ನೋವುಗಳಿಗೆ ನಿರಂತರ ಇತಿಹಾಸವಾಗುವ ಭಯವಿದೆ
ನಾವೆಗಳಿಗೆ ಒಡೆಯುವ ವಿಚ್ಛಿದ್ರ ತಾಪವಿದೆ
ಹಾಯಿಗಳಿಗೆ ಹರಿಯುವ ಚುಚ್ಚುವ ಹವೆಯಿದೆ
ದೇಹ–ಭೋಗಗಳಿಗೆ ಶೇಷ–ರೋಗವಾಗುವ ಶಾಪವಿದೆ

ಈ ನೆಲದ ಬದುಕಿನಲಿ ಸುಖ ಎಲ್ಲಿಗೆ ಮುಖ
ತಿರುವಿದೆ? ಯಾವ ಮರದಲ್ಲಿ ಫಲಿಸುತ್ತದೆ ಯಾವ
ರೆಂಬೆಯಲಿ ಅರಳುತ್ತದೆ ಹಾದಿಯಲಿ ಹರಿವ ಹಾವ
ಮೈಯಾಗಿ ಹೊಳೆಯುತ್ತದೆ ಯಾವ ಗಗನದ ಸಖ–

ಖಗವಾಗಿ ಉಲಿಯುತ್ತದೆ ಯಾವ ಶಬ್ದದಲ್ಲಿ ಧ್ವನಿಸುತ್ತದೆ
ಯಾವ ಮಗ್ಗುಲದಲ್ಲಿ ನಲಿಯುತ್ತದೆ ಹೊರಚೆಲ್ಲಿದೆ
ಕಲಶದಲಿ ಹೊರಹೊಮ್ಮಿದೆ ಯಾವ ಪಾತ್ರೆಯ ಕಂಠ–ಸಂಗೀತದಲಿ
ತಂಪಾಗಿದೆ ಯಾವ ತಾಪದಲಿ ಅನುರಣಿಸುತ್ತದೆ
ಇಂಪಾಗಿ ಯಾರ ತಳಮಳದಲ್ಲಿ ಲಯ ಎಂಥ ಗೀತದಲಿ
ಯಾವ ಮನೆಗಳಲಿ ಯಾವ ಕಂಗಳಲಿ ಬೆಳಕಾಗಿದೆ ಎಲ್ಲಿದೆ?

* * * *

೧೨. ಬೇಂದ್ರೆ

ಎತ್ತೆತ್ತರ ವಿಶೇಷಣಗಳುತ್ತುಂಗ ಶಿಖರ ಮೀರಿ
ವೈಕುಂಠದೆತ್ತರಕೆ ಏರಿ
ನಿಂತ ನಿಲುವಿನ ಧೀರ. ಇದ್ದುದಕ್ಕಿಂತಲೂ
ಇರದ ಹಾರುವ
ಕಾಲ ಹಕ್ಕಿಯ ಕಾಲು ಹಿಡಿದು
ಕಾವ್ಯ ಕಿನ್ನರಿ ಮಿಡಿದು, ಕುಡಿದು ಸ್ವರಸುಧೆ
ಅಹಂ ದ್ವೇಷ ಉದ್ರೇಕ ವ್ಯಥೆ
ಪ್ರೀತಿ ಭೂತಿಗಳಲ್ಲಿ ಪ್ರತಿಯೊಂದು ಕ್ಷಣದಲ್ಲಿ ಘನೀಭೂತ
ಈ ಹೂತ ಬೇಂದ್ರೆ.

ನಮ್ಮ ಕಾಳಿದಾಸನನೆ ನಮಗೆ ಜರ್ಮನರು ಕೊಟ್ಟಂತೆ
ಕನ್ನಡವ ನಮಗೇನೆ ಕನ್ನಡಿಸಿ ನುಡಿಸಿದವ
ಶಬ್ದಗೋಪುರ ಹತ್ತಿ ನಾದಗಂಟೆಯ ಬಡಿದು
ಕಾದ ಕವಿಭಾವಗಳ ಪದಗಂಟು ಬಿಡಿಸಿದವ
ನಮ್ಮ ಅಡ್ಡ ಅಗಲ ಗಿಡ್ಡ ಎತ್ತರ
ಮತ್ತೆ ಯೋಚಿಸುವ ತಲೆ ಕೊಟ್ಟು, ಚುಚ್ಚಿ
ನಕ್ಕ ಕಿತಾಪತಿ ನೋವುಗಳ ಚಾಂಚಲ್ಯದಧಿಪತಿ
ಅಕ್ಷರಗಳಡಿಯಲ್ಲಿ ಅಂಕೆಗೆಟುಕದ ಹಾಗೆ
ಅಡಗಿದಗಣಿತ ಅಸಂಖ್ಯ ರಾಕ್ಷಸರ ಬಂಧಿಸಿದ
ಶೂನ್ಯಪಥಹತಿ
ಆತ್ಮರತ ಗೀತಪತಿ.

ನಿತ್ಯ
ನಕ್ಕದ್ದು ನುಡಿದದ್ದು ನಡೆದದ್ದು ಬರೆದದ್ದು
ಒರೆದದ್ದು ಜರೆದದ್ದು ಕೊರೆದದ್ದು ಕೊನರಿದ್ದು
ತೀವಿದ್ದು ತೀಡಿದ್ದು ಹಾಡು
ಪಾಡುಗಳ ದಟ್ಟ ಕಾಡು. ಧ್ವನಿ

ಸ್ವರದ ಧಣಿ
ಕುಣಿಸಿದನು ಮಾತು ಮಣಿ ಮರ್ಕಟ
ಹರಡಿದನು ಹಂಚಿದನು ನಾಡಿನೆಲ್ಲೆಡೆ
ಚಾಲ್ತಿ ಚಿಲ್ಲರೆ ಶಬ್ದ ಪ್ರಾಮಾಣಿಕ
ಕಣಸು ಕನಸು ನನಸುಗಳ
ರಂಗು ರಂಗಿನ ಕೌದಿ ಜಾನಪದ ಅಪ್ಪಟ
ನಾನೃಷಿಃ ಕುರುತೇ ಕಾವ್ಯಂ ಎಂಬುದನು
ಹುಸಿಗೊಳಿಸಿ ಖುಶಿ ಕೊಟ್ಟ ಬ್ರಹ್ಮ ಕವಿ ಗೂಢ
ಬೇಂದ್ರೆ ಕನ್ನಡಕೆ ವರವೂ ಹೌದು ಅಪ
ಸ್ವರವೂ ಹೌದು ಈಗ ಬಡಿದ ಗರವೂ.

ಬದುಕಿನುದ್ದಕು ಜಗಳ ಇಲ್ಲ ಮುಚ್ಚುಮರೆ
ಮಾತು ಮತಿ ಅರ್ಥ ರತಿ ಇಹದ ಗತಿ
ಎಲ್ಲರೊಡನೆಳೆದಾಟ ಕೆಳೆಯಾಟ ಸವಿಯೂಟ
ಪಡೆದ ಗಾರುಡಿ ಘಟ.

ಹಿಂದೆ ಬಂದವರನ್ನು ಪ್ರೀತಿಯಲಿ ಒದೆಯುವುದು
ಮುಂದೆ ಬಂದವರನ್ನು ಭೀತಿಯಲಿ ಹಾಯುವುದು
ಅಂಬಿಕಾತನಯ ನಂಬಿ ಕಾದಂಥ ಕಾವ್ಯ-ದಂತ.

ಇವನ ಸುತ್ತಲೂ ನಿತ್ಯ ಕಾಡು ಬೇಗೆ

ಏನಿದ್ದರೂ ಇವನ ಮೆಚ್ಚದಿರುವುದು ಹೇಗೆ?
ನಮ್ಮ ಹುಲುತನ ಗುರುತನ ನಾವೆ
ಮೆಚ್ಚುವ ಹಾಗೆ ಪ್ರೀತಿಸುವ ಹಾಗೆ ಗೀತಿಸುವ ಹಾಗೆ
ನಮ್ಮ ದೊಡ್ಡಸ್ತಿಕೆಯ ಗಗನಮಂಡಲವನ್ನು
ವಿಸ್ತರಿಸಿ ತೋರಿಸಿದ ನಿಸ್ತಾರ ಪಟ.

ಬೈಯುವುದು ಬೇಯುವುದು

ಇವನ ನೋವಿನ ನದಿಯ ಎರಡು ತಟ
ಇದು ದಿಟ
ಆದರೆ ಅವನೆ ಒಡನುಡಿದಂತೆ
ಬೇಂದ್ರೆ ಬೆಂದಂತೆ ಬೆಂದರೆ ಮಾತ್ರ
ಬೈಯುವುದು ಬಂದಾಗಿ
ಬೇಯುವುದು ಒಂದಾಗಿ
ನಾಡಾಗಿ ನುಡಿಯಾಗಿ ಗಡಿಯಾಗಿ ಗುಡಿಯಾಗಿ
ಹಾಡಾಗಿ ಮಿಡಿಯುವನು
ಹೊಸ ಬೇಂದ್ರೆ ಕನ್ನಡದಿ.

ನಿತ್ಯ ಸಾಯುವ ಹುಸಿಯ ತೇಯುವ
ನಮ್ಮ ಜನ ಮನ ಮಧ್ಯೆ
ತನ್ನ ಸಾವಿನ ಟೊಪಿಗೆ ಧರಿಸಿ ಹೊಸತು
ದಿನವೂನು ಹುಟ್ಟಿದನು ತರುಣ ಶ್ರಾವಣದಂತೆ.

ಬೇಂದ್ರೆಯಂಥವರನ್ನು ಕೊಂಡು ಪಡೆದು
ಇಂದು ಸಾವಿನ ಘನತೆ ಹೆಚ್ಚಿರುವುದು
ಈ ಬೇಂದ್ರೆ ಸಾವು ಕನ್ನಡಕೆ
ಪಾರ್ಶ್ವವಾಯು.

* * * *

೭. ಅಯಸ್ಕಾಂತ : ೧೯೮೬

೧. ಚತುರರು

ಕಾಯುತ್ತಲಿದ್ದಾರೆ ಅಲ್ಲಿ ಬಾಗಿಲದಲ್ಲಿ
ನಾಲ್ವರೂ ನನಗಾಗಿ
ಬಿಡು ನನ್ನ ನಾ ಹೋಗಬೇಕು.

ನನ್ನ ಪಕ್ಕಕೆ ನೆರಳು ಹೊರಳಿ ನರಳಿದ ದಿನವೆ
ನನ್ನ ಹೆಜ್ಜೆಗಳನ್ನು ತಳ್ಳಿ ಹಾಕುತ್ತ
ನನ್ನ ಕಾಲಿಗೆ ನನ್ನದೇ ಕಾಲುರುಳ
ತೊಡಗಿ ಸುತ್ತುತ್ತ ಬಳ್ಳಿ ಹಾಕುತ್ತ
ನನ್ನೆದೆಯ ಮೇಲೆ ನನ್ನ ಬಾಗಿಲದಲ್ಲಿ
ನನಗಾಗಿ ಕಾದಿಹರು
ಹೋಗಬೇಕು
ಬಿಡು ನನ್ನ.

ಹೂ ನಗೆಯ ಬೆಳಕಾಗಿ
ಬೀಜಗಳ ಜಜ್ಜುತ್ತ ರೋದನವ
ಮೆತ್ತುತ್ತ ಶರ್ವರಿಯ ಮೆಟ್ಟುತ್ತ
ನಾಕು ಬಾಗಿಲವಾಗಿ ನಾಲ್ವರೂ ನಿಂತಿಹರು
ತೂಗು ತೊಟ್ಟಿಲದಲ್ಲಿ ನನ್ನ ಸುಟ್ಟಿಹರು
ಮುಟ್ಟಿ ಸರಿದವರನ್ನು ಅಟ್ಟಿ ಕಾಡಿಹರು
ನನ್ನನೊಯ್ಯುವುದಕ್ಕೆ ನಿತ್ಯವೂ ಹಾಡಿಹರು
ಅಲ್ಲಿ ನಿಂತಿದ್ದಾರೆ
ಬಾಗಿಲೊಂದೊಂದರಲ್ಲಿ ನಾ–

ನಾಲ್ವರಾಗಿ ಈ ಚತುರರು.
ಕತ್ತಲೆಯ ಕಾಲೆತ್ತಿ ನನ್ನ ಸುತ್ತುತ್ತಾರೆ
ಬೆಳಕ ಕಂಗಳ ಬಿಟ್ಟು ನಿಟ್ಟಿಸುತ್ತಾರೆ
ನಾಲ್ವರೂ ಕಂಗೆಡಿಸಿ ದಾರಿಗೆಳೆಯುತ್ತಾರೆ
ಬಿಡು ನನ್ನ
ಬೆಂಬತ್ತಿ ಹೋಗಲೇಬೇಕು.

ಇವರೊಂದಿಗೇನೇ ನಾನು ಬೆಳೆಯುತ್ತೇನೆ
ಇವರಿದ್ದರೇನೇ ನಾನು ಉಳಿಯುತ್ತೇನೆ
ಇವರಿಂದಲೇನೇ ನಾನು ಅಳಿಯುತ್ತೇನೆ.

ಕೈಯೆತ್ತಿ ಕರೆದರು
ಇಹದ ತುದಿಗೇರಿದರು
ಬಿಡು ನನ್ನ, ನಾನಿನ್ನು
ಅವರಾಗಿ ಅವರೊಳಗೆ ಸೇರಬೇಕು
ಕಥೆಯಾಗಿ ಮಣ್ಣೊಳಗೆ ಮೂಡಬೇಕು
ನನ್ನ ರಥಕಿನ್ನೂರು
ಬೆಂಕಿ ಕುದುರೆಗಳ ಹೂಡಬೇಕು
ದೂರವಾದರು ಅವರು
ದೂರವಾಗುವುದಿಲ್ಲ
ಬಿಡು ನನ್ನ, ನಾನವರ
ಕೂಡಬೇಕು.

ಕಾಯುತ್ತಲಿದ್ದಾರೆ ನನಗಾಗಿ ನೋಡಲ್ಲಿ
ಮೂರು ಲೋಕಗಳಲ್ಲಿ ಹಬ್ಬಿ ನಿಂತಿದ್ದಾರೆ
ಹತ್ತು ದಿಕ್ಕುಗಳನ್ನು ತಬ್ಬಿ ನಿಂತಿದ್ದಾರೆ
ಇಡಿಯಾಗಿ ಇಳೆಯಾಗಿ ನಭವಾಗಿ
ಹವೆಯಾಗಿ ಹಬೆಯಾಗಿ ಮೇಲೆ ಸಾಗಿದ್ದಾರೆ.
ಕವಿಯಾಗಿ ಇಲ್ಲಿ

ಬದುಕ ಬರೆಯುತ್ತಿರುವ ನನ್ನನ್ನು
ಕರೆಯುತ್ತಲಿದ್ದಾರೆ ಕೈ ಮಾಡಿ.

ಬಿಡು ನನ್ನ
ಈಗ ಹೋಗಲೆಬೇಕು
ಕರ್ಮ ಹೋಗುವುದು ನನ್ನ ಧರ್ಮ
ಸುಖದಿಂದ ಸುಖವಾಗಿ ಸಖರು ನಾಲ್ವರೂ
ಹೊತ್ತು ಒಯ್ಯುತ್ತಾರೆ ಬಿಡು ನನ್ನ ಅಲ್ಲಿ
ಬಾಗಿಲದಲ್ಲಿ ಕಾಯುತ್ತಲಿದ್ದಾರೆ
ನಾ ಹೋಗಬೇಕು.

* * * *

೨. ಬೆಳಕು

ಬೆಳಕಿನಲ್ಲಿ ಹೊಳೆವ ದಿವ್ಯ
ಕತ್ತಲಲ್ಲಿ ಸಂ–
ಭವಿಸುತ್ತವೆ. ರಾತ್ರಿ
ದಿವ್ಯ ಸಾವು ದಿವ್ಯ.

ಗಗನ ಚುಂಬಿಸುವ ಉ–
ತ್ತುಂಗ ಹಂ–
ಬಲಗಳು ಕನಸಲ್ಲಿ ಕಂ–
ಪೋಜ್ ಆಗುತ್ತವೆ ಮನ–
ಸಲ್ಲಿ ಮುದ್ರಣಗೊಳ್ಳುತ್ತವೆ ಬದುಕಲ್ಲಿ
ಬೈಂಡ್ ಆಗದೆ ಬಟಾಬಯಲಾಗಿ
ಉಸುರುತ್ತವೆ ಬೂದಿಯಾಗಿ.

ಕುಶಲ ಕುಸುರಿ ಕೆಲಸಗಳೆಲ್ಲ

ಮಾಡುತ್ತೇವೆ ಎಂದು
ತಿಳಿಯುತ್ತೇವೆ
ಆಗುತ್ತವೆ ನಾವು ಬೆಳೆಯುತ್ತೇವೆ
ಎಂದು ತಿಳಿದಂತೆ. ನಿಜದಲ್ಲಿ
ನಾವು ಇಳಿಯುತ್ತೇವೆ. ಕುಸಿಯುವುದು
ನೆಲದ ಕಸುವಿನಲಿ ಕೂಸು ಸೆಲೆ ಪುಟಿದಂತೆ.

ಹಳೆಯ ಮದ್ಯಕ್ಕೆ ಮದ ಕಡಿಮೆ ಬೆಲೆ
ಹೆಚ್ಚು ಹಳೆಯ ದೇಹಕ್ಕೆ ಹದ ಹೆಚ್ಚು
ಬೆದೆ ಕಡಿಮೆ ಹಳೆಯ ಮೌಲ್ಯಕ್ಕೆ
ಹೊಳಪು ನಾಜೂಕು ಕಡಿಮೆ ಆದರೂ ಹೆಚ್ಚು
ಗೌರವ ಆಯುಷ್ಯ ಕಳೆದಂತೆ ಆಯುಷ್ಯ.

ಹೊಳೆವುದೆಲ್ಲಾ ಇಲ್ಲಿ ಇಳಿವುದರ ಸೂನು
ಬೆಳಕಿನ ಭವ್ಯಕ್ಕೆ ತವರು
ಸುರಿವ ಬೆಮರು
ಕುಡಿವ ನೆತ್ತರು
ಕರೆವ ಭಾನು.

* * * *

೩. ಚಿಗುರು

ಆಯುಷ್ಯ ಬೆಳೆದಂತೆ ಕುಸಿದ ಕನಸುಗಳು
ಗಟ್ಟಿ ಮೆಟ್ಟಿಲಾಗುತ್ತವೆ ಸುಖದ ತೊಟ್ಟಿಲಾಗುತ್ತವೆ.

ದಾರಿ ಸಾಗುತ್ತದೆ ಹೆಳವನಿಗೆ ಕೋಲು
ಕತ್ತಲೆಗೆ ದೀಪ ಬಚ್ಚಬಾಯಿಗೆ ನಲುವು ನಗೆ
ಮೆಲುವಾಗಿ ಮೆತ್ತಿ ಹತ್ತಿ ನಿಲ್ಲುತ್ತವೆ ತಲೆ
ಬದುಕು ಬೆಳಗುತ್ತದೆ ವರ್ಧಿಸುತ್ತವೆ ಕಲೆ
ಆಶೆ ಸಾಯುವುದು ನೋವು ಮಾಯುವುದು
ಹಸಿರು ಹಣ್ಣಾಗುವುದು ಬದುಕು ಚಿಗಿಯುವ ತಂತ್ರ.

ಕಾರುಣ್ಯಗಳು ಹೂಳಿ ತಾರುಣ್ಯಗಳ ಧೂಳಿ
ಕಣ್ತುಂಬ ತುಂಬಿ ಮಾತು ತತ್ತ್ವವಾಗುತ್ತದೆ
ತತ್ತ್ವ ಮೆಟ್ಟಿ ಅನುಭವದ ಮೆಟ್ಟು
ದಾರಿಯಾಗುತ್ತದೆ ದ್ವಾರವಾಗುತ್ತದೆ ಸಕಲ ಶೃಂಗಾರಕ್ಕೆ
ನಷ್ಟ ವರ್ಷಗಳ ಬಹು ಬೆಲೆಯ ಬಂಗಾರಕ್ಕೆ
ವಿನಾಶಕ್ಕೆ ವಿಕಾಸ ಕಟ್ಟುತ್ತದೆ ತಾಳಿ.

* * * *

೪. ಕರುಳ ವಿಳಾಸ

ನಾ ಹಿಂದೀ ಸಾಹಿತ್ಯ ಓದುತಿದ್ದಾಗ
ಮಧ್ಯಕಾಲದ ಜನ
ಕವಿಗಳು ಲೇಖಕರು ಭಕ್ತರು
ಕೊಟ್ಟರು ಕೃಷ್ಣ ವಿಳಾಸ. ಅವನ ವಾಸ
ವೃಂದಾವನದಿ ಯಮುನಾದಡದಿ ಎಂದರು.

ಹೋದೆ ವೃಂದಾವನಕೆ ಆ ನದೀತಟಕೆ.
ಮುಗಿದಿತ್ತು ಕೃಷ್ಣವಿಲಾಸ, ಬೇರೆ ಎಲ್ಲೋ
ಸಾಗಿತ್ತು ರಥವೇರಿ
ಕೊಳಲ ವಿಲಾಸ, ಕರುಳ ವಿಳಾಸ.

ಅನ್ನಿಸಿತು
ಇರಬಹುದು ಕಾಶಿಯಲಿ ವಾಸ—
ಗಂಗೆಯಲಿ ಅರಸಿದೆ. ವಿಶ್ವನಾಥ
ಇಲ್ಲ. ದ್ವಾರಕೆಯೊಳಗೆ
ಹುಡುಕು, ಬರಿ ಹುಡುಕು, ಬರಿ ಹುಡುಕು, ಬರೆ

ಈಗ ಕೇವಲ ಕೃಷ್ಣನ ಹೆಸರು
ಎಂದರತಿರಥ ನವರು ಭವ ಮೀರಿದವರು.

ಮಥುರೆ ದ್ವಾರಕೆಯೊಳಗೆ ಅಸಲು
ಗೀತಾಹೊಳೆಗೆ ಇಳಿದು
ಗುಡಿಗಳ ಹೊಸಲು ತಾಕಿದೆ ನೊಸಲು.

ದಣಿದೆ. ಇಲ್ಲ ತಣಿದೆ. ನನ್ನಿಷ್ಟ ತೀವ್ರತೆಗೆ
ನಾನೆ ಮಣಿದೆ. ಮಣಿಯಿದೆ. ಸಿಗದು ಮಣಿಯದೆ.
ಬಂದೆ ತೋಂಟದ ಮಠಕೆ.
ಹೌದು ಇದೆ ಮಣಿಯೆದೆ ಬೆಳಕು
ಚಿಮ್ಮುತಿದೆ ಒಲವು ಹೊಮ್ಮುತಿದೆ ಕರುಳ ವಿಳಾಸ.

ನಾ ಕೇಳಲಿಲ್ಲ ಅರಸಲಿಲ್ಲ ತುಂ–
ತುಂಬಿ ಬಂದ ಕಂಬನಿ ಒರೆಸಲಿಲ್ಲ,
ಮಣಿದೆ ಗುರು ಪಾದಕ್ಕೆ ಎದೆಯ ನಾದಕ್ಕೆ
ಅವರ ಕರುಣೆಯ ನೆಲದಿ
ಕರಗಿ ಹರಿದ ಯಮುನೆಯ ದಡದಿ.

ಹರವಾದ ಹರಿ–ಹರ ಜನ್ಮ ಜನ್ಮಾಂತರ–
ದ ಕೊಳಲು ಕರೆದಿತ್ತು ಅಳಲು
ಮರೆದಿತ್ತು ಕರಗಿತ್ತು ಮಳಲು.

* * * *

೮. ಇಂದು ರಾತ್ರಿಯ ಹಾಗೆ : ೧೯೯೪

೧. ಆಮಂತ್ರಣ

ನನ್ನ ಮನೆಗೆ
ಕಳೆದ ಒಂದೆರಡು ತಿಂಗಳುಗಳಿಂದ
ಒಂದು ಹಕ್ಕಿ ಬರುತ್ತಿದೆ
ನಿತ್ಯ
ನಿಯಮದಿಂದ.

ಕಿಟಕಿಗೆ ಹಾಕಿದ ಕಾಜಿನಲ್ಲಿ
ನೋಡಿ ಬಹುಶಃ ಚಿತ್ರ ಮೊಗ
ತನ್ನದೇ ಬಿಂಬ ಯಾವುದೋ
ಭ್ರಮೆಯಲ್ಲಿ ಚುಂಚು
ಚುಚ್ಚುತ್ತದೆ. ಒಳಗೆ
ಇರಬಹುದು ಪ್ರೇಯಸಿ ಇಲ್ಲ ಮಗಳು
ಅಥವಾ ದೂರ
ವಾಗಿರುವ ತಾಯಿ ಯಾ ಮಗ. ಅರಸ–
ತೊಡಗಿರಬಹುದು.

ಸಾಧ್ಯವಿದೆ ತಾನೆ
ನನ್ನನ್ನೆ ಪ್ರೀತಿಸಿ ಇಲ್ಲಿ
ಕಂಡಿರಬಹುದು ತನ್ನ ಲಯ
ನಿರ್ವಲಯ ಜೀವ ಪ್ರವಾಹ ಭಯ
ನಿರಂತರವು ಕಾರ್ಯಪ್ರವೃತ್ತವಾದ ಕಾಲ–
ಗತಿ ಕಾಲಕವಲಿತವಾಗುವುದರ ಮಾಟ–ಮಾಯ.

ಸ್ವಲ್ಪ ಮೋಜಿನಲಿ
ಮೊದಲು, ನಂತರ ಸ್ವಂತ–
ದ ಗಾಂಭೀರ್ಯದಿಂದಲೇ ಉಸುರಿದೆ, ಕೇಳಿದೆ
ನನ್ನ ಮಗಳಿಗೆ. ಪ್ರಾಯಶಃ ದಿನಾ
ಬೆಳಗ್ಗೆ ನಿನ್ನನ್ನು ಎಚ್ಚರಿಸಲೆಂದೆ
ಒಮ್ಮೊಮ್ಮೆ ಅಪರಾಹ್ನ ಸಂಜೆ
ಸುಮ್ಮನೆ ನೋಡಲೂ, ಎಲ್ಲಿದ್ದಾಳೆ ಹೂ
ಎಂದು ಕೂ ಕೂ ಹೊಡೆದು ಕೇಳಲು ಬರುತ್ತಿದೆ
ಎಂದೆ. ಎಲ್ಲಿ, ಸುಳ್ಳು ಎಂದವಳು
ಇರಬಹುದು ಎಂದಳು.

ಈಗ ಅನಿಸುತ್ತದೆ ಅದು
ನನ್ನೊಳಗೆ ಮುಳುಗುತ್ತಿರುವ
ನಾ. ನನಗೇ ಅರಿವಾಗದ ಸಂಜೆ
ಮುಂಜಾವುಗಳ ಬಾಕಿ ಲೆಕ್ಕ
ನನ್ನ ಉಸಿರು ಗಂಗಾಳದೊಳಗೆ
ತಂಗಳಾಗದ ಹಾಗೆ
ನೀಡುತ್ತಿದೆ ಚೊಕ್ಕ.

ಓಹ್, ನನ್ನವರೇ ನನ್ನ ಪ್ರಾಣ ಪಕ್ಷಿಗಳೇ,
ರೆಕ್ಕೆ ಬಿಂಬಗಳೆ ಸುಮ್ಮನಿರುವೆನು ಇನ್ನು
ಬೇಡ ಮಾತು ನೋಟ ಕೂಟ.

ಆಚೆ ಕಿಟಕಿಯಲಿ ಹಕ್ಕಿ
ಕಾಜು ನೆಲದಲ್ಲೂರಿ ಕಾಲು
ಕಾಜ ನೆಲೆ ಕುಕ್ಕಿ ಮುಕ್ಕತೊಡಗಿತು ಮತ್ತೆ
ಮತ್ತೆ ಮತ್ತೆ
ಕಾಲ ಕಾಳು.

* * * *

೨. ಹಾಡು

ಮೋಹಗಳು ಮೋಸಗಳು
ರಾತ್ರಿ ಮಗ್ಗುಲದಲ್ಲಿ ಮಲಗುತ್ತವೆ
ಹಗಲು ಹಾದಿಯ ತುಂಬ ಹರಡುತ್ತವೆ

ಸಂಚುಗಳು ಮಿಂಚುಗಳು
ಲಾವಣ್ಯ ಸೊಬಗುಗಳು
ಕಮನೀಯ ಕತ್ತಲಲಿ ಹೊಳೆಯುತ್ತವೆ
ಬೆಳಕ ಕನಸಿನ ಕುಣಿಗೆ ಇಳಿಯುತ್ತವೆ

ಮುದ್ದುಗಳು ಗುದ್ದುಗಳು
ಮೆತ್ತನ್ನ ಮೈ ತೋರಿ ಮಿಸುಕುತ್ತವೆ
ಮಿದುನಗುತ ಕತ್ತನ್ನು ಹಿಸುಕುತ್ತವೆ

ಸುಳ್ಳುಗಳು ಮುಳ್ಳುಗಳು
ಗೊಂಚಲಲಿ ಚಿಗುರಾಗಿ ಕೊನರುತ್ತವೆ
ಹಿತ್ತಿಲದಿ ಹುತ್ತದಲಿ ಗುನುಗುತ್ತವೆ

ಬಾಹುಗಳು ಬಾವುಗಳು
ಕಾವುಗಳು ಹಾವುಗಳು
ನಾವುಗಳು ಸಾವುಗಳು
ಭಯದ ತೊಟ್ಟಿಲದಲ್ಲಿ ತೂಗುತ್ತವೆ
ಯಮನ ಮೆಟ್ಟಿಲದತ್ತ ನೂಕುತ್ತವೆ

ಮೋಹಗಳು ಮೋಸಗಳು
ರಾತ್ರಿ ಮಗ್ಗುಲದಲ್ಲಿ ಮಲಗುತ್ತವೆ
ಹಗಲು ಹಾದಿಯ ತುಂಬ ಹರಡುತ್ತವೆ.

* * * *

೩. ಅರ್ಥ

ಚೈತ್ರದಲಿ ಹೂತ ಹುಲುಗಲದ ತೊಡೆಯಲ್ಲಿ
ಆ ರಾತ್ರಿ ಬೆಳದಿಂಗಳಲ್ಲಿ
ಬಹಳ ಹೊತ್ತಿನ ತನಕ ಕುಳಿತಿದ್ದೆವು.
ಮೆಲ್ಲಮೆಲ್ಲನೆ ಪುಟಾಣಿ ಹೆಜ್ಜೆಗಳನಿಕ್ಕುತ್ತ ಚಂದ್ರ
ನಾವು ಬಯಸಿದ ಪುಟ್ಟ ಕಂದಮ್ಮನಂತೆ
ನಮ್ಮ ಬಳಿ ಬಂದ.
ಕಿವಿಯಲ್ಲಿ ಏನೇನೋ ಗುಣುಗುಣಿಸಿ ಕುಣಿಸಿದ. ಹೋದ.

ಗಾಳಿ ತುಂಬಿದ ಗೂಳಿ ಕೆನೆದಾಡಿದಂತೆ
ನಲಿದಾಡಿ ಕೇಳಿದೆವು
ಕೊನೆಗೆ ಬೆಚ್ಚಿ ಕನಸುಗಳ ನೆಚ್ಚಿ ಏನೇನೋ
ಹೇಳಿದ್ದಿ, ಏನು ಅರ್ಥ
ಎಂದು ಸಹ ಕೇಳಿದೆವು.

ಆ ಮೇಲೆ ಬಂದರೂ ಯಾವಾಗ ಬಂದರೂ
ಶಿಶು ಚಂದ್ರ ಮುಗಿಲ ಮಲ್ಲಿಗೆಯ ಶಿಥಿಲ ದಿಗಿಲು
ನಗುತ್ತಾನೆ ಸುಮ್ಮನೇ ಮುಗುಳು
ಉಗುಳುತ್ತಾನೆ, ಈಗಲೂ
ಅರ್ಥ ಹೇಳುವುದಿಲ್ಲ. ನಾನು
ಕಾದಿದ್ದೇನೆ.

ನಿನ್ನೆ ಅಮಾವಾಸ್ಯೆ. ಸಿಕ್ಕ. ಸರುವೊತ್ತಿನಲಿ
ತನ್ನಷ್ಟಕ್ಕೆ ನಕ್ಕ. ಕಂಡೆ ಸರಿಹೊತ್ತಿನಲಿ. ಮುದ್ದು
ಮುದ್ದಾಗಿ ಪೆದ್ದುಪೆದ್ದಾಗಿ ಗಿಡಗಿಡದ ಅಡಿಯಡಿಗೆ ಕದ್ದು
ಸಂಜೆ ಸಮುದ್ರದಲಿ ಕಳೆದ ಸೂಜಿ ಹುಡುಕುವ ಹಾಗೆ
ತಡಕಾಡುತಿದ್ದ, ಎದೆ ಹಿಡಿದು ಹುಡುಕಿದ್ದ. ರೆಕ್ಕೆ
ಕತ್ತರಿಸಿದ್ದ ಹಕ್ಕಿ.

ಮೆಲ್ಲಮೆಲ್ಲನೆ ಪುಟಾಣಿ ಹೆಜ್ಜೆಗಳನಿಕ್ಕುತ್ತ
ಹಿಂದಿಂದ ಹೋದವನೆ ಗಪ್ಪನೇ ಹಿಡಿದೆ.
ಬೆಚ್ಚಿ ಕುಪ್ಪಳಿಸಿ ಕನಸು–
ಗಾಳಿಗಳಲ್ಲಿ ಕಳೆದ ಗೂಳಿಯ ಹಾಗೆ ಕಂಡ
ತೆಳ್ಳನೆಯ ಚಂದ್ರ ಬೆಳ್ಳನೆಯ ಚಂದ್ರ ಜಾರಿ
ಹೋದ ಕತ್ತಲಾಗಸದಲ್ಲಿ ಕೆಂಡ–
ದುಸಿರಾಗಿ ಹಾರಿ.

ಅಂದು ಅರ್ಥ ಹೇಳಿರಲಿಲ್ಲ ಬೆಳದಿಂಗಳಲ್ಲಿ
ಉಳಿದಿರಲಿಲ್ಲ ನಿನ್ನೆ ಕತ್ತಲೆಯಲ್ಲಿ
ಈಗ ಚಂದ್ರ
ಹುಡುಕುತ್ತಲಿದ್ದಾನೆ ಬೆಳದಿಂಗಳ
ಅಂಗಳಂಗಳದಲ್ಲಿ ಯಾವ ಕಂಗಳ ತಳದಿ ಕಳೆದಿದೆ
ಹರವಿದೆ
ಎಲ್ಲಿ ಚೆಲ್ಲಿದೆ? ಎಲ್ಲಿ–
ದೆ? ಎಲ್ಲಿದೆ?

* * * *

೪. ಕನಸು

ಕನಸು ಯಾರನ್ನು ಕಾಡುವುದಿಲ್ಲ
ಹೇಳಿ. ಕೇಳಿ ಬರುತ್ತವೆಯೆ ನಿಮ್ಮ ಕಣ್ಣ
ಬಾಗಿಲಕೆ. ತಿಳಿದ ಪಥ ತುಳಿಯುತ್ತ
ಉಸಿರು ಕೂಡುತ್ತ ಕಳೆಯುತ್ತ
ದೂಡುತ್ತ ನಿಮ್ಮನ್ನು ನಮ್ಮನ್ನು ಅತ್ತಿತ್ತ
ಸದಾ ಪ್ರಶಸ್ತಗೊಳಿಸುತ್ತ ತಮ್ಮದೇ ದಾರಿ
ಸಾಗುತ್ತವೆ ನಿರಾತಂಕ ಹಾರಿ
ಇಂದು ಈ ಬಾಗಿಲು
ನಾಳೆ ಆ ಬಾಗಿಲು

ಮತ್ತೆ ಮುಂದಿನ ನಾಳೆ ಯಾ ಬಾಗಿಲು
ಯಾವಾಗಲು.

ಹೇಳಿ ಯಾರನ್ನು ಕಾಡುವುದಿಲ್ಲ
ಕನಸು. ಮೂಡುತ್ತವೆ ಮನದಲ್ಲಿ
ತಲೆಯಲ್ಲಿ ಬಾಡುತ್ತವೆ. ಕಾಡುತ್ತವೆ ನಿಮ್ಮ ಕನಸು
ನಿಮ್ಮನ್ನು ನಿಮಗೆ ಬೇಕಾದವರನ್ನು. ಹಾಗೆ
ನನಗೂನು. ಈ ಕನಸಿನ ದಿವ್ಯ
ಒಂದು ಅದ್ಭುತ ಮಾಟ. ಇದನು ಕಾಣುವ ಚಟ
ಬಿಡಲು ಆಗುತ್ತಿಲ್ಲ. ಇತ್ತೀಚೆ.
ವಯಸ್ಸಿನ ಗಂಟುಗದಡಿಗಳಲ್ಲಿ ಕಟ್ಟಿ ನೂರೆಂಟು
ಹಳೆ ಹೊಸ ಈ ಆ ಅವಳ ಇವಳ ಎಲ್ಲಾ ಕನಸು
ಮುನಿಸು ಹೊಂದಿಸಿಟ್ಟಿದ್ದೆ ಚೆಂದ ಸಾಲು ಸಾಲು.

ಗೆದ್ದಲೋ ಬಿಳಿಮೀನೊ ಮತ್ತೇನೊ ಆಗಿ ಅವಕೂ ಮೊನ್ನೆ
ಪ್ರಶ್ನೆ ಕೇಳಿತ್ತು ಸೊನ್ನೆ. ಒಂದು ಗಂಟಿನ ದಾರ
ಬಿಚ್ಚಿ ಒಂದೊಂದೆ ಒಂದೊಂದೆ ಕಣ್ಮುಂದೆ ಚೆಲ್ಲಾಪಿಲ್ಲಿ.
ಕೋಣೆಯಲಿ ಕಸ, ಗೋಡೆಗೆ ಚಿತ್ರ, ತಲೆ ಮೇಲೆ ಹೊಟ್ಟು.
ಒಟ್ಟು ನಡೆಯಲಿಲ್ಲ ಕನಸುಗಳ ವರಸೆ ಪಟ್ಟು.
ಸುಮ್ಮನೇ ಮೂಕ ವೀಕ್ಷಕನಾದೆ
ಕೊಸರಾಡಿದವು
ಹೂಗನಸು ಹೊಂಗನಸು ಮುಂಗನಸು
ಸೀಮಾತೀತ ಶೈಲಾಕಾರ ಹೂ ಹೂ ಕೂಗು
ಮಹಾ ಸಮುದ್ರದ ಹಾಗೆ.
ಈಗಲೂ ಮಮತೆ ಮಾಟ ಸೋಗು
ಹಿಡಿದೆಳೆಯುತಿವೆ ಮೂಗು.

ಕಾಲದಜಸ್ರ ಪ್ರವಾಹ
ದಲಿ ಸುರಿದ ಜಲ ಬಿರಿದ ನೆಲ

ಮನ–ಮುಗಿಲ ತೋಟದಲಿ ಅರಳಿತ್ತು ದಳ ದಳ.
ನಕ್ಕಿದ್ದೆ. ಎಲ್ಲವೂ ನನಗೆ ದಕ್ಕಿದ್ದೆ ಎಂದಿದ್ದೆ.
ಒಮ್ಮೊಮ್ಮೆ ಅತ್ತಿದ್ದೆ ಗಳಗಳ. ತೊಯ್ದು ಬಿಚ್ಚಿದವು ಗಂಟು.
ಕಟ್ಟಿಟ್ಟ ಬಿಚ್ಚಿಟ್ಟ ಮುಚ್ಚಿಟ್ಟ ಕನಸುಗಳ ಒನಪು
ಬಣ್ಣಬಣ್ಣದ ನೆನಪು ತಿಳಿಯಾಗಿ
ತಿಳಿದಾಗ ಹೊಳಪು ಇಲ್ಲದಿರೆ
ಅರ್ಥಗುಂಭದ ಒಡಪು ಕೊಳಕು
ಹಾಯಾಗಿ ನವೆಯಬೇಕಾದ ವಯಸು
ತಾವಾಗಿ ತಾಯಿತಾಯಿಯಾಗಿ ಮಾಯುವವು ಎಲ್ಲ
ಇಲ್ಲ
ಸಾಯುವ ತನಕ ಬಾ ಬಾ ಎಂದು ಹಲುಬಿ ಕಾಯುವವು
ಕನಸು
ಹೇಳಿ ಕಾಡುವುದಿಲ್ಲ.

* * * *

೫. ಅಕ್ಕರೆ

ಕಾರಿರುಳ ನೆರಳಿನಲಿ ಕಿರಿಬೆರಳ ಹಿಡಿದೆಳೆದು ಕರೆದಿರುವನು
ಬೆಳದಿಂಗಳಂಗಳದಿ ಕಂಗಳಲಿ ಮಂಗಳವ ತುಳುಕಿಸಿಹನು

ಹಗಲು ಪುಲಕದ ಒಳಗೆ ಇರುಳು ಚಿಲಕದ ಬಳಿಗೆ ಅಡಗಿಸಿಹನು
ಮುನಿಸಿನಲಿ ಮನಸಿನಲಿ ಕಮನೀಯ ಕನಸಿನಲಿ ತೊಡಗಿಸಿಹನು
ಬೆಳದಿಂಗಳಂಗಳದಿ ಕಂಗಳಲಿ ಮಂಗಳವ ತುಳುಕಿಸಿಹನು

ತಾರೆಗಳ ಸಭೆಯೊಳಗೆ ಮಧು ನೀಡಿ ಮರೆಸಿಹನು ಕುಣಿಸಿರುವನು
ದೃಷ್ಟಿ ಕೊಳದೊಳಗೀಸಿ ಕೈ ಹಿಡಿದು ಕರೆದಿಹನು ಮುಳುಗಿಸಿಹನು
ಬೆಳದಿಂಗಳಂಗಳದಿ ಕಂಗಳಲಿ ಮಂಗಳವ ತುಳುಕಿಸಿಹನು
ಎಳಸು ನಾಗರ ಕೂಟ ಕುಡಿ ನೋಟ ಮದಿರ ನುಡಿ ಕೆರಳಿಸಿಹನು

ನನ್ನ ಮುಡಿಯಲಿ ಈಗ ನೂರು ನೋವಿನ ಹೂವು ಅರಳಿಸಿಹನು
ಕಾರಿರುಳ ನೆರಳಿನಲಿ ಕಿರಿಬೆರಳ ಹಿಡಿದೆಳೆದು ಕರೆದಿರುವನು

ಬೆಳದಿಂಗಳಂಗಳದಿ ಕಂಗಳಲಿ ಮಂಗಳವ ತುಳುಕಿಸಿಹನು
ಕಾರಿರುಳ ನೆರಳಿನಲಿ ಕಿರಿಬೆರಳ ಹಿಡಿದೆಳೆದು ಕರೆದಿರುವನು

* * * *

೬. ಸರ್ವಜ್ಞ

ಬಸವಣ್ಣ ಸರ್ವಜ್ಞ ಗಾಂಧಿ ಲೋಹಿಯಾ ಜೇಪಿ
ಹೊಸತು ನಿರ್ಮಾಣಕ್ಕೆ. ಹಣ್ಣು ಹರಿಯುವುದಕ್ಕೆ, ಅಟ್ಟ
ಹಾಕುವುದಕ್ಕೆ, ಬಡಿಯುವುದಕ್ಕೆ ತಟ್ಟಿ
ಒಂದೊಂದೆ ಮೆಟ್ಟಿಲು.
ಹಂತಿ ಹೊಡೆಯುವುದಕ್ಕೆ, ಕಾಳು
ತುಳಿಸುವುದಕ್ಕೆ ಚೆಂದ
ಹದ ಬಂದ ನೆಲ. ಇವರು
ಮತಿರಹಿತ ಮನಶೂದ್ರ ಜನರನ್ನು
ಬಡಿದೆಬ್ಬಿಸಲು ಬಂದ ವೇದಾವತಾರ–
ಗಳಲ್ಲ. ಮಣ್ಣಿನಿಂದಲೆ ಪುಟಿದು ಚಿಗಿತಂಥ
ಮರ್ಮಜ್ಞ ಸಜ್ಜನರು.

ಸರ್ವ ಕಾಲದ ನೋವು ಸರ್ವಜ್ಞನಲಿ ಕೂಡಿ
ಬಹುಗುಣವಾಗಿ ಸಂಖ್ಯಾತೀತ ಶಾಖೆ ಪಲ್ಲವಿಸಿ ನಿಂತಾಗ
ಮತ್ತೆ ಬಂದಿದ್ದಾನೆ ಇಲ್ಲಿ ಅಲ್ಲಿ.
ಒಬ್ಬನೇ ಅಲೆದಿದ್ದ. ಈಗ
ನೆಲ ಬಿಸಿಲು ಬಾನಾಗಿ ಹಮ್ಮಿದ್ದಾನೆ.
ಮೂರ್ತಿಯಾದರೆ ಕೆಲರು, ಇವನು ಮೂರ್ತ
ಈ ನಾಡ ರಿಣದಲ್ಲಿ ಉಸಿರು
ಚಿಮ್ಮುವ ದಿಗಿಲು ರಕ್ತ

ಮುಗಿಲಿಂದ ನೆಲತನಕ ಎತ್ತಿ ಹಿಡಿದಿರುವ ತಾರುಣ್ಯ
ಪ್ರೇರಣೆಯ ಚಿಲುಮೆ.

ಮೈಥಳಿ ಬಿಟ್ಟು ಗುದ್ದಾಟ ಮಾಡುವುದಕ್ಕೆ
ಏಕಾಕಿತನಕ್ಕೆ, ನಿರ್ಭಿಡೆಗೆ, ಹಂಗಿನಮಲಿರದೆ ನಗಲು
ಝಾಡಿಸಿ ಎದೆಗೊದ್ದು, ಇದ್ದುದನು
ಇದ್ದಂತೆ ಸಾರಿ ಆಗಬೇಕಾದ ಕನಸ ಮುದ್ರಿಸುವುದಕ್ಕೆ,
ಬಣ್ಣಗಾರಿಕೆಗೆ, ಮಾತಿನ ನಯಕೆ, ಧಾಟಿಗೆ ಲಯಕೆ
ನಗ್ನ ಚಿಂತನೆಗೆ, ಬತ್ತಲಾರದ ಅಮೃತ ಝರಿ
ಶಬ್ದದಲಿ ಅನುರಣಿಸಿ ನೆನಪಾಗಿ ನವಿರಾಗಿ
ಚುಚ್ಚುವುದಕ್ಕೆ, ಮುಚ್ಚುವುದಕ್ಕೆ ಸ್ವಂತದ ಹೆಣ ಕೊಚ್ಚಿ
ಪರೀಕ್ಷೆಗೊಳಪಡಿಸಿ, ಜಾತಿ ಕುಲ ವರ್ಗಗಳ
ತಾಳ್ಮೆ ಮಗ್ಗದಲಿಟ್ಟು ಸೂಕ್ತ ಸಂಸಾರ ಸೂತ್ರ
ಗಳ ನೆಯ್ದು ತೊಟ್ಟು ತೊಡಿಸುವುದಕ್ಕೆ ಸರ್ವಜ್ಞ.

ತತ್ತ್ವಜ್ಞಾನ ಕವಿತೆ
ಮೆದುಳಿನ ತುಂಬ ಕಗ್ಗಂಟಾಗಿದ್ದರೂ ಒಡೆಯ
ಬಹುದಾದ ಒಡಪು,
ಶಿಖರಸ್ಥ ಸದ್ಗುಣದ ನಿರುಪಮ ವಜ್ರ,
ಊಟಕ್ಕೆ ಕೂತಾಗ ಬಿಸಿ ತುಪ್ಪ ಬಟ್ಟಲ ತುಂಬ,
ಸರಳ ಬದುಕಿಗೆ ಬೆಳಕಿನಂಗಾಲೂರಿ ಮೆಲ್ಲ
ಮೆಲ್ಲನೆ ನಡೆದು ಬರುವ ದೀಪದ ಹೆಜ್ಜೆ,
ಧನಿಯಾದ ಹಾಡು, ಅಕ್ಷರಗೊಂಡ ಅಕ್ಷಯ ಜ್ಞಾನ,
ಘನಿಸಿ ಪರ್ವತವಾದ ಘನವಂತ ಹುಮ್ಮಸ್ಸು,
ಹೆಣ್ಣ ಪ್ರೀತಿಯ ಕಣ್ಣಿನೊಳಗಿನ ಹಾಹೆ,
ಬೇಸಿಗೆಯ ಹೊನ್ನ ಬಿಸಿಲಲ್ಲಿ ನೆರಳಿನಾಧಾರ
ಶುಭ್ರ ಜೀವನದ ಶಿವಕೃಪೆಯ ಕೈಲಾಸ
ನಿತ್ಯ ಲೋಕದಜ್ಞಾನ ಭಿಕ್ಷೆ ಬೇಡಿ
ಅರಿವಿನಾಂತರ್ಯ ತಿಳಿಸಿದಭಿಮಾನ ಸರ್ವಜ್ಞ.

ಇವನು ಹೇಳದ್ದು ತಿಳಿಯದ್ದು ಯೋಚಿಸದೆ ಇದ್ದದ್ದು
ಇಲ್ಲ
ಇವನ ತಿಳಿವಳಿಕೆಯಂಕಿತದಲ್ಲಿ. ಇವನು
ಯೋಚಿಸಿ ತಿಳಿದು ಹೇಳಿದ್ದನ್ನು
ಮಾಡಬೇಕಾದದ್ದು ನಮ್ಮ ಕರ್ತವ್ಯ
ನಮ್ಮೆದುರು ನಮಗಾಗಿ ತೆರೆದಿರುವ ಏಕಪಥ.

* * * *

೯. ಇಷ್ಟು ಹೇಳಿದ ಮೇಲೆ : ೨೦೦೦

೧. ಈ ಬದುಕು

ಕೇಳಿದ್ದೆ, ಸತ್ತವರು ನಕ್ಷತ್ರವಾಗುವರು
ಬೆಳದಿಂಗಳು ಅವರ ನಿಟ್ಟುಸಿರು
ಆಕಾಶ ಸಾವಿನರಮನೆ

ನೆಲದ ನಲಿದಾಟಕ್ಕೆ ಉಸಿರು ಕತ್ತರಿಯಾಟ
ಬದುಕು ಹೂಡಿದ ಹೂಟ
ನಶಿಸಿ ಹೋಗುವುದನ್ನು ಸ್ವೀಕರಿಸು ಸುಮ್ಮನೆ

ಸಂಬಂಧ ನಿರ್ಬಂಧ ಆಗುಹೋಗುಗಳು
ಋತು ಚಕ್ರದಲಿ ಸಿಕ್ಕ ಬೆಳಗು ಬೈಗುಗಳು
ನಡುವೆ ನರಳುತ್ತಿರುವ ರಾತ್ರಿ ಹಗಲು

ಕುಂಟ ಕುದುರೆಯನೇರಿ ಹೊರಟವರು ನಾವು
ಕಾಲ್ತೊಡಕು ಸಾವಿರದ ಲಕ್ಷ ಹಾವು
ಎಲ್ಲಿ ಸಮಯವಿದೆ ಕ್ಷಣ ಕಾಲ ನಗಲು?

ಈ ಬದುಕು ಬರಿ ದಿಗಿಲು
ಅರಿವು ಹಿಡಿತಕೆ ಸಿಗದ ದೂರಗಳ ಮುಗಿಲು.

* * * *

೨. ನಂಟು

ಕೊಳದ ದಡದಲಿ ನಿಂತು ನೀರಲ್ಲಿ ಹುಗಿದಿಟ್ಟ
ಹಳೆಯ ಸಂಬಂಧಗಳು ಎಷ್ಟು ಕೊಳೆತಿವೆ ಎಂದು
ಹೊರಗೆಳೆದು ನಿಟ್ಟಿಸಿದ. ನಾರಿನೆಳೆಗಳ ಕಿತ್ತ.
ಮೈ ಮೂಗು ವ್ಯಾಪಿಸಿತು ದುರ್ನಾತದಲೆ ಸುತ್ತ.
ಯಾಕೆ ಹಳೆ ನೆನಪುಗಳು ಬಂಧಿಸಿವೆ ಹೀಗೆಂದು
ಕಾಡಿನೆಡೆ ನಡೆದ. ತನ್ನಷ್ಟಕ್ಕೆ ಹುಯಿಲಿಟ್ಟ.

ಕೃಷ್ಣನೋ ಕೀಟ್ಸನೋ ಕಾಸಿಮನೊ ಹಲುಬಿದನು
ಹಕ್ಕಿಗಳು ಮಾರ್ದನಿಸಿ ಕಾಡುಗಳು ನಡುಗಿದವು
ಕೊಳದ ದಡದಲಿ ನಂತ. ಕಳೆದ ಸಂಬಂಧ ಹೊರೆ
ನೀರಲ್ಲಿ ಹುಗಿದಿಟ್ಟ. ಮೇಲೆ ನೆನಪಿನ ಕಲ್ಲು.
ಇಡದಿದ್ದರೀ ಸೊಲ್ಲು ಬದುಕಿನುದ್ದಕು ಗಲ್ಲು.
ಅರಿತ ಸೋಲು ಗೆಲುವಿನ ಹಾದಿ. ಅನುಭವದ ಕರೆ.

ನಾರು ಹೊರಬಂದಿಹುದು ಹಗ್ಗ ಹೊಸೆವುದಕುಂಟು
ಯಾರು ಹೊರಬಂದಿಹರು ಕಳಚಿ ಸಾವಿನ ನಂಟು?

* * * *

೨. ನನ್ನ ಬೆಳದಿಂಗಳು

ಕಾಡಿನ ಹಾಡುಗಳನ್ನು ಹುಡುಕುತ್ತ
ಕಂಟಿಗಳ ಕತ್ತುಗಳಲ್ಲಿ ಗೆದ್ದಲಿ ಹಾವು ಹೊಕ್ಕ ಹುತ್ತಗಳಲ್ಲಿ
ಗಿಡಮರಗಳಡಿಯಲ್ಲಿ ತೊಡೆಯಲ್ಲಿ ಬಗಲಲ್ಲಿ ಹೆಗಲಲ್ಲಿ ನೆತ್ತಿಯಲ್ಲಿ
ಘನಘೋರ ಕಾಡಿನಂತೆ ಸದಾಮೋದ ಹಾಡಿನಂತೆ
ಸುಳಿದಾಡಿತು ನನ್ನ ಬೆಳದಿಂಗಳು.

ಕಾಡಿನ ಹಾಡುಗಳನ್ನು ಹುಡುಕುತ್ತ
ಕೊಳ್ಳಗಳ ಕೊರಳ ಕೊಳಲುಗಳಲ್ಲಿ
ಗುಡ್ಡ ದಿನ್ನೆಗಳ ಧನ್ಯದೆತ್ತರಗಳಲ್ಲಿ
ಸಪಾಟು ನೆಲದ ಶಾಂತ ಸಂಗೀತ ಸ್ವರ–ಗಂಗೆಯಲ್ಲಿ
ಅಕ್ಷತಾಂಬರದ ನಕ್ಷತ್ರಖಚಿತ ನಿಶಾಂಗಣಗಳಲ್ಲಿ
ಕೃಷ್ಣ ಸರ್ಪದಂತೆ ಸುಳಿದು ಹೋಗಿರಬಹುದೇ
ಕಳೆದು ಹೋಗಿರಬಹುದೇ ಶ್ಯಾಮ ಮೇಘಗಳಂತೆ
ಯೋಚಿಸುತ್ತ
ತಿಳಿಗಾಳಿಯಾಗಿ ಅಲೆದಾಡಿತು ನನ್ನ ಬೆಳದಿಂಗಳು.

ಕಾಡಿನ ಹಾಡುಗಳನ್ನು ಹುಡುಕುತ್ತ
ಸಾಗರ ತಟಾಕದಲಿ ಮದಮತ್ತ ತೆರೆಯ ಹೊಡೆತಗಳಲ್ಲಿ
ಗಿರಿ–ಗಹ್ವರಗಳ ಕಗ್ಗತ್ತಲ ಮೊರೆತಗಳಲ್ಲಿ
ಮಣ್ಣಿನಾಕರ್ಷಣೆಯ ಅರಿವಿನಂಚಿಗೆ ಸಿಗದ ಆಟ–ಕೂಟಗಳಲ್ಲಿ
ಭೈರವಿಯ ಸಿಂಗರದ ಸೆರಗು ಹಿಡಿದು
ವಸಂತದಲಿ ಕುಮುದ ಕುಸುಮಾಂಧ ಗಂಧದಾಲಿಂಗನಕೆ ಸೋತು
ತಿರುಗಣಿ ಮಡುಗಳಲ್ಲಿ ಸೆರೆಹಿಡಿವ ಸೆಳೆತಗಳಲ್ಲಿ ಸಿಲುಕಿ
ತತ್ತರಿಸಿ ಆಲಾಪಿಸಿದ ಭಗವತ್ ವಿಲಾಪ ಗೀತೆಯಂತೆ
ಸಮರದಿತಿಹಾಸವಾಗಿ ನರಳಾಡಿತು ನನ್ನ ಬೆಳದಿಂಗಳು.

ಮಕ್ಕಳ ಮುಗ್ಧ ಕಣ್ಣುಗಳಲ್ಲಿ
ಗಿಳಿಗಳುಣ್ಣುವ ಮಧುರ ಹಣ್ಣುಗಳಲ್ಲಿ
ಕಿರಣಗಳ ನೂಲು–ಲಾಳಿಗಳಲ್ಲಿ ನೆಯ್ದ ವಸ್ತ್ರಗಳಲ್ಲಿ
ಭಗ್ನ ಮಂದಿರಗಳೇಕಾಂತದಲಿ ನಲಿವ
ನಗ್ನ ದೇವರುಗಳ ಉನ್ಮದಿತ ಗೂಢ ಹಾಸ–ಶಸ್ತ್ರಗಳಲ್ಲಿ
ಮಣ್ಣ ಕಣ ಕಣದಲ್ಲಿ ಚಿಗುರು ಹೂ ಹಣ್ಣಾಗಿ
ಹಟದಿಂದ ಪುಟನೆಗೆವ ಅಂಕುರಂಕುರದಲ್ಲಿ
ಜ್ಞಾನದಂತೆ ಅರ್ಥದಂತೆ ಬೆಳಕಿನಂತೆ ಮಾಯೆಯಂತೆ
ಹರಿದಾಡಿತು ನನ್ನ ಬೆಳದಿಂಗಳು.

ಕಳೆದು ಹೋದ ಬೆಳದಿಂಗಳದ ಬೆನ್ನು ಹತ್ತಿ ಬೆಳದಿಂಗಳಾದೆ
ಹಲುಬುತ್ತಿದ್ದ ಹಾಡುಗಳ ಹೆಗಲೇರಿ ಹಾಡು ಪಾಡುಗಳಾದೆ
ಕಾಡು ಮೇಡುಗಳ ತೆಕ್ಕೆಗೆ ಸಿಕ್ಕು ಸ್ನಿಗ್ಧ ನಗೆಯಾದೆ
ನಾನೆ ಬೆಳದಿಂಗಳದ ಹಾಡು
ಕಾಡುಗಳಲ್ಲಿ ಅಡಗಿ ಆಟವಾಡುವ ಧ್ವನಿ ಕೂಡ ನಾನೆ
ಈ ಅರಿವಿಗಾಕಾರ ಮೂಡಿದಾಗ
ನನ್ನ ಅಂಗಾಂಗದಲಿ ಮನಸ ಮಾಮರದಲ್ಲಿ
ಕುಹು ಕುಹೂ ಹಾಡುತ್ತ ಕುಣಿದು ನಲಿದಾಡಿತು ನನ್ನ ಬೆಳದಿಂಗಳು.

* * * *

೩. ಮಾಯದಂಥಾ ಬೆಳದಿಂಗಳ

ಬೆಳದಿಂಗಳ ಅನ್ನೂದು
ಈಗ
ಭಾಳ ತುಟ್ಟಿ ಆಗೇತಿ,
ಜಲ್ಲಿಗಟ್ಟಲೆ ರೊಕ್ಕಾ ಹಿಡಕೊಂಡು ಊರ ತುಂಬ ಹುಡಕ್ಯಾಡಿದರೂ
ಮುಟಗಿಯಷ್ಟರ ಒಂದ ಚಿಮಟಗಿಯಷ್ಟರ
ಬೆಳದಿಂಗಳ ಸಿಕ್ಕರೂ
ಪುಣ್ಯಾ ಅನ್ನೂವಂಗ ಆಗೇತಿ.
ನಾವು ಸಣ್ಣವರಿದ್ದಾಗ
ದಿನಾ ಬೆಳದಿಂಗಳಾ ಉಣತಿದ್ವಿ ಉಡತಿದ್ವಿ
ಅದರಾಗ್ಅ ಮುಳುಗೇಳತಿದ್ವಿ.

ಅಃಬ್ ಅಂತ ಡರಕೀ ಹೊಡೆದರೂ
ಹೊಟ್ಟಿ ಕೆಡತಿದ್ದಿಲ್ಲ ಭಟ್ಟಿ ಸರೀತಿದ್ದಲ್ಲ.
ಮತ್ತ ಮರದಿನ ಮಳ್ಳಮರದಿನ ಹಬ್ಬ ಹರದಿನ
ವ್ಆರಾ, ತಿಂಗಳಾ
ಬೇಕ್ಅ ಬೇಕು ಬೆಳದಿಂಗಳಾ
ಅಂತ ಹಟ ಹಿಡೀತಿದ್ವಿ.

ತಪ್ಪದ್ಅ ತಂದ ಕೊಡತಿದ್ದ ಅಪ್ಪ.
ಆಗ ಬೆಳದಿಂಗಳ ಇತ್ತು.

ದಿನಾ ಸಂಜೀ ಮುಂದ
ಅಂಗಡೀ ಬಂದ ಮಾಡಿ
ಮನೀಗೆ ಬರೂ ಮುಂದ ನಮ್ಮಪ್ಪ
ಬೆಳದಿಂಗಳಾ
ಡೀಗ ಡೀಗಗಟ್ಟಲೆ ಕಟ್ಟಿಸಿ ತರತಿದ್ದ,
ಪೆಂಡಿ ಕಟ್ಟು ಹೊರಿಗಟ್ಟಲೆ
ಅಚ್ಛೇರು ಸೇರು ಮಣಗಟ್ಟಲೆ
ಪಡಿಗಟ್ಟಲೆ ಚಿಟ್ಟಿಗಟ್ಟಲೆ ಬುಟ್ಟಿ ಬುಟ್ಟಿ ತುಂಬಿ
ಚೀಲ ಹೇರು ಕಣಜ ಅಂಬಾರಿಗಟ್ಟಲೆ
ಬಂಡಿ ಬಂಡಿ ಹೇರಿಸಿ ತರತಿದ್ದ .
ಆಗ ಬೆಳದಿಂಗಳ ಇತ್ತು.

ಅಪ್ಪ ಬರೂದ್ಅ ಸೊನ್ನಿ
ಇಡೀ ಮನಿ ಬೆಳಕಾಗತಿತ್ತು, ಬೆಳದಿಂಗಳಾಗತಿತ್ತು,
ಅಟ್ಟದ ಮ್ಯಾಲ ಮಾಳಿಗೀ ಮ್ಯಾಲ
ಬೆಳದಿಂಗಳಾನ್ಅ ಬೆಳದಿಂಗಳ,
ಬೆಳದಿಂಗಳಾ ಹಾಸಿ ಬೆಳದಿಂಗಳಾ ಸೂಸಿ ಬೆಳದಿಂಗಳಾ ಮೂಸಿ
ನಮ್ಮಪ್ಪ
ಛೂ ಮಂತರ್ ಅಂತಿದ್ದ
ನಾವು ಬೆಳದಿಂಗಳಾಗಿ ಬಿಡತಿದ್ವಿ.

ಎಂಥಾ ಬೆಳದಿಂಗಳ ಅಂತೀರಿ...
ಅಮಾಸೀ ಕರೇ ಕತ್ತಲ ಸೈತ ಎರೀ ನೆಲದಾಗ ಕರಗಿ
ನಸುಕಿನ್ಯಾಗಿನ ಬೆಳಕಿನಂಥಾ ಕೂಸನಗೀ ನಗುವಂಥಾ ಬೆಳದಿಂಗಳ,
ಬಿಸಲ ಚೆದುರಿ ಹರೇವ ಬೆದರಿ ಸುರೇಪಾನದ ಹೂವಿನ್ಹಂಗ
ನೆರೀ ಬಂದ ನದೀ ಹಂಗ ಗರೀಗೆದರಿದ ನವಿಲಿನ್ಹಂಗ

ಎದೀ ಏರಿ ಕುಣಿಯುವಂಥಾ ಬೆಳದಿಂಗಳ,
ಮರಾ ಗಿಡಾ ಟೊಂಗಿ ಟೊಂಗಿ ಕಂಟಿ ಕಂಟಿಗೆ ಅಂಟಿ
ಜರ್‍ರಂತ ಜಾರಿ
ಮ್ಯಾಲಕೇರಿ ಮುಗಿಲಿಗೆ ಹಾರಿ ಕ್ಯಾಕೀ ಹೊಡಿಯೂ ಬೆಳದಿಂಗಳ,
ಅದ್ಅ ಕಡೆದ ಬೆಣ್ಣೀ ಹಂಗ ಕಣ್ಣೀ ಹರಕೊಂಡ ಹೋರೀ ಹಂಗ
ಹೆಪ್ಪಾಗೂ ಬೆಪ್ಪಾಗೂ ಮತಮತ್ತ ಮತಮತ್ತ ನೆಪ್ಪಾಗೂ ಬೆಳದಿಂಗಳ,
ಅಪ್ಪನ ಆ–
ರೋಹಿಣಿಯರ ಕಣ್ಣು ತುಂಬಿ ಹೊರಗಾಗಿ
ಸಿಕ್ಕಸಿಕ್ಕಲ್ಲೆ ಕಟ್ಟ್ಯಾಡಿಸೂ ಬೆರಗಾಗಿಸೂ ಬೆಳದಿಂಗಳ,
ಮುಗಿಲ ತುಂಬ ಚಿಕ್ಕಿ ಚಿಕ್ಕಿ ಫಕ್ ಫಕ್ ನಕ್ಕು
ಹುಚ್ಚು ಹಿಡಿಸೂ ಬೆಳದಿಂಗಳ,
ಹಾಲಗೇರಿ ಕೆರೀ ತುಂಬ ಬೆಳ್ಳಕ್ಕಿ ಹಿಂಡಾಗಿ ಹಾರಿ ಹೋದ ಬೆಳದಿಂಗಳ,
ಘಮಘಮಾ ಘಮಘಮಾ ಘಮಾಡಸ್ತಿದ್ದ ಬೆಳದಿಂಗಳ,
ಮಾಯದಂಥಾ ಬೆಳದಿಂಗಳ.

ಅಪ್ಪ
ಅಷ್ಟು ದೂರದ್ಲೆ ಬರತಿದ್ನಂದರೂ
ಬೆಳದಿಂಗಳದ ವಾಸನಿ ಬಡೀತಿತ್ತ ನಮಗ.
ಮನಸು ಕನಸು ದೇಹ ಸ್ನೇಹ ಸುಮ ಸುಮ
ಪ್ರಿಯತಮ
ಚಂದ್ರಿಕಾ ತಾಪ ಲೇಪನಾರ್ಥಾಯ
ಹಾದಿಗುಂಟ ಕಾದವರಿಗೆ ತುಟಿ ಮುಂದ ತಂದವರಿಗೆ
ಅಷ್ಟಷ್ಟ ಸವರಿಕೊಂತ ಎದೀ ಮ್ಯಾಲ ಅಮರತಿದ್ದ
ಬೆಳದಿಂಗಳ
ಅಪ್ಪ.

ಆ ಕಾಲ ಹೋತು,
ಈಗ ಅಪ್ಪ ಬೆಳದಿಂಗಳ ಎಲ್ಲಾ ಬರೇ ನೆನಪು.

ಬೆಳದಿಂಗಳ ಬೆಳದಿಂಗಳ ಬೆಳದಿಂಗಳಾ ಅಂದೆ
ವಾರ್‌ಆ ತಿಂಗಳಾ ವರ್ಷಾ ಅಂದೆ
ನಾನೂ ಮತ್ತ ಬೆಳದಿಂಗಳಾನ್‌ಅ ಆದೇನಿ ಅಂದೆ.
ಅಪ್ಪನ ಹೆಗಲೇರಿ ಟೊಪಿಗೀ ತುದ್ಯಾಗ ಕುಂತು
ಕೋಟಿನ ಕಿಸೆ ತುಂಬಿ ಧೋತ್ರದ ಚುಂಗ ಹಿಡಿದು
ಕಿರಬಳ್ಳಿಗೆ ಜೋತು ಬಿದ್ದು ಕುಣದಾಡತಿದ್ದ ಬೆಳದಿಂಗಳ
ಈಗ ಇಲ್ಲ,
ನನ್ನ ಹಿಂಬಲ್ಲೆ ಬರಲಿಲ್ಲ.
ಅವರಿವರ್ನ ಕೇಳಿದೆ ಅಲ್ಲಿ ಇಲ್ಲಿ ಹಣಿಕಿದೆ
ಅಜ್ಜಗೋಳ್ನ ಅಮ್ಮಗೋಳ್ನ ಬ್ಯಾಪರಿಸಿ ಬೇಡಿದೆ
ಪ್ರೀತಿ–ಗೀತಿ ಅಂತಿದ್ದವರ್ನ ರಮಿರಮಿಸಿ ಕೇಳಿದೆ
ತಲಿ ಕೆಟ್ಟ ತಿರುಗಿದೆ ಸಂದಿಗೊಂದಿ ಹುಡುಕಿದೆ
ಇಲ್ಲ, ಬೆಳದಿಂಗಳ ಇಲ್ಲ.
ರಾತ್ರಿ ಹಗಲು ಹಾದಿ ಬೀದಿ ಪ್ಯಾಟಿ
ಎಲ್ಲ್ಯೂ ಇಲ್ಲ ಬೆಳದಿಂಗಳ.
ಮಾರಾಕಿಲ್ಲ ಕೊಳ್ಳಾಕಿಲ್ಲ ಕೊಡಾಕಿಲ್ಲ ತೊಡಾಕಿಲ್ಲ
ಔಷಧಕಿಲ್ಲ ಕಾಡೇಕಿಲ್ಲ ಇಲ್ಲ ಇಲ್ಲ ಇಲ್ಲ
ಬೆಳದಿಂಗಳ ಇಲ್ಲ.
ಭಾಳ ವರ್ಷದ ಹಿಂದ್‌ಅ
ಅದು
ಕೌದಿ ಆಗಿ ಹಾಸಿಗಿ ಆಗಿ ಹರದ ಹೋಗೇತಿ
ಹಣ್ಣಾಗಿ ಕಳಚಿ ಬಿದ್ದು ಕೊಳೆತ ಹೋಗೇತಿ
ಮಣ್ಣಾಗಿ ಹುಡಿ ಆಗಿ ಹಾರಿ ಹೋಗೇತಿ
ಹಿಡಿದೇನಂದರ ಸಿಡೀತೈತಿ ಕಟ್ಟೇನಂದರ ಮೆಟ್ಟತೈತಿ
ತಂದೇನಂದರ ಕೊಂಡೇನಂದರ
ಕೊಂಡೀ ಹಾಕಿ ಹಿಚಕತೈತಿ
ನೆನಪಾಗಿ ಕಾಡತೈತಿ.

ಎಂಥಾ ಬೆಳದಿಂಗಳ...

ಎಷ್ಟುಕೊಂದ ತುಟ್ಟಿ
ಇರವಲ್ಲದ್ಯಾಕ, ಸಿಕ್ಕಿದ್ದರ ತರಬಹುದಿತ್ತು ತುಂಬಿ ತುಂಬಿ ಬುಟ್ಟಿ
ಬುಟ್ಟಿ ಬೆಳದಿಂಗಳ...
ಆದರ ಎಲ್ಲೈತೀ....

ಹುಗತೀ ಹಾಕಿ ಹಗೇದಾಗ ಹುಗದಿಟ್ಟೇವಿ
ಪಾಯಾ ಕಡದ ಗಚ್ಚ ಕೂಡಿಸಿ ಮನಿ ಕಟ್ಟೇವಿ
ಗುಡೀ ಕಟ್ಟಿ ಗದ್ದಗೀ ಕೆಳಗ ಮುಚ್ಚಿ ಇಟ್ಟೇವಿ
ಚೀಲಾ ಹೊಲಿದು ಕಪಾಟನ್ಯಾಗಿಟ್ಟು ಕೀಲಿ ಹಾಕೇವಿ
ಪಟಾ ಮಾಡಿ ಗಿಡದ ತುದಿಗೆ ಹಾರಿ ಬಿಟ್ಟೇವಿ
ಒಲೀ ಮ್ಯಾಲ ಕಾಸಾಕಿಟ್ಟು ಸುಟ್ಟು ಬಿಟ್ಟೇವಿ
ಸಿಗು ಅಂದರ ಹೆಂಗ ಸಿಗಬೇಕು....

ತುಟ್ಟಿ ಆದರೂ ಅಡ್ಡಿಯಿಲ್ಲ ತರಬೇಕಂತೇನಿ
ಅಪ್ಪನ ಕೋಟು ಟೊಪಿಗಿ ಧೋತ್ರ ಹುಡುಕಾಕ್ಹತ್ತೇನಿ
ಆ ರೋಹಿಣಿಯರ ಓಣಿ ಓಣಿ ತಿರಗಾಕ್ಹತ್ತೇನಿ
ಒಂದು ಮುಟಗಿಯಷ್ಟು, ಒಂದು ಚಿಮಟಗಿಯಷ್ಟಾದರೂ
ಸಿಗಬಹುದ? ಎಂದಾದರೂ ಬಂದು
ನನ್ನ ಹೆಗಲೇರಿ ಕಿರಬಳ್ಳ ಹಿಡಿದು
ಆಡಬಹುದ?

ಎಲ್ಲೈತಿ ಬೆಳದಿಂಗಳ?

ಮಾಯದ ಬೆಳದಿಂಗಳ?
ಮಾಯವಾದ ಬೆಳದಿಂಗಳ?
ಮಾಯದಂಥಾ ಬೆಳದಿಂಗಳ?
ಎಲ್ಲೈತಿ ಬೆಳದಿಂಗಳ?

* * * *

೫. ಹುಡುಕಾಟ

ಹುಡುಕುತ್ತ ಹುಡುಕುತ್ತ
ನನ್ನೆ ಸಂಜೆಯ ಹೊತ್ತು ಬಂದಿದ್ದೆ ನನ್ನಲ್ಲಿ
ನೀ ಎಲ್ಲಿ ಹೋಗಿದ್ದಿ?

ಗೊತ್ತಿತ್ತು ನೀ ಕೊಟ್ಟ ವಿಳಾಸ, ನೆನಪಿತ್ತು
ನೆನಪಾಗಿ
ತಿಳಿಸದೇ ಥಟ್ಟನೇ ಬಂದೆ ನಿಜ. ಆದರೂ
ಇಷ್ಟು ವರ್ಷಗಳಿಂದ ನನಗಾಗಿ ಕಾದವನು
ಎಂಥೆಂಥ ಹೊತ್ತಿನಲಿ ನನಗಾಗಿ ಆದವನು
ಒಂದೊಂದು ಉಸಿರಿನಲಿ ನೆನೆಸಿ ಜಪಿಸಿದ ನೀ
ನಿನ್ನೆ ಎಲ್ಲಿ ಹೋಗಿದ್ದಿ?

ಧಾರವಾಡದಲ್ಲಿ
ಪುಟ್ಟ ಉಸಿರ ಯಕ್ಷ ನಾಟಕ ಮುಗಿಸಿ ತಂದೆ
ಸಿದಿಗೆ ಏರಿದ ಮೇಲೆ
ತಾಯ ಮಡಿಲನು ತಬ್ಬಿ ಅಜ್ಜನೂರಿಗೆ ನಡೆದಿ.
ಮನಗುಂಡಿ ಮನಗಂಡ ದುಡಿಸಿಕೊಂಡಿತು ನಿನ್ನ
ತೋರಿಸಿತು ಅನುಭವದ ಖಂಡ ಖಂಡಾಂತರ
ಕಸ ಗುಡಿಸಿ ಸಾರಿಸಿದಿ ಸೆಗಣಿ, ಚಹದ ಅಂಗಡಿಯಲ್ಲಿ ಕಪ್ಪು ಬಸಿ ತೊಳೆದಿ
ದನದ ಹಕ್ಕೆಯ ಬಳಿದಿ, ಕಣದಿ ಹಂತಿಯ ಹೊಡೆದಿ
ಹುಲ್ಲು ಹೊರೆ ಮಿಣಿ ತಂದಿ ಒಟ್ಟಿದಿ ಕಣಕಿ ಹೊಟ್ಟಿನ ಬಣವಿ ಕಾದಿ.
ಬಣ್ಣ ಬಣ್ಣದ ಕಲ್ಲು ಸಂಗ್ರಹಿಸಿ ಮುಚ್ಚಿಟ್ಟು ಆಡಿದಿ
ಸಿಕ್ಕ ಸಿಕ್ಕ ಬೆಕ್ಕುಗಳೆಲ್ಲ ನನ್ನ ಅಣ್ಣ ತಮ್ಮಂದಿರೇ ಅಂದಿ
ವರ್ಷಕ್ಕೊಂದು ಸಲ ದೀಪಾವಳಿಗೆ
ಸಿಕ್ಕ ಹೊಸ ಚಣ್ಣ ಅಂಗಿಯ ತೊಟ್ಟು ಹಬ್ಬ ಆಚರಿಸಿದಿ
ಗುರುಪಾದ ಮಾವನೊಬ್ಬನಲ್ಲೇ ನೀನು
ಎಲ್ಲ ಗೆಳೆಯರನು ಏಕೀಕರಿಸಿಕೊಂಡಿ

ಹತ್ತು ವರ್ಷಗಳನ್ನು ಕಳೆದಿ ಒಂದೇ ಚಾಪೆ ಚಾದರದಲ್ಲಿ
ಪೇರಲದ ಗಿಡ ಹತ್ತಿ ಕಸುಗಾಯಿ ತಿಂದಿ
ಗೊಂಜಾಳ ತೆನೆ ಮುರಿದು ಸುಟ್ಟುಕೊಂಡಿ
ಮಗಿ ತುಂಬಿ ತುಂಬಿ ಗದಿಗೆಮ್ಮ ಕೊಟ್ಟಿದ್ದ
ನೊರೆ ಹಾಲ ಕುಡಿದಿ ಕುಳಬಾನದಲಿ ಅಡಗಿ
ಕೆಂಪು ದಾಸಾಳ ಹೂ ಹರಿದು ತಂದಿ ದೇವರಿಗೆ ಏರಿಸಿದಿ
ನೆಲ ಸಂಪಿಗೆಯ ಹೂ ನಕ್ಕಿದ್ದು ನೋಡಿ ಕಿಲಿ ಕಿಲಿ ಚಿಗಿತಿ
ಆಗೆಲ್ಲ ಅಲ್ಲೆಲ್ಲ ನನ್ನ ಜೊತೆಗೇ ಇದ್ದೆ
ಎಲ್ಲಿ ತಪ್ಪಿಸಿಕೊಂಡಿ?

ಯಾದವಾಡದ ಕರೇ ಎರೆಯ ಹೊಲ ಹಕ್ಕಲಗಳು
ಹಳ್ಳದ ದಂಡೆ ಲಂಡಕ್ಯಾನ ಸರುವು
ಹತ್ತೀ ಸುಗ್ಗಿ, ಬೆಲ್ಲ ದಾಣದ ಉಂಡಿ ಖಾರದಾಣಿ
ಬೇವಿನಮರದವರ ಮನೆಯಲ್ಲಿ ಮೂವರೂ ಸೋದರ ಮಾವಂದಿರೊಡನೆ
ಸಣ್ಣಾಟದ ರಂಗ ತಾಲೀಮು, ಗುಡಿಯಲ್ಲಿ ಭಜನೆ
ಜಿಡ್ಡಿಮನ ನಿಂಗಪ್ಪನ ಗುಡಿಸಲದಲ್ಲಿ ಗಾಂಧೀಜಿ ನೆನಪು
ನಸುಕಿನಲ್ಲಿ ನೀರಾ, ಹಸಿದಾಗ ಮಿರ್ಚಿ ಭಜಿ
ಪಾರಕ್ಕನಂಗಡಿಯಲ್ಲಿ ಪುಟಾಣಿ ಬೆಲ್ಲ, ಒಗ್ಗರಣಿ ಚುರಮರಿ,
ರಾತ್ರಿ ವಸತಿ, ಫಕ್ಕೀರಪ್ಪನ ಮಿಸ್ತ್ರೀ ಪುರಾಣ
ಎಲ್ಲ ಗೊತ್ತಿತ್ತು ಹೇಳಿದ್ದಿ, ಎಲ್ಲೆಡೆಗೆ ಹುಡುಕಿದೆ
ಎಲ್ಲಿ ಜಪ್ಪಿಸಿಕೊಂಡಿ?

ಮತ್ತೆ ಮರಳಿದಿ ಧಾರವಾಡದಲ್ಲಿ, ಬಾಳಿಕಾಯಿ ಗಲ್ಲಿ.
ಹಲವರು ಮರೆಯಬೇಕೆಂದಿದ್ದ ತಂದೆಯ ನೆನಪ ತಂದಿ.
ಶಾಲೆಯಲಿ ನೀ ಬರೆದ ಕತೆ ಹರಟೆ ಹಾಡುಗಳಲ್ಲಿ
ಉಳ್ಳವರ ನಡುವೆಯೇ ನಿರ್ಲಿಪ್ತ ನೆಲೆಸಿ ಬದುಕು ಅಂಗಳಗಳಲ್ಲಿ
ಪ್ರೀತಿಸಿದ ಮಾಸ್ತರರ ಮನೆಯ ಕೆಲಸಗಳಲ್ಲಿ
ಕತೆ ಕವನ ಓದುತ್ತ ಬೆಳಗಾದ ಚಿಮಣಿ ದೀಪಗಳಲ್ಲಿ
ಪ್ರ್ಯಾಕ್ಟಿಸಿಂಗ್ ಸ್ಕೂಲಲ್ಲಿ ಬೆಳೆದ ತರಕಾರಿಗಳಲ್ಲಿ

ಹಿಂದೀ ಸಾಹಿತ್ಯದೊಡನೆ ತೆರೆದ ಹರೆಯದ ಹೊಸ ದಿಶೆಗಳಲ್ಲಿ
ಮಿಶನ್ ಹೈಸ್ಕೂಲ್ ಟೌನ್ ಹಾಲ್ ಬಯಲುಗಳಲ್ಲಿ
ಕರ್ನಾಟಕ ಕಾಲೇಜು ಡಿಬೇಟು ರಂಗ ಮಂದಿರಗಳಲ್ಲಿ
ಎಲ್ಲೆಡೆಗೆ ಜೊತೆಗಿದ್ದೆ
ಅಷ್ಟರಲ್ಲೇ ಹೀಗೆ ಹೇಗೆ ಜಾರಿದಿ?

ಪ್ರೀತಿ ತ್ಯಾಗ ಸಹನೆ ಅಜ್ಞಾನಗಳ ಮಿದ್ದಿ ಮಾಡಿದ ತಾಯಿ
ನಂತರದ ನನ್ನ ಬದುಕಿನೇರುಪೇರುಗಳಲ್ಲಿ ತಾನೆ ತಾನಾದವಳು
ನಿನ್ನಾಳ ಬಂದು ನಿನ್ನಾಳವರಿಯದೇ ನಿನ್ನಾಳ ಮಾಡಿದವರು
ಅದೃಷ್ಟ ಮೋಹಗಳ ಅವಿಧೇಯ ಸೆಳೆತಕ್ಕೆ ಸಿಕ್ಕವರು
ಎಲ್ಲ ಎಲ್ಲೆಯರನ್ನು ಕಂಡು ದಂಗಾದ ಗಿರಿಜವ್ವ
ಮೊಮ್ಮಕ್ಕಳಲ್ಲೇ ನಿನ್ನ ಕಣ್ ಬಿಂಬ ಕಾಣಬಯಸಿ
ಅತ್ತಿತ್ತ ಹರಿದಾಡಿ ಕೈ ಚಾಚಿ ಕೈ ಚೆಲ್ಲಿ ಕುಳಿತಾಗ
ಬಂದಾನೊ ಬಾರನೋ ಮಗನು
ಬಂದಾನೊ ಬಾರನೋ ಮಗನ ಮಗನು
ಎಂದು ಯೋಚಿಸುತ್ತಲೇ ಶ್ರೀಶೈಲ ಗಿರಿಯತ್ತ ಪಯಣ ಹೊರಟಾಗ
ನಾನು ಅಲ್ಲೇ ಇದ್ದೆ
ನಿನ್ನ ಎದೆ ಗುಡಿಸಲಿನಲ್ಲಿಯೇ ನರಳಿದ್ದೆ
ಹೇಗೆ ನೋಡದೇ ಕೇಳದೇ ಹೋದಿ?

ನೌಕರಿ, ಕೆಲಸಗಳು, ಸಾರ್ವಜನಿಕ ಹೊರ ವೇದಿಕೆಗಳಲ್ಲಿ
ಕೈ ಹಿಡಿದು ಎಳೆದು ಕೈ ಕೊಟ್ಟ ಹೊಟ್ಟೆ ಕಿಚ್ಚುಗಳು
ಕತ್ತೆಯ ಹಾಗೆ ದುಡಿಸಿಕೊಂಡ ಸಂಸ್ಥೆಗಳು, ಪತ್ರಿಕಾ ಮಿತ್ರರು
ಈ ತನಕ ಪ್ರೀತಿಸುವ ನೆನೆನೆನೆಸಿ ನಲಿವ ನಲ್ಮುಖಗಳು
ಪೆಟ್ಟು ಸೋಲುಗಳು ನೀಡಿದ ಸಮಾಧಾನ ನೆಮ್ಮದಿಗಳು
ನೋವುಗಳ ಹೊಲದಲ್ಲಿ
ಸುರೇಪಾನದ ಹಾಗೆ, ಎಳ್ಳು ಹೂವಿನ ಹಾಗೆ
ಕುದಿಸಿದ ಉಮ್ಮಿಗೆಯ ಹಾಗೆ,
ಅರೆಸುಟ್ಟು ಉಪ್ಪು ಸವರಿದ ಜೋಳದ ಬೆಳೆಸಿ ತೆನೆಗಳ ಹಾಗೆ

ಅಲ್ಲಲ್ಲಿ ಓಣಿ ಓಣಿಗಳಲ್ಲಿ ಜಾತ್ರೆಗಳಲ್ಲಿ ಹೊಲಗಳಲ್ಲಿ
ಅಕ್ಕಡಿ ಸಾಲುಗಳಲ್ಲಿ ಅರಳಿದ ಮುಗುಳು ನಗೆಗಳು ಬಗೆ ಬಗೆಗಳು
ಎಲ್ಲೆಲ್ಲ ಏನೆಲ್ಲ ನೆನೆಸಿ
ಎಲ್ಲ ಕಡೆ ವಿಚಾರಿಸಿದೆ, ಈಗಷ್ಟೆ
ಬಂದಿದ್ದಿ ಹೋದಿ ಎಂದೇ ತಿಳಿಯಿತು
ಹೇಗೆ ಯಾವ ದಿಕ್ಕಿಗೆ ಸಾಗಿ ಹೋದಿ?

ಇಷ್ಟು ದಿನ ಕೂಡಿ ನಲಿದವರು
ಆಟ ಪಾಠ ಕಾಟ ಕೂಟಗಳಲ್ಲಿ ಮಾಟ ಹುಡುಕಿದವರು
ಹೇಗೆ ಅಗಲುತ್ತೇವೆ ಹೇಳು
ಹುಡುಕಿದೆ ಅದಕ್ಕೇ ಮತ್ತೆ, ಹುಡುಕುತ್ತ ಹೊರಟೆ.

ನನ್ನ ಹುಡುಕುತ್ತಿದ್ದೆ ನಾ
ನೀ ಅವ್ವನನ್ನು ಹುಡುಕುತ್ತಿದ್ದಿ.
ಸುಳಿವು ಸಿಕ್ಕಿತು ಎಲ್ಲೊ ಬೆರಗಾದೆ
ಗದ್ದುಗೆಯ ಮಠದಲ್ಲಿ ತೋಂಟದ ಸಿದ್ಧಲಿಂಗರ ಬಳಿಗೆ
ಕೈ ಮುಗಿದು ನಿಂತಿದ್ದಿ ಅವ್ವಾ ಎನ್ನುತ್ತಿದ್ದಿ
ಪಕ್ಕದಲಿ ಹೂ
ಸಮುದ್ರನ ಕೈಯಲ್ಲಿ ಗುರುಗಳು ಕೊಟ್ಟ ಪುಟ್ಟ ಬೆಳ್ಳಿಯ ಗಂಟೆ
ಕೇಳಿಸಿತು
ದಿಗ್ಗನೇ ಎದ್ದೆ
ನನ್ನ ಕತ್ತಲೆ ರಾತ್ರಿಗಳನ್ನು
ತೂರಿ ಹೇಮಾರ್ದ್ರ ಚಿಕ್ಕೆಗಳಲ್ಲಿ
ಬೆಳಕಾದೆ, ಬೆಳ್ಳಗಾದೆ.

ಕಳಚಿ ಬಿದ್ದಿತು
ಕಪ್ಪು ನಿದ್ದೆ.

* * * *

೪. ಕಂಪ್ಯೂಟರ್ ಕವಿತೆ

ನವ ನವೀನವನು ಇನ್ನಷ್ಟು ಮತ್ತಷ್ಟು ಬರೆಯಬೇಕು
ಕಾವ್ಯ ಲೋಕದಿ ಕೀರ್ತಿ ಉತ್ತುಂಗಕೇರಿ ಮೆರೆಯಬೇಕು.
ಬದಿಗಿಟ್ಟೆ ಪೆನ್ನು ಮಸಿ ಹಾಳೆ
ಕಾಲಕ್ಕೆ ತಕ್ಕಂತೆ ಹೊರಳುವುದೆ ಬಾಳೆ.

ಹಾಕಿದೆ ಲೆಕ್ಕ ಸಾಕಷ್ಟು ಕೂಡಿಸಿದೆ ರೊಕ್ಕ
ಹತ್ತೆಂಟೆಜೆಂಟರ ಕಂಡು ತಪ್ಪಿಸಿ ಕೊಂಡೆ ಕಂಪ್ಯೂಟರ್ ಪಕ್ಕ.
ದೋಸ್ತನೊಬ್ಬನ ಕರೆದು ಸ್ವಲ್ಪ ಹೇಳಿಸಿಕೊಂಡೆ
ಅದಕೆ ಜೋರ್‌ದಾರ್ ಪಾರ್ಟಿ. ಅಷ್ಟೆ ಬೋಳಿಸಿಕೊಂಡೆ.
ಹೊಸ ಯಂತ್ರ ಹೊಸ ತಂತ್ರ
ಕಾವ್ಯಕ್ಕೆ ಜೀವನಕೆ ಇನ್ನು ಹೊಸ ಮಂತ್ರ .
ಮನೆಯ ಆ ಈ ನೂರು ಸಾವಿರ ಲೆಕ್ಕ
ಲಕ್ಷ ಲಕ್ಷ ಪುಟ ಸಾಹಿತ್ಯ ಬುಕ್ಕ
ಇದರ ನೆನಪಿನ ಗೋರಿಯೊಳಗಿಡಬಹುದು
ತಲೆ ಮೆದುಳು ಇತ್ಯಾದಿ ಮಾರಿ ಬಿಡಬಹುದು.
ಒಡೆದೆ ತೆಂಗಿನಕಾಯಿ ಪೂಜೆ ಸಲ್ಲಿಸಿದೆ
ಹಣೆ ಹಚ್ಚಿ ವಂದಿಸಿದೆ ತಲೆಗೆಲಸ ನಿಲ್ಲಿಸಿದೆ.
ಕುಳಿತೆ ಕುರ್ಚಿಯ ಮೇಲೆ ಟೀಪು ಟಾಪು
ಇನ್ನು ಈ ಕವಿಯನ್ನು ಕಂಪ್ಯೂಟರೇ ಕಾಪು
ಕೀ ಬೋರ್ಡ್ ಮೇಲೆ ಬೆರಳಿಟ್ಟೆ, ಧನ್ಯನಾದೆ
ಒಂದೊಂದೆ ಕೀ ಒತ್ತಿ ನಾನನ್ಯನಾದೆ
ಮುಟ್ಟಿದರೆ ಮುದ್ರಣ ಪದ-ಲೋಕದುಪವನ
ಭಾವದುತ್ಕರ್ಷ ಉನ್ಮೇಷ ತಣಿದ ಹೃನ್ಮನ.

ಮನಸು ಹಾಳೆಯ ಮರೆತು ಯಂತ್ರದಲಿ ಜಿಗಿಯಿತು
ಹೊಸ ಕನಸು ಹೊಸ ಲೋಕ ವ್ಯವಹಾರ ಚಿಗಿಯಿತು
ಆ ಮೂಲೆ ಈ ಸಂಧಿ ಹಾರಿದವು ಸ್ವರ ವ್ಯಂಜನ

ಲಂಕೆ ಕಡೆ ಹನುಮ ಮನ ಲಂಘನ
ಹಿಗ್ಗಾಮುಗ್ಗಾ ಸರಿದು ಓಡಿದವು ಕುಣಿದು ಹಿಗ್ಗಿದವು
ಘುಸುಗುಡುವ ಘುಗ್ಗಾದಂತೆ ಕುಗ್ಗಿದವು
ಶಾಲೆ ಬಿಟ್ಟೊಡನೆ ದಡಬಡಿಸಿ ಓಡುವ ಹುಡುಗರಂತೆ
ಗದ್ದಲದೊಳಗೆ ತೂರಿಕೊಳ್ಳುವ ತುಡುಗರಂತೆ
ಬಾಲವಂತ ಕಪಿದಂಡು ಆಡಿದ ಹಾಗೆ ಚೆಂಡು
ಬಾಳೆವಂತ ಕವಿ ಬೆರಗಾದೆ ಕಂಪ್ಯೂಟರಾಕ್ಷರ ಕಂಡು.

ಎಂಥದೀ ಕೃತಕ ಮೆದುಳಿನ ಮಹಿಮೆ ಕಲ್ಪನಾ ಶಕ್ತಿ
ನಮೋ ನಮೋ ಎಂದೆ, ಅರ್ಪಿಸಿದೆನೆಲ್ಲ ಭಕ್ತಿ
ಹನುಮದಳ ಒಂದೊಂದೆ ಕಲ್ಲೆತ್ತಿ ಸೇತು ಸಿದ್ಧಿಸಿದಂತೆ
ಕಡಲೆದೆಯ ಭೇದಿಸುತ ಭವಿತವ್ಯ ಬಗೆದಂತೆ
ಅಕ್ಷರಕ್ಷರವೆತ್ತಿ ಹೊತ್ತು ಒಗೆದೆಳೆದೆ ಕೂಡಿಸಿದೆ
ಮತ್ತೆಳೆದು ತಂದೆ ಅತ್ತಿತ್ತ ಓಡಿಸಿದೆ
ಬೇಡವಾಯಿತು ಊಟ ವಿಶ್ರಾಂತಿ ನಿದ್ದೆ
ನಾ ಕಂಪ್ಯೂಟರಾಗಿದ್ದೆ.
ಎಂಟು ದಿನಗಳ ಅವಧಿ
ಪೂರ್ಣ ಈಸಿದೆ ಜಲಧಿ
ಹೊಸ ಲೋಕ ಹೊಸ ಭಾಷೆ ಛಂದಸ್ಸು
ನಾ ಹನುಮ ನಾ ರಾಮ ನಾ ಗದಾ ಧನುಸ್ಸು
ಗೆದ್ದೆ ನಾ ಸೀತೆಯನು ಮನದ ಭೀತಿಯನು
ಇನ್ನೇಕೆ ನೆನೆಯುವುದು ಕಾವ್ಯ ನೀತಿಯನು
ಬಹಳ ಬಳಲಿದ್ದೇನೆ ಸಾಹಿತ್ಯ ಸಾಗರದಿ ಬಹು ಕಾಲ ಈಸಿ
ಇನ್ನು ಹೋರಾಡುವೆವು ನಾನು ಈ ಪೀಸಿ.

ತೊಲಗಾಚೆ ಗವಿಯೊಳಗೆ ಅಡಗಿರುವ ಕವಿಯೆ
ನನಗಿನ್ನು ಬೇಕು ನವ ಭಾಷ್ಯ ಸವಿಯೆ.
ನಾ ಧನ್ಯ ಕಲಿಶಕ್ತಿ ಕಂಪ್ಯೂಟರ್ ಕಲಿತೆ
ಮರೆತು ಹೋಯಿತು ಕವಿತೆ.

* * * *

೫. ಇಷ್ಟು ಹೇಳಿದ ಮೇಲೆ

ಏನು ಹೇಳಲಿ ನಿನಗೆ ಇಷ್ಟು ಹೇಳಿದ ಮೇಲೆ
ಏನು ಕೇಳಲಿ ನಿನಗೆ ಇಷ್ಟು ಹೇಳಿದ ಮೇಲೆ

ನೀನು ತುಂಬಿದ ಪೇಟೆ ಗದ್ದಲದ ಕಾರ್ಖಾನೆ
ನನ್ನುಸಿರು ಕೇಳುವುದೆ ಇಷ್ಟು ಹೇಳಿದ ಮೇಲೆ

ಬೇಡಿ ಎದೆ ಕುಗ್ಗಿದೆ ಹೇಳಿ ದನಿ ತಗ್ಗಿದೆ
ತಿಳಿವುದಕೆ ಉಳಿದಿಹುದೆ ಇಷ್ಟು ಹೇಳಿದ ಮೇಲೆ

ಅನುದಾರ ವರ್ತನೆಗೆ ಜಗವು ಬಲು ಚಿಕ್ಕದಿದೆ
ಮನಸು ವಿಸ್ತರಿಸುವುದೆ ಇಷ್ಟು ಹೇಳಿದ ಮೇಲೆ
ಸಿರಿ ಅಹಂಕಾರಗಳು ಹಿರಿ ಕಿರಿ ಧಿಮಾಕುಗಳು
ಕೈ ಕೊಡುವ ಮೋಸಗಳು ಇಷ್ಟು ಹೇಳಿದ ಮೇಲೆ

ಇನ್ನೇನು ಇನ್ನೇಕೆ ಎಂಬಿಂಥ ಪ್ರಶ್ನೆಗಳು
ಇನ್ನೆಲ್ಲಿ ಉಳಿದಿಹವು ಇಷ್ಟು ಹೇಳಿದ ಮೇಲೆ

ದೂರ ಸಾಗಿದೆ ನದಿಯು ಸಾಗರ ಸಮೀಪಿಸಿದೆ
ಇನ್ನೆಷ್ಟು ಬೇಡುವುದು ಇಷ್ಟು ಹೇಳಿದ ಮೇಲೆ

* * * *

೧೦. ಅಪರಂಪಾರ : ೨೦೦೫

೧. ಅಪರಂಪಾರ

೧. ಇಹ

ನೆನಪಿದೆ ಅಹಾ, ಅವ್ವ ಬೆಳದಿಂಗಳಂಗಳ
ದಲ್ಲಿ ಚೊಕ್ಕ ಚೊಕ್ಕ ಚಿಕ್ಕೆ ತೋರಿಸುತ್ತ ತುಸು ತುಸು
ಉಣಿಸುತ್ತಿದ್ದಳು ಚಿಕ್ಕ ಚಿಕ್ಕ ತುತ್ತು
ತಿನಿಸುತ್ತಿದ್ದಳು. ನಲಿದು ಅತ್ತಿತ್ತ ಹೊರಳಿ
ನಕ್ಷತ್ರ ನೇತ್ರಗಳ ದೃಷ್ಟಿ ನದಿಯಲಿ ಮಿಂದು
ಸಾವಿರದ ಕೋಟಿ ಚಿಕ್ಕೆಗಳ ಮಡಿಲಲ್ಲಿ
ಕುಣಿಕುಣಿದು ಹೊಡಮರಳಿ ಅರಳಿ
ತುಂಬುತ್ತಿತ್ತು ಹೊಟ್ಟೆ ಕುಲುಕುಲು
ನಗುತ್ತಿದ್ದವು ಕಣ್ತುಂಬ ಕನಸು
ನಿಶ್ಚಿಂತ ನಿದ್ದೆ ಚಿಗುರುತ್ತಿತ್ತು
ಮರೆತಿಲ್ಲ ಒಂದೊಂದು ಉಸಿರೂ ಅವ್ವ.

೨. ಪರ

ಅಹಾ, ಮರೆತಿಲ್ಲ ಅವ್ವ,
ಸಿಕ್ಕ ಸಿಕ್ಕ ಚಿಕ್ಕೆ ತೋರಿಸುತ್ತ ಸರಿಸುತ್ತ ಎಲ್ಲಾ ನೋವು ಬಳಲಿಕೆ ಕಷ್ಟ
ಉಣಿಸಿದ್ದೇನೆ ಸಂಪುಷ್ಟ ಸಾವಿರದ ತುತ್ತು
ನಿವಾಳಿಸಿ ದೂರ ದೂರ ಕಳಿಸಿದ್ದೇನೆ ಲಕ್ಷ ಲಕ್ಷ ಕುತ್ತು
ಚಿಕ್ಕೆಗಳ ಎದೆಯಾಳದೊಳಗಿಂದ ನೇರ
ಬಳಿದು ತಂದಿದ್ದೇನೆ ಹೊಳಪು ಒನಪು ಬಿಗುಮಾನ ವೈಯಾರ
ದೂರದೂರದ ಘನತೆ ಮಾನ ಹತ್ತಿರದ ಅಭಿಮಾನ

ಈ ನನ್ನ ಮಕ್ಕಳಿಗೆ ನೀಡಿದ್ದೇನೆ
ಆದಷ್ಟು ಬದುಕು ತೀಡಿದ್ದೇನೆ
ತೋರಿದ್ದೇನೆ ನಾ ನಡೆದ ಹಾದಿ ಬಟ್ಟೆ
ಗಳಿಸಿಕೊಟ್ಟಿದ್ದೇನೆ ಸುಖದ ಸಂಖ್ಯಾತೀತ ಸ್ವಪ್ನ ಸಂಪತ್ತು
ಕಟ್ಟಲು ಭವಿಷ್ಯ ಹೊಸತು ಗುರಿ ಮುಟ್ಟಲು
ಕಾಲವನ್ನೇ ಎಳೆದು ಬೆಚ್ಚಗೆ ಹೊದ್ದು
ಕೊಳ್ಳಲು ವಿಧವಿಧ ಕ್ಷಣ ಹೆಣೆದ ವರ್ಣರಂಜಿತ ಬಟ್ಟೆ.

೩. ಪಾರ

ಆಹ ಅವ್ವ, ಎಷ್ಟು ಕಾಲದ ನಂತರ ಸಿಕ್ಕೆ
ಈಗ ನೀನೂ ಚಿಕ್ಕೆ
ಮುಗಿದು ಹೋಗಿದೆ ಸಂತೆ
ನಿನ್ನೆ ಬೆಳತನಕ ಅತ್ತೆ
ಈ ಕ್ಷಣವೆ ಸತ್ತರೂ ಇನ್ನಿಲ್ಲ ಚಿಂತೆ
ನಿನ್ನ ಆಕಾಶ ಚೀರದುಡಿಯಲ್ಲಿ ಉರುಳಿ
ಭಯ ನೀಗಿಕೊಂಡೆ ತಾಯೀ ಬೀಗಿಕೊಂಡೆ ಸುಖ
ನೀ ಮಹಾ ನಿರ್ಭಯದ ನಿರ್ವಯಲು ಬೆಳಕ ಮುಖ
ಚಿಕ್ಕೆಯಾಗುವುದಕ್ಕೆ ಇನ್ನಿಲ್ಲ ಹೆದರಿಕೆ
ಆಗ ಕುಳಿತುಕೊಳ್ಳುತ್ತಿದ್ದೆ ತೊಡೆಯಲ್ಲಿ
ಈಗ ವಿರಮಿಸುವೆ ನಿನ್ನ ಅಡಿಯಲ್ಲಿ
ಮತ್ತೊಮ್ಮೆ
ಚಿಕ್ಕ ಚಿಕ್ಕ ಚಿಕ್ಕೆಗಳ ತುತ್ತೊಮ್ಮೆ
ಉಣಿಸವ್ವ ಹಸಿದಿದ್ದೇನೆ
ತಾಳಲಾರೆನು ಕ್ಷುಧೆಯ
ಕಾದಿದ್ದೇನೆ ಇಗೋ ತೆರೆದು ಬಾಯಿ
ನಿನ್ನ ಅಂಗೈ ತುಂಬ ಬೆರಳು ಹೊರಳುಗಳ ತುಂಬ
ತುಂಬಿ ತುಳುಕುತ್ತಿರುವ ನೆಮ್ಮದಿಯ ಸುಧೆಯ
ಇನ್ನೊಮ್ಮೆ ಮತ್ತೊಮ್ಮೆ ಮಗುದೊಮ್ಮೆ ಉಣಿಸವ್ವ ತಾಯೀ....

೪. ಅಪಾರ

ಅಹಾ, ಇಲ್ಲಿ ಅಹಾ, ಅಲ್ಲಿ
ಎಷ್ಟೊಂದು ಚಿಕ್ಕೆ ಎಂಥೆಂಥ ಚಿಕ್ಕೆ
ಚಿಕ್ಕ ಚಿಕ್ಕ ಚಿಕ್ಕೆ
ಚೊಕ್ಕ ಚೊಕ್ಕ ಚಿಕ್ಕೆ
ತುಂಟ ಚಿಕ್ಕೆ ಬಂಟ ಚಿಕ್ಕೆ
ಹಂಡಬಂಡ ಮೊಂಡ ಭಂಡ ಚಿಕ್ಕೆ
ಎತ್ತಿಕೊಳಲು ಜಾರಿ ಹೋಗಿ ಹಾರಿ ಬಿಡುವ ಚಿಕ್ಕೆ
ಜಿಂಕೆಯಂತೆ ಗುಡ್ಡ ಬೆಟ್ಟ ಸೂರೆ ಹೊಡೆವ ಚಿಕ್ಕೆ
ಸದಾ ನಗುವ ಬೀರುತಿರುವ
ಜೀವ ಜಲವ ಹೀರುತಿರುವ
ಅಮರ ಜಗಕೆ ಮೆರುಗು ತರುವ
ಮೊದಲ ನಡೆಯ ತೊದಲು ನುಡಿಯ
ಚಿಕ್ಕ ಚಿಕ್ಕ ಚೊಕ್ಕ ಚೊಕ್ಕ ಚಿಕ್ಕೆ
ಅಹಾ, ನನ್ನ ಅವ್ವ
ನಿನ್ನ ಪ್ರೀತಿ ಲೋಕ ಅದ್ಭುತ
ಇಲ್ಲಿ ನಾನು ನೀನು ಮಕ್ಕಳೆಲ್ಲ ಪುಟ್ಟ ಪುಟ್ಟ ಬುದ್ಬುದ
ಗುಳ್ಳೆ ಒಡೆವುದಿಲ್ಲ ಕೊಳ್ಳೆ ಹೊಡೆವರಿಲ್ಲ
ನಿನ್ನ ಕಣ್ಣ ಪರಿಧಿಯಲ್ಲೆ
ಸುತ್ತಿ ಸುತ್ತಿ ಮಲಗಿ ನಿದ್ದೆ ಹೋಗುವೆ
ನಿನ್ನ ಕೈಯ ತುತ್ತಿಗೆಂದು
ನಿನ್ನ ತುಟಿಯ ಮುತ್ತಿಗೆಂದು
ನಾನು ಸಣ್ಣ ತೊತ್ತು ಅವ್ವ ಸದಾ ನಿನ್ನ ಸುತ್ತು....

೫. ಅಧಿಪಾರ

ನನ್ನ ಅಡಿಯಲ್ಲಿ ಮುಡಿಯಲ್ಲಿ ಚಿಕ್ಕೆಗಳ ಸಿಂಗಾರ
ನನ್ನವ್ವನುಣಿಸಿದ್ದ ತುತ್ತುಗಳ ಘನಸಾರ
ಅವ್ವ, ಈ ಸುವಾಸಿತ ಅನ್ನ
ನಿನ್ನ ಹಾಗೆ ನನ್ನ ಮಕ್ಕಳಿಗೂ ಉಣಿಸಿದ್ದೆ

ಅವ್ವ, ಮರೆಯುವುದಿಲ್ಲ ಯಾವುದೂ
ನಿನ್ನ ಮಗ್ಗುಲದಲ್ಲಿ ಬೆಚ್ಚಗೇ ಕುಳಿತಿರುವೆ
ಮುದ್ದೆ. ನಮ್ಮ ಪಕ್ಕದಲ್ಲೇ
ನಾಲ್ಕಯ್ದು ಚಿಕ್ಕೆಗೆ ಜಾಗ ಇಟ್ಟುಕೊಳ್ಳೋಣ
ಇಂದಲ್ಲ ನಾಳೆ ಇಲ್ಲಿಗೇ ಬಂದಾರು
ಆ
ಮಕ್ಕಳೂ ಅವ್ವ...
ಅವ್ವ... ನನ್ನ ಅವ್ವ... ಅವ್ವ...

* * * *

೨. ಬಟ್ಟೆ

ತೊಟ್ಟಾಗ ಸಾವರಿಸಿ ಮುಚ್ಚುವುದು
ಹೊರ ಮೈಯ ಮರ್ಯಾದೆ
ಬಟ್ಟೆ
ಉಸಿರ ಕೈ ಹಿಡಿದು ನಡೆದು
ಅನುಭವಿಸಿ ಪಟ್ಟಾಗ
ತೋರುವುದು ಬದುಕಲಿಕೆ ಹತ್ತಾರು ಬಟ್ಟೆ.

ಮರ್ಯಾದೆಯೆನ್ನುವುದು ತನು–
ವಿನಂಗಾಂಗಗಳ ಅಳತೆ ಪಟ್ಟಿ
ಆಗ ಬಟ್ಟೆ ಕೇವಲ ವಸ್ತ್ರ
ವಿಕಲ ಬದುಕಿನ ಕಲುಷಗಳು ಕಳೆದಾಗ
ಬಟ್ಟೆ ಸ್ಫೂರ್ತಿಯ ಚಿಲುಮೆ, ಹರಿವ ಧಾರೆ
ಚೈತನ್ಯ ಶಸ್ತ್ರ.

ಬಟ್ಟೆ ಚರ್ಮಕ್ಕೆ ಬೇಕು
ನಿಜ, ಕೆಲವು ಸಂದರ್ಭ

ಚರ್ಮವೇ ಮೃಗಾಂಬರ ಮಾಯೆ ಬಟ್ಟೆ
ಎಂದಿದ್ದ ಹರನು ಸೂತ್ರಪ್ರಿಯ ಮೋಹನನು.

ಮರ್ಮಕ್ಕೆ ಬಟ್ಟೆ ಬೇಕೇ
ಬೇಕು. ಅದು ಕರುಳ ತಿರುಳಿನ ಧರ್ಮ.
ಬಟ್ಟೆ ಬಿಟ್ಟರೆ ಕಷ್ಟ ಹಾಕುವುದು ಹೆಜ್ಜೆ
ಖಂಡಿತ ಬದುಕು ಒಜ್ಜೆ
ಗುರುತು ಚಿಹ್ನೆಗಳ ಇತಿಹಾಸ ಬರೆಹಗಳ
ಹೆಜ್ಜೆ ಮೂಡುವುದೆಂತು ಚಿಂತಿಸಲು
ಸಿಗುವ ಸತ್ಯಪಥ ಬಟ್ಟೆ.

ಸುವಿಶಾಲ ವಿಶ್ವಕ್ಕೆ ಆಕಾಶವೇ ಬಟ್ಟೆ,
ನಶ್ವರ ಮನುಷ್ಯನಿಗೆ
ನಂಬಿಕೆಯ ಅಚಲ ನಿರ್ಧಾರ
ಕೈ ಹಿಡಿವ ಬಟ್ಟೆ.

ನಿರ್ಮಲವಾಗಿರಲಿ ನಿರ್ಧೂಲಿ ನಿರಭ್ರ
ಬಟ್ಟೆ
ಉಜ್ವಲ ಧವಲವಾಗಿರಲಿ ಶುಭ್ರ.

ಬಟ್ಟೆ
ಮುನ್ನಡೆವ ಪಂಥಕ್ಕೆ ಹಾದಿ
ಸನ್ನಡೆವ ಸಂತನಿಗೆ ಆದಿ
ತಪ್ಪಿ ನಡೆದರೆ, ತಪ್ಪು ನುಡಿದರೆ
ಎಲ್ಲ ಮೂರಾಬಟ್ಟೆ.

* * * *

೩. ಮುಂಬಯಿಯ ಆಕಾಶ

ಮುಂಬಯಿಯ ಆಕಾಶದಲ್ಲಿ
ಕೇವಲ ಆಕಾಶ–
ದ ತುಂಡು ತುಂಡು ಗಗನ ಮಂಡಲಗಳು,
ಅವುಗಳ ಗರ್ಭ ಸೀಳಿ
ದೇಶ ದೇಶಾಂತರ ಹೊರಟ ವಿಮಾನ,
ಹೊಗೆ ಸುತ್ತಿ ಗಂಟಲು ಬಿಗಿದು ನರಳುತ್ತಿರುವ
ಚೆದುರು ಮೋಡದ ದಂಡು,
ಅತ್ತಿತ್ತ ಇಣುಕುತ್ತ ಕಾಲ್ಜಾರಿ ಬಿದ್ದು
ಎದ್ದು ಓಡುವ ಪುಟ್ಟ ಮಕ್ಕಳ ಹಾಗೆ
ಅಳುತಳುತ ನಗುವ ರಶ್ಮಿ ಪುಂಜಗಳು,
ಅವುಗಳ ಎಳೆಗಾಲ ತುದಿಬೆರಳ ಹಿಡಿದೆಳೆದು ಆಟಕ್ಕೆ ಕರೆವ
ಸಂಖ್ಯಾತೀತ ಸ್ಪರ್ಧೋತ್ಸುಕ ತುಂಗೋತ್ತುಂಗ
ಅಂತಸ್ತು ಭವನಗಳ ವಿಧವಿಧ ಶೃಂಗಗಳು,
ಅಲ್ಲಲ್ಲಿ ಸಂದಿಯಲಿ ಉಸಿರು
ಕಟ್ಟಿ ಬೆವರು ಸುರಿಸುವ ಗಾಳಿ,
ಅದರ ಮೈ ಕೈ ಪರಚಿ ದಣಿದು ಸೋಲುತ್ತಿರುವ
ಫ್ಯಾನು ಕೂಲರು ಯಂತ್ರ,
ಕಾಲರಾಯನ ತೊಡೆಯ ಮೇಲೆಯೇ ಕುಳಿತು
ಗುಣಾಕಾರ ಭಾಗಾಕಾರ ಮಂತ್ರ
ಜಪಿಸುತ್ತಿರುವ ನಿಸ್ತೇಜ ಮುಖಗಳು,
ಡಾಂಬರು ದಾರಿಯ ಮೇಲೆ
ಕೋರೀ ಹುಳುಗಳ ಹಾಗೆ ಸಾವರಿಸಿ ಸರಿಯುತ್ತಿರುವ ವಾಹನ ಸಾಲು,
ಶತ ರೀತಿ ಜೀವಸ್ಫುರಣ ಶೇಖರಿಸಿ ನುಂಗಿ ಆಪೋಷಿಸಿ
ಭರದಿಂದ ಸಾಗಿರುವ, ಭಯೋತ್ಪಾದಕ
ಗುಪ್ತ ಇತಿಹಾಸಗಳೆ ನೆಲೆಸಿರುವ
ಸರ್ವಗ್ರಾಹೀ ಗಟರುಗಳನಪ್ಪಿಕೊಳ್ಳುತ್ತಿರುವ ಅರಬೀ ಸಮುದ್ರ.
ಎಷ್ಟು ಯತ್ನಿಸಿದರೂ ಇಲ್ಲಿ ಯಾವಾಗ ಬಂದರೂ ಇಷ್ಟೆ

ಕಂಡಿದ್ದೆ ಇವುಗಳದೆ ಬಿಂಬ ಪ್ರತಿಬಿಂಬ
ಮುಂಬಯಿಯ ಆಕಾಶದಲ್ಲಿ.

ಇಂದು ನಸುಕಿನ ಜಾವ ತಿಳಿಹೊತ್ತಿನಲ್ಲಿ
ಅವತರಿಸಿ ಬಂದಂತೆ ಭಿನ್ನ ದೃಶ್ಯ :
ಕಂಡು ಕಂಪಿಸಿತು ಸ್ವಯಂ ತಿಳಿವಳಿಕೆ, ಅಚ್ಚರಿಯೆ ಬೆಚ್ಚಿತು
ಹರುಷ ಹೆಚ್ಚಿತು–

ಇಲ್ಲಿ ವಾಸಿಸುವವರ ಎಲ್ಲ ಅಂತಸ್ತುಗಳಿಗಿಂತ ಸ್ವಲ್ಪ ಎತ್ತರದಲ್ಲಿ
ಏನೋ ಧೇನಿಸುತಿರುವ ಪಾರಿವಾಳಗಳು
ಮಲಬಾರು ಪರ್ವತದ ಪಕ್ಕದ ಸಮುದ್ರದೆಡೆ ಸಾಗಿವೆ,
ಹುಣಸೆ ಮರದಡಿಯಲ್ಲಿ ತೊಟ್ಟಿಲಾಡುತ್ತಿವೆ ಕಾಗೆ ಹತ್ತಿಪ್ಪತ್ತು,
ವೃದ್ಧಾಲಯದ ಮುಂಬದಿಯ ಹುಲ್ಲು ಹಾಸಿನ ಮೇಲೆ
ದಣಿದ ದೇಹಗಳಲ್ಲಿ ವಿರಮಿಸುತ್ತಿದ್ದಾರೆ ಮುದುಕ ಮುದುಕಿಯರು
ಪರಸ್ಪರರ ನೊಂದ ಕಣ್ಣುಗಳಲ್ಲಿ ಬೆಂದ ಕನಸನ್ನ
ನೆಕ್ಕುವುದು ಹೇಗೆ ಮುಕ್ಕುವುದು ಎಂದು
ಪಿರ್‍ಯಾಮಿಡ್‌ಗೊಂಡು ಕುಳಿತಿದ್ದಾರೆ,
ಕೆಂಪು ಹೂ ಶಾಲು ಹೊತ್ತ ನಗುಮುಖದ ಕಣಗಿಲ ಮೇಲೆ
ಪರದೇಸಿ ಹಳದೀ ಪಾತರಗಿತ್ತಿ,
ಪಪ್ಪಾಯಿ ಗಿಡದ ಬದಿಗೆಂಟು ಜೋಳದ ದಂಟು,
ಬೇವಿನ ಮರದ ಕೆಳಗೆ ಗುದ್ದಲಿ ಸಲಿಕೆ ಬುಟ್ಟಿ,
ಲೋಹದ ಜಂಗು ಹಿಡಿದ ನಾಲ್ಕು ಹೆಗಲು–ಗಂಬಗಳ ಮೇಲೆ
ವರ್ಷ ವರ್ಷಗಳಿಂದ ರಾತ್ರಿ ಹಗಲು ಜೋ ಜೋ ಜೋ–
ತಾಡುವ ಹಳೆಯ ಜೋಕಾಲಿ

ಮುಂಬಯಿ ಎದೆ ತುಂಬಿದೆ
ಬಚ್ಚ ಬಾಯ ಹೊಸ ನಸುಕು ನಗುತಿದೆ
ಹಾರಾಟ ನರಳಾಟ ಸ್ತಬ್ಧ –
ಚಿತ್ರಗಳು

ಕಲಾಗ್ಯಾಲರಿಯಲ್ಲಿ ಮಂಡಿಸಿವೆ ಮಾರಾಟಕ್ಕೆ,
ಹಣೆ ಮೇಲೆ ಕೊರೆದ ಬೆಲೆ ಪಟ್ಟಿ
ಹಾರಿವೆ ಮೇಲಕ್ಕೆ
ನಗುವ ಪಾರಿವಾಳಗಳೀಗ ಗಗನ–
ಮಂಡಲದ ತುದಿ ಸೇರಿವೆ,
ಮುಗುಳು ನಗುತಿದೆ ಮುಕ್ತ ಮುಂಬಯಿ
ಯ ಆಕಾಶ.

* * * *

೪. ಮನಸುಗಳ ಕಟ್ಟು

ಬಾಣ ಹೂಡಿದ್ದೇವೆ ಜೇನುಗೂಡಿಗೆ ಕಲ್ಲು ಬೀಸಿದ್ದೇವೆ
ಕುಸಿಯುತಿವೆ ಕಟ್ಟಡ ಹುಳ ಎದ್ದಿವೆ
ಮೈ ತುಂಬ ಮದ ಕೆರೆತ ತುರಿಕೆ
ಝುಳ, ಕುದಿಯುತ್ತಲಿದ್ದೇವೆ ತಳಮಳ.
ಕಂಟಿ ತುಂಬ ಮುಳ್ಳು ಜೇನು ತುದಿ ತುದಿಗೆ
ಸಾವರಿಸಿ ಎದೆ ಬದಿಗೆ
ಬಸಿಯಬೇಕು ತುಪ್ಪ ಹೀರಬೇಕು
ಎದೆಗೊಟ್ಟು ಎದುರಿಸಬೇಕು
ಹುಟ್ಟಿಳಿಸಬೇಕು ಹುಟ್ಟಳಿಸಬೇಕು
ಆಗ ಮೆಲ್ಲಲು ಸಾಧ್ಯ
ಕನಸು.

ಹಿಂಜರಿದು ಓಡಿದರೆ
ಮೈಯೆಲ್ಲ ಮುಳ್ಳು ನೋಡಿ ನಗಲಾರವೇ ಗುಂಪುಗಟ್ಟಲೆ ಸುಳ್ಳು
ಹಸಿದು ಕಂಗಾಲಾಗಿ
ನೆಕ್ಕಿ ನುಂಗುವವು ನಮ್ಮ ತಪ್ಪು ನೆಪ್ಪು
ಅದು ನನಸು.
ಬೇಗ ನಿರ್ಧರಿಸು ವ್ಯಕ್ತಿತ್ವ ನಶಿಸದ ಹಾಗೆ

ಆಟ ಕಾಟಗಳ ನಡುವೆ ನಗುತಿದೆ ಮಾಟ
ಮತ್ತೆ ಮತ್ತೆ ಅದಕ್ಕೆ
ಸಿಕ್ಕಷ್ಟು ಸಂತೋಷ ಹೊಸ ಹೊಸತು ಬೇಟ
ನೀನಾಗಬೇಡ ತೃಪ್ತಿಯ ಊಟ ಹುಲುಸು.

ಬಾಣ ಬಿಡುವುದು ಸರಳ ಕಷ್ಟ ಬಿಡದಿರುವುದು
ಚುಚ್ಚುವುದು ಕೊಲ್ಲುವುದು ಹೋರುವುದು ಭ್ರಾಂತಿ
ನಿತ್ಯದ ನಿರಂತರದ ಹಸಿವು ಕಾದಾಟ
ಆಯುಧವಾಗದಿರಲಿ ಆಯುಷ್ಯ
ಕಟ್ಟುವುದು ಕಠಿಣ ಸೃಜನ ಕ್ರಿಯೆ
ಸದ್ಧರ್ಮದವತಾರ ನೆಮ್ಮದಿ ಶಾಂತಿ
ದೇಹ ಗೂಡುಗಟ್ಟುವ ಮೊದಲು ಮನುಷ್ಯ
ಕಟ್ಟಲಿ ಮನಸು ಮನಸು.

* * * *

೫. ವಲಸೆ ಹೋಗುವುದಿಲ್ಲ

ನೋವುಗಳು ಎಲ್ಲಿಗೂ ವಲಸೆ ಹೊಗುವುದಿಲ್ಲ
ಎಷ್ಟು ತೊಳೆದರೂ ಮೈ ಹೊಲಸೆ ಹೋಗುವುದಿಲ್ಲ

ನಂದುವುದಿಲ್ಲ ಎಂದೂ ಸ್ವರ್ದೀಪ ಹೂವು ಬಾಡುವುದಿಲ್ಲ
ಈಗ ಹೊಳೆದಿದೆ ನಮ್ಮನ್ನು ಬೇರೆ ಯಾರೂ ಕಾಡುವುದಿಲ್ಲ

ಕರ್ಣಕವಚವಾಗಿ ನೆನಪು ಮತಿವಿಭ್ರಮ ತಡೆಯುತ್ತವೆ
ಕ್ಲೇಶ ಕತ್ತಲೆ ಕನಸು ಅನುಭವದ ಹೆಸರು ಪಡೆಯುತ್ತವೆ

ವಾದ ವಿಷಾದ ದೂರು ಆಗ್ರಹ ಹೇಳುತಿವೆ ತಾಳು ತಾಳು
ತಿಂದಾಗ ಕಾಳು ಹೆಸರೆಂಬುದು ಜನಮನದಿ ನಿಂದಾಗ ಬಾಳು
ಕತ್ತಲೆಣ್ಣೆಯ ಕುಡಿದು ಉರಿಯುವುದು ಸೂರ್ಯನ ಬತ್ತಿ

ಜೀವ ಮುಗ್ಗರಿಸಿದರೆ ಕುಡಿವ ನೀರು ಸಹ ವಿಷ ಕತ್ತಿ

ಬದುಕು ತಿಳಿ ತಿಳಿದಲ್ಲಿ ಡೇರೆ ಹಾಕುತ್ತ ಅಲೆಯುತ್ತದೆ
ಸಾವು ಶಾಶ್ವತವಾಗಿ ಮನಗಂಡ ರೀತಿ ನೆಲೆಸುತ್ತದೆ

ನೋವುಗಳು ಯಾಕೆ ವಲಸೆ ಹೋಗುವುದಿಲ್ಲ
ನೆನಪುಗಳು ಯಾಕೆ ಮಾಸಿ ಹೋಗುವುದಿಲ್ಲ

ಶತಮಾನಗಳಿಂದ ಬೆಳದಿಂಗಳ ವಿಲಾಪ ಕಿವಿಗೆ ಬೀಳುವುದಿಲ್ಲ
ಸೃಷ್ಟಿ ನಿಟ್ಟುಸಿರ ಗೂಢಾರ್ಥ ಕವಿಗೆ ಹೇಳುವುದಿಲ್ಲ

ಗತ ಗಳಿಗೆ ಮರೆಗೆ ಸರಿಯುತ್ತವೆ ನಶಿಸಿ ಹೋಗುವುದಿಲ್ಲ
ನೋವುಗಳು ಮಾತ್ರ ಎಲ್ಲಿಗೂ ವಲಸೆ ಹೋಗುವುದಿಲ್ಲ

* * * *

೬. ಸೆಟ್ಟಿಯ ಅಂಗಡಿ

ಬಾ ತಂಗೀ, ಬಾ. ಏನು ಬೇಕಾಗಿತ್ತು?
ಈಗಷ್ಟೆ ಅಂಗಡಿ ಬಾಗಿಲು ಫಡಕು ತೆಗೆದೆ
ನಿನ್ನಿಂದಲೇ ಬೋಣಗಿ –
ಶುಭವಾಗಲಿ ತಾಯೀ ನಿನಗೆ ಏನು ಕೊಡಲಿ?
ಎಷ್ಟೊಂದು ಚೀಲ ಹೊತ್ತು ತಂದಿದ್ದೀ,
ಅಷ್ಟು ದೀನಸು ಬೇಕೆ? ಎಂಥಾ ಖರೀದಿ?
ಮನೆಯಲ್ಲಿ ಹಬ್ಬವೋ ಮದುವೆಯೋ? ನಿನ್ನದೋ?
ಯಾಕವ್ವ ನಾಚಿಕೊಳ್ಳುತ್ತೀ....?

ಆಚೆ ಡೊಳ್ಳಾರಿ ಮೇಲೆ ಚಾಪೆ ಹಾಸಿದೆ ನೋಡು, ಕುಳಿತುಕೋ.
ಬೇಕಾದಷ್ಟಿದೆ ದಾಣಿ ಪುಟಾಣಿ ಚುರಮರಿ ಚಾಪುಡಿ ಬೆಲ್ಲ

ಯಾಲಕ್ಕಿ ಕಸಕಸಿ ಮೆಣಸು ಅಷ್ಟೆಲ್ಲ ಇಲ್ಲ
ಆದರೂ, ಇರಲಿ, ಅದೆಲ್ಲ ನೀ ಬೇಡುವಂಥದ್ದಲ್ಲ,
ಇಲ್ಲುಂಟು ನಿನಗೆ ಬೇಕಾಗುವಂಥದ್ದೆಲ್ಲ.
ನೋಡಿಲ್ಲಿ ಜೋಡಿಸಿದ ಮಾಡು ಪೆಟ್ಟಿಗೆ ನಾಗೊಂದಿ ಸಂದಿಗೊಂದಿಗಳು
ನನ್ನೊಂದಿಗೇ ಬೆಳೆದ ಬಂಧು ಸಂಬಂಧಿಗಳು.

ಹೊಸಬಳಂತೆ ಕಾಣುತ್ತೀ
ಈ ಊರಿಗೆ ಓಣಿಗೆ ಕಣ್ಣಿಗೆ.
ದಡ್ಡ ಸೆಟ್ಟಿ ಎಂದೇ ನನ್ನ ಕರೆಯುತ್ತಾರೆ ಮಂದಿ.
ಏನಂದೀ....?–
ನಾ ಬಹಳ ಹಳಬ ಈ ಊರ ಮಣ್ಣಿಗೆ.
ಈ ಮೊದಲು ನೋಡಿಲ್ಲ ನಾ ನಿನ್ನ
ಬಂದಿರಲೂ ಬಹುದು ನೀ ಈ ಊರಿಗೆ
ನೋಡಿಲ್ಲ ಈ ಕಡೆ ಬಂದು ನನ್ನ.

ನೀನಿಂದು ಬಂದದ್ದು ಅಪರೂಪ
ಇಲ್ಲಿ
ನಾನು ಕೂಡಾ ಈಗ ಬಹಳ ಅಪ ರೂಪ.
ಎಂಥೆಂಥ ಪ್ರಣಯಾದ್ಭುತ ಪವಾಡಗಳ ತಳಮಳ
ಸಮರ ಡಂಗುರ ಕೊಂಬು ಕಹಳೆ ಪ್ರಳಯಗಳ ಚಳವಳ
ರಾಜಕೀಯದೇರು ಪೇರು ಉಪವಾಸ ನಾಟಕಗಳ
ಸಾವಿರದ ರಾಕ್ಷಸ ಮಾರುಕಟ್ಟೆಗಳ ಮೆಟ್ಟಿಲು ಹತ್ತಿ
ಇಲ್ಲಿ ಊರಿದ್ದೇನೆ ತಳ
ಇಲ್ಲ ಮುಚ್ಚುಮರೆ ಎಲ್ಲ ಜಳ ಜಳ
ನಾನು ಪಟ್ಟಣ ಸೆಟ್ಟಿ ಹಳೆಯ ಕುಳ
ಆಗದವರು ಏನೇನೋ ಅನ್ನುತ್ತಾರೆ ತಲೆ ತುಂಬ ತುಂಬಿ ಹುಳ
ಬಿದ್ದಿರಬಹುದು ನಿನ್ನ ಕಿವಿಗೂ.
ಇರಲಿ ಬಿಡು, ಕೇಳಿದ್ದರೂ ಎಲ್ಲ ತಿಳಿದಿದ್ದರೂ
ನನ್ನ ಅಂಗಡಿ ಕಟ್ಟೆ ಹತ್ತಿ ಬಂದಿರುವೆಯಲ್ಲ....

ಅರೆ, ಏನಿದು, ಇನ್ನೂ ಹಾಗೆಯೇ ನಿಂತಿರುವಿಯಲ್ಲ?
ಹೇಳು ಮಗಳೇ, ಏನು ಬೇಕಾಗಿತ್ತು ಎಷ್ಟೆಷ್ಟು ಹೇಳು.
ಈ ಅರಪಾವು ಗಿರಪಾವು ಸೇರು ಚಟಾಕು ತೆಪೇರಿ ಮಾಪು ಅಳಿ ಲೆಕ್ಕ
ಅಳಿದೇ ಹೋಗುವಷ್ಟು ಇತ್ತೀಚೆ ಬದಲಾಗಿವೆ ನೋಡು.
ಅಂದ ಹಾಗೆ, ನಿನ್ನ ಕೈಯಲ್ಲಿ ಎಷ್ಟೊಂದು ಚೀಲ
ತುಂಬಿ ಬಿಡಬಹುದು ನನ್ನ ಭವಿತವ್ಯ ಸಹಿತ ಎಲ್ಲಾ ಕಾಲ.
ನನ್ನ ಅಂಗಡಿಯ ಸಮಸ್ತ ವಸ್ತು-ಒಡವೆ
ತೂರೆದು ಯಾರದೂ ಮುಲಾಜು ಹಂಗು ಗೊಡವೆ
ಹೇರಿ ತರಬೇಕೆಂದು ಹೇಳಿದರೆ ಯಾರಾದರೂ....?
ಕುಳಿತುಕೋ, ಬೆಮರದಿರು, ಸ್ವಲ್ಪ ಸಾವರಿಸಿಕೋ,
ಹೀಗೆ ಮಿಕಿಮಿಕಿ ನೋಡಿ ರಂಗಿನೆಲ್ಲಾ ಬೆಳಕು ಚೆಲ್ಲಬೇಡ,
ನಿನ್ನ ಕಟಿ ಕಟಾಕ್ಷ ಪಲ್ಲಂಗವೇರಿ ಸಾಯಬೇಕೆನ್ನುವರ ಕೊಲ್ಲಬೇಡ.

ವರ್ಷವರ್ಷಗಳಿಂದ ಈ ಊರ ಮಂದಿಗೆ
ಅಂಗಡಿ ಎಂಬುದನ್ನು ಕಲಿಸಿದವನೇ ನಾನು,
ಹಲಹಲವು ವಸ್ತುಗಳ ತರಿಸಿ ಬೆರೆಸಿ ಕೂಡಿಸಿ ಬಾಡಿಸಿ
ಹೊಸತು ಮಿಶ್ರಣ ದ್ರವ್ಯ ಕಲೆಸಿದವನೇ ನಾನು.
ವ್ಯವಹಾರ ವ್ಯಾಪಾರದುದ್ಯೋಗದಲಿ ತೊಡಗಿ
ಹೊಸ ಹೊಸ ಊರು ಕೇರಿಗಳನ್ನು ಮುತ್ತಿದೆ
ಮುದ್ದಿಸಿದೆ ಮರ್ದಿಸಿದೆ ನನ್ನವಾಗಿಸಿಕೊಂಡೆ
ಮೆದುವಾಗಿ ಎದೆಗಪ್ಪಿ ತೊಡೆ ನಡುವೆ ತಾಗಿಸಿಕೊಂಡೆ
ನನ್ನ ಅಂಗಡಿ ಆಗ ನಿತ್ಯ ದೀಪಾವಳಿ
ಈಗಲೂ ಸತ್ಯ ಆ ರಾತ್ರಿ ಬೆಳಗುಗಳ ಹಾವಳಿ.

ನನ್ನ ಅಂಗಡಿಯಲ್ಲಿ ಸಿಗುವಂಥ ವಸ್ತು
ಈ ಊರು ಆ ಊರು ಯಾವೂರ ಪೇಟೆಯಲ್ಲೂ ಇಲ್ಲ
ಇದು ಅದ್ಭುತ ಜಗತ್ತು.
ಯಾಕೆ ನೋಡುತ್ತೀ ಹಾಗೆ ಗೋಣೆತ್ತಿ?-
ತಡೆ ತೋರಿಸುತ್ತೇನೆ...

ಹಿಂಜಿ ಹಿಂಜಿ ಬಿಡಿಬಿಡಿಸಿ ಹೊಂದಿಸಿಟ್ಟ
ಅರವತ್ತು ವರುಷಗಳ ಮೆತ್ತನ್ನ ಕುತನಿ ಬೆಳದಿಂಗಳ
ಎದೆಯ ಈ ಚೀಲದಲಿ ಬೆಚ್ಚಗಿಟ್ಟಿದ್ದೇನೆ.
ಸೂರ್ಯ ಮಿತ್ರನು ಕೊಟ್ಟ ಸಂಖ್ಯಾತೀತ ಉದಯ ಅಸ್ತಗಳನ್ನು
ಮುಂಜಾವು ಸಂಜಾವು
ಎಳೆ ಬಿಸಿಲು ಇಳಿ ಬಿಸಿಲು ಮಳೆ ಬಿಸಿಲು ತುಣುಕುಗಳ
ಬೆವರು ಹನಿ ಮೆತ್ತಿರುವ ಬಿರು ಬಿಸಿಲ ಬೇಗುದಿಯ ತಳುಕುಗಳ
ತೇಪೆ ತುಂಡುಗಳನ್ನು ಸಿಂಗರಿಸಿ ಹೊಲಿದ ಕೌದಿ
ಹಾಸಿಕೊಂಡು ಕುಳಿತಿದ್ದೇನೆ.
ಬಣ್ಣಬಣ್ಣದ ಮೋಡ, ಕಿರಣ ವಲ್ಲರಿ ಜಾಲ
ಚಂದ್ರಾಮನೊಡನೆ ಜೋಕಾಲಿ ಜೀಕಿ
ಹುಣ್ಣಿಮೆ ಅಮಾಸಿಗಳ ನಗೆ ನಕ್ಕ ಚಿಕ್ಕೆಗಳ ಲೀಲಾ
ಬೀಜ ಮೊಳಕೆ ಚಿಗುರು ನನೆ ಹೂ ನಗೆಗಳು
ಈ ಡಬ್ಬಿಯೊಳಗಿವೆ.
ಹಳ್ಳದ ಸರುವಿನಾಚೆಯ ಹೊಲ ಬದುವು ತೆಂಬಗಳು
ಮಲ್ಲಾಡದ ಮಳೆಗಳು ಮಲೆ ಮರೆಯ ಅಗಣಿತ ನಿಧಾನಗಳು
ಕೊಳ್ಳದೆಡ ಬಲದಲ್ಲಿ ಅವಿತು ಪುಟಿದ ಪ್ರಪಾತ ಸಪ್ತ ಸಾಗರಗಳು
ಆಚೆ ಬದಿ ಲೋಡು ದಿಂಬಿಗೆ ಒರಗಿ ವಿರಮಿಸಿವೆ.
ಕೋಗಿಲೆಯಾಗಿ ಕುಕಿಲುವ ಗಿಳಿ, ನವಿಲಾಗಿ ನರ್ತಿಸುವ ಮೊಲ
ನಮ್ಮ ಹಿತ್ತಿಲ ತೋಟದಿ ಸುಳಿದು ರಿಂಗಣಗುಣಿವ ಪಾತರಗಿತ್ತಿ
ಇಲ್ಲಿ ತಕ್ಕಡಿಯ ಕಾಣಿಯ ಮೇಲೆ ಮಲಗಿವೆ.
ಸುಳಿಗಾಳಿಗುಂಟ ಆಲಾಪವಾದ ಮಲ್ಲೇಶಪ್ಪನ ಹಾಡು
ಬಸನದೇವರ ಗುಡಿಯಲ್ಲಿ ದಿನ ದಿನಾ ರಾತ್ರಿ ಘಮಘಮಿಸಿ ಸುರಿದ
ಗುರುಸಿದ್ಧ ಮಾವನ ಭಜನೆ
ಗುರುಪಾದಪ್ಪ ಹೆಜ್ಜೆ ಕಲಿಸಿದ ಹೆಣ್ಪಾರ್ಟು ಸಣ್ಣಾಟ
ಹನುಮಂತ ದೇವರ ಜಾತ್ರೆ ಕುಸ್ತೀ ಕಣ
ಆಚೆ ಗರಡಿ ಮನೆ ಕಟ್ಟೆಯ ಮೇಲೆ ಕುಣಿದ ಕಿಳ್ಳೀಕ್ಯಾತರ ಆಟ
ಎಲ್ಲವನ್ನೂ ಎಂದಿನಿಂದಲೋ ಜೋಪಾನವಾಗಿ
ಖಾತೆ ಕಿರ್ದಿ ಚೋಪಡಿಗಳ ಪಾನು ಪಾನಿನ ಕೆಳಗೆ

ಕಾಳಜಿ ವಹಿಸಿ ಬಲು ಹುಶಾರಿಲೆ ಮಡಿಚಿ ಇಟ್ಟಿದ್ದೇನೆ.
ಸಖೀಜನದ ಸುಖದ ಎದೆ ಇರಿತ ಏರಿಳಿತ
ಜಗಳ ಹೊಟ್ಟೇ ಕಿಚ್ಚು ಸಿಟ್ಟು ಆಗಾಗ ತಿಂದ ಚಿಲ್ಲರೆ ಪೆಟ್ಟು
ಹಾಕಿದ ಪೇಚು ಪಟ್ಟು ಮಾಡಿದ ಗರ್ದಿ ಗಮ್ಮತ್ತು
ಎಂಜಲೂಟಗಳು ದೈವ ನೈವೇದ್ಯಗಳು ಪಾನಪ್ರಸಾದಗಳು
ಸಾಮಾನ್ಯವಲ್ಲ ಮಗಳೇ, ನಿನಗೆ ತಿಳಿಯುವುದಿಲ್ಲ,
ಬಹಳ ಎಚ್ಚರಿಕೆಯಿಂದ
ಮಗ್ಗುಲಲ್ಲೇ ಇರುವ ಗಲ್ಲೆಪೆಟ್ಟಿಗೆಯಲ್ಲಿ ಇಟ್ಟುಕೊಂಡಿದ್ದೇನೆ.

ನಿನಗೆ ಹೇಳಿದೆನಲ್ಲ, ಈಗ ನೆಲೆ ಗಟ್ಟಿ, ಊರಿದ್ದೇನೆ ಕಾಲು
ನನ್ನ ಅಂಗಡಿಯಲ್ಲಿ ಇರುವುದೆಲ್ಲಾ ಹದಿನಾರಾಣೆ ಚೊಕ್ಕ ಮಾಲು
ಈಗ ಇದು ನಿನ್ನ ಆಸ್ತಿ, ಅಮೂಲ್ಯ,
ಇದಕೆ ಬೆಲೆಯೇ ಇಲ್ಲ ಆದರೂ ಉಂಟು
ನೀನು ನಿನಗೇ ಹಾಕಿಕೊಳ್ಳುವ ಬೇಲಿ ನಿನ್ನದೇ ದೃಷ್ಟಿ
ನಿನಗೆ ಆಗಲಿ ಸಮಸ್ತ ಸೃಷ್ಟಿ
ಆಗ ಈ ಅಂಗಡಿ ಇಲ್ಲಿರುವ ಸರ್ವ ಸೊತ್ತು
ನಿನ್ನದೇ ಎಂದು
ನಿನ್ನ ಅಂಗೈ ಗೆರೆಗೆ ಗೊತ್ತು.

ಬಾ ತಾಯಿ ಈಚೆ ಕಡೆ, ಈಗ ಇದು ನಿನ್ನದೇ ಅಂಗಡಿ
ಈಗ ಪಟ್ಟಣ ಸೆಟ್ಟಿ ನಿನ್ನ ಗಿರಾಕಿ
ನೀ ಅಂಗಡಿ.

* * * *

೭. ಸಮುದ್ರ

ಅವ್ವ
ಒಂದು ತಿಂಗಳ
ನನ್ನ ಮಗನನ್ನೆತ್ತಿಕೊಂಡಳು
ಕಣ್ಣೆತ್ತಿ ಕಣ್ತುಂಬ
ನನ್ನನ್ನು ಹುಡುಕಿದಳು ಕಂಡಳು
ಮಗನಲ್ಲಿ ನಾ
ಕಂಡೆ ಅವ್ವನನ್ನು.
ಮಗನಲ್ಲಿ ನಾನಿಲ್ಲ ಅವ್ವ
ನಿಲ್ಲ. ಮುಗ್ಧ ಭಗವಂತ ಛಾಯೆ
ಮಧು ಮಾಯೆ
ನಗು.

* * * *

೮. ಹಾಡು ಕಳೆದಿದೆ

ನನ್ನ ಪ್ರೀತಿಯ ಹಾಡು ಕಳೆದಿದೆ
        ಯಾವ ಕಾಡಲಿ ಹುಡುಕಲಿ
        ಯಾವ ನಾಡಲಿ ಅಲೆಯಲಿ

ನೆಲವು ತೃಷೆಯಲಿ ಬಳಲಿ ನರಳಿದೆ
ಎಲ್ಲಿ ಸಿಗುವುದು ನೆಮ್ಮದಿ
ಮೋಡದೊಲವಿನ ಜಲವೆ ಬತ್ತಿದೆ
ಬಹುದೆ ಸುರ ನದಿ ಈ ಬದಿ
        ನನ್ನ ಹಾಡಿನ ಪ್ರೀತಿ ಕಳೆದಿದೆ
        ಯಾವ ಗೀತದಿ ಹುಡುಕಲಿ
        ಯಾವ ಪಾಡಲಿ ಪಡೆಯಲಿ

ಹರಿವ ಹೊಳೆಗಳ ನಲಿವ ನದಿಗಳ
ಹಾದಿ ಕಾದಿದೆ ಸಾಗರ
ಕನಸು ಕಾಡಿವೆ ಮನಸು ಬಾಡಿವೆ
ಮೌನ ಮಲಗಿದೆ ನಾಗರ
        ನನ್ನ ಭಾವದ ರಾಗ ಕಳೆದಿದೆ
        ಯಾರ ಮನದಲಿ ಇಣುಕಲಿ
ಯಾವ ವಾದ್ಯವ ಮಿಡಿಯಲಿ

ವಾಯು ಝುಂಝಾವಾತವಾಗಿದೆ
ಉಸಿರು ಭೀಷಣ ದೇಹವು
ತಪ್ತ ಬದುಕಿನ ದಗ್ಧ ದಾರಿಗೆ
ಲಭಿಸಬಹುದೇ ಗೇಹವು
        ನನ್ನ ನೇಹದ ತಂತು ಕಳಚಿದೆ
        ಯಾವ ಮೇಳದಿ ಅರಸಲಿ
        ಯಾರ ಸಂಗದಿ ಹುಡುಕಲಿ

ಮಳೆಯು ಇಳಿಯುವ ನೆಲವು ತಣಿಯುವ
ಆಶೆ ನನಗಿದೆ ಈಗಲು
ಕನಸು ಶಿಶುಗಳು ಕುಣಿದು ಬರುವವು
ತೆರೆದು ಪರಿಮಳ ಬಾಗಿಲು
        ಮಧುವನಂಗಳ ಹಾಡು ಮಿಡಿವುದು
        ಮದಿರ ಸ್ನೇಹದ ಕಾಡು ನಲಿವುದು
        ಕಳೆದ ಪ್ರೀತಿಯ ಹಾಡು ಸಿಗುವುದು

ನನ್ನ ಪ್ರೀತಿಯ ಹಾಡು ಕಳೆದಿದೆ
ಯಾವ ನಾಡಲಿ ಹುಡುಕಲಿ
ಯಾವ ಕಾಡಲಿ ಅಲೆಯಲಿ

* * * *

೧೧. ಹೊಸ ಹಾಡು ಪಾಡು

೧. ಹುಡುಗರೇ ಹೀಗೆ

ಮಗನೇ,
ನಿನಗೆ ಮೊದಲೇ ಹೇಳಿದ್ದೆ,
ಈ ಹುಡುಗಿಯರೇ ಹೀಗೆ.
ಹೀಗೆ ಸುತ್ತಿ ಸುತ್ತಿ ಸುಳಿದಾಡಬೇಡ
ಹುಡುಗಿಯರ ಹಿಂದೆ
ಎಂದು ವಿವರಿಸಿ ಹೇಳಿದ್ದೆ
ಬಹಳ ಹಿಂದೆ.

ಸಮುದಾಯದಲಿ ಗುಂಪು ಗುಂಪಿನಲಿ
ಇಂಪಾದ ಕಾಡು ಹಾಡುಗಳಂತೆ
ನೀರೆಯರ ನೀರು ನಿಲುಕುವುದಿಲ್ಲ
ಅರಿವಿಗೆ. ಅಂದಿದ್ದೆ.

ನೀ ಹಟಕ್ಕೆ ಬಿದ್ದಿ.
ಅರ್ಥ ಅರಿಯದೆ ಹೋದಿ.
ಯಾವಳಾದರೂ
ಒಬ್ಬ ಹುಡುಗಿಯ ಹಿಂದೆ ಸುಳಿದಿದ್ದರೆ
ಮರಮರಳಿ ಅವಳನ್ನೆ ತಿಳಿದಿದ್ದರೆ
ಬಹುಶಃ
ಎಲ್ಲ ಆಗಿರುತ್ತಿತ್ತು ಸೂತ್ರಬದ್ಧ.
ಉತ್ಸಾಹದಲಿ ನೀ
ಹಲವು ಹುಡುಗಿಯರ ಬೆನ್ನು ಹತ್ತಿದ್ದಿ

ಏನು ಮಾಡುವುದು, ಇರಲಿ ಬಿಡು,
ಈ ಹುಡುಗಿಯರೇ ಹೀಗೆ.

ಏನು ಮಾಡುವುದು?–
ಈ ಹುಡುಗರ ದರ್ಪ ದರ್ಪಣದಲ್ಲಿ
ಢಿಕ್ಕಿ ಹೊಡೆಯುತ್ತವೆ
ವರ್ಣರಂಜಿತ ಬಿಂಬ ಪ್ರತಿಬಿಂಬ
ಮಾತು ಮಾತಿಗೆ ಘಾತ ಪ್ರತಿಘಾತ.

ಪ್ರಣಯ ಪ್ರೇಮ ವ್ಯವಹಾರ ವ್ಯಾಕರಣದಲ್ಲಿ
ಏಕವಚನ ಪ್ರಕರಣ ಒಂದೇ
ಸದಾ ಸರಳ ನೇರ
ಸುಗಮ ಸುಭಗ ಸುಭದ್ರ
ಹುಡುಗಿ ಅಥವಾ ಹುಡುಗ
ವಚನ ಒಂದೇ
ಒಂದರಲಿ ಒಂದರ ನಿಷ್ಠೆಯ ಬೆಡಗು.

ಬಹುವಚನ
ಬಹುತೇಕ ಎಲ್ಲ ಭಾಷೆಗಳಲ್ಲಿ
ಎಲ್ಲ ಹಾದಿಗಳಲ್ಲಿ ವಿಚ್ಛಿದ್ರ
ಬಹುಜನರ ಪಾಲಿಗೆ ಭಾರ ಭಿನ್ನ
ಭಿನ್ನ ಬಹು ಕ್ಲಿಷ್ಟ ಸಂಶ್ಲಿಷ್ಟ.

ಏನು ಮಾಡುವುದು?–
ಇವರು ಬಹು ಪಾಲು ಕೇವಲ ಹುಡುಗರು–
ಈ ಹುಡುಗರಿಗೆ ಹೇಗೆ ತಿಳಿಸುವುದು–
ಇವರಂಥದೇ ವಯಸ್ಸು ನಮಗೆ ಇದ್ದಾಗ
ನಾವು
ಸುಟ್ಟು ಕೊಂಡ ಗಾಯಗಳು ಪಟ್ಟ ಅನುಭವಗಳು

ಹೇಗೆ ತಿಳಿಯುವುದು ಇವರಿಗೆ?

ಏನು ಮಾಡುವುದು?–
ಇದು ಚೊಕ್ಕ ಲೆಕ್ಕ
ಈ ಹುಡುಗರೇ ಹೀಗೆ
ಆದ್ದರಿಂದ
ಹುಡುಗಿಯರೂ ಹೀಗೇ...

* * * *

೨. ಸುಂದರಿ

ಪರಮ ಸುಂದರಿ ಅವಳು.
ಅವಳನ್ನು ಬಹಳ
ಬಹಳ ಪ್ರೀತಿಸುತ್ತಿದ್ದೆ.
ಈ ಮಧ್ಯೆ
ಏನಾಯಿತೋ
ಅಂತರದಲ್ಲಿ ತೊಡಕಿ ಅಂತರ ಕುಣಿಕೆ ಹಾಕಿತು
ನೋವುಗಳ ಕಂದರ ಹಿರಿದಾಯಿತು.

ಈಗ
ಜೀವನದ ನದಿಯಲ್ಲಿ
ಕಾಲ ಜಲ ಸಾಕಷ್ಟು ಹರಿದಿದೆ
ನಡೆದಿದೆ ಘಟಿಸಿದೆ.

ವಿವಾಹ ನಂತರದ
ಆಯುಷ್ಯ ಆನಂದದಲಿ
ಸರಿಯುತಿದೆ ಸರಾಗ.

ಕಾರಣ ಬಲ್ಲಿರಾ?–
ಯೌವನದ ಗೊಂದಲದಲ್ಲಿ
ಕಳೆದು ಹೋಗಿದ್ದಳಲ್ಲ ಆ ಪರಮ
ಸುಂದರಿ ಈಗ
ಎಷ್ಟೋ ವರ್ಷಗಳ ನಂತರ
ಸಿಕ್ಕಿದ್ದಾಳೆ
ನಮ್ಮ ಮಗಳಾಗಿ
ನನಗೆ ದಕ್ಕಿದ್ದಾಳೆ.

ನಾನು ಅವಳನ್ನು ಬಹಳ
ಬಹಳ ಬಹಳ
ಪ್ರೀತಿಸುತ್ತೇನೆ.

* * * *

೩. ನನ್ನವ್ವ

ನಾನು
ಪ್ರತಿಯೊಂದು ಹೊಸ ಕವಿತೆ
ಬರೆದಾಗ
ನನ್ನ ಅನಕ್ಷರಸ್ಥ ಅವ್ವನಿಗೆ
ಮೊದಲು ಅರ್ಥವಾಗುತ್ತಿತ್ತು
ಅರ್ಥದೊಳಗಿನ ಧ್ವನಿ ಅನುರಣಿಸುತಿತ್ತು.

ನನ್ನ ಅರಳಿದ ಕಣ್ಣು, ಪುಟಿವ ತುಟಿ ನೋಡಿ
ಅವ್ವನ ಕಣ್ಣಲ್ಲಿ
ಮತ್ತು ಉಣ್ಣಿಸುವ ಬೆರಳ ತುದಿಯಲ್ಲಿ
ಹಿಗ್ಗಿನಲಿ ಮಿನುಮಿನುಗಿ ಹೊಳೆಯುತಿದ್ದವು
ಹಲವಾರು ಹೊಸ ಹಸನ್ಮುಖ ಕವಿತೆ.

ಇವತ್ತಿನ ಕವಿತೆ ನಿನ್ನೆಯಂತಿಲ್ಲ
ಅದಕ್ಕಿಂತ ಮಿಗಿಲು ಅರ್ಥದ ಬೆಳಕು
ತುಂಬಿ ತುಳುಕುತ್ತಿದೆ ರಸ ಭಾವ ಹೊಸತು
ನೀ ನನ್ನ ಕವಿತೆ ಪ್ರಾಣ ಮಗಾ,
ನಿನ್ನ ಕವಿತೆಗಳಲ್ಲಿ ಕಮನೀಯ ಕಾಮನಬಿಲ್ಲು
ಗಂಧರ್ವ ಸಂಗೀತ ಸೊಲ್ಲು
ಅದು ನನಗೆ ಉಸಿರು ತ್ರಾಣ ಮಗಾ
ಎಂದು ಹಾಡುತ್ತಿತ್ತು ಅವ್ವನ ಮೌನ.

ನನ್ನವ್ವ
ಬೆಡಗು ಪವಾಡ ಚಮತ್ಕಾರ.

ಈಗ ಸದಾ ಕಾಲ ಮಗ್ಗುಲಲಿ
ನಲಿವ ನವಿಲು
ಅಕ್ಷರಸ್ಥ ಪತ್ನಿಯಲಿ ಅರಸುತ್ತಿರುವೆ
ಅವ್ವನನ್ನು.

* * * *

೪. ಸರಕು

ಅದೂ ಇದೂ ಬಹಳ ಕೊಳ್ಳಬೇಕಿತ್ತು
ಪಟ್ಟಿ ಮಾಡಿಕೊಂಡೆವು
ತಯಾರಾದೆವು ಮುಗಿಸಿ ಶೃಂಗಾರ
ಮೈತುಂಬ ಬಂಗಾರ
ಆದಷ್ಟು ಹೊತ್ತು
ಹೋದೆವು ಪೇಟೆಗೆ.

ಅಲ್ಲಿ ಬಂದವರು ಕಣ್ಬಿಟ್ಟು

ದಿಟ್ಟಿಸತೊಡಗಿದರು
ಕಣ್ಣಲ್ಲಿ ಕಣ್ಣಿಟ್ಟು
ಅತ್ತ ಇತ್ತ ಸುತ್ತ ಮುತ್ತ
ತೀಟೆಗೆ.

ಯಾವ ಮೇಕ್ ಎಷ್ಟು ಬೆಲೆ
ಯಾವ ನೆಲೆ
ಹಾಕತೊಡಗಿದರು ಬಲೆ
ಬೇಟೆಗೆ.

* * * *

೫. ಮುಂದಿನ ಮನೆ

ಬಾಗಿಲಲಿ ಕೇಳಿಸಿತು ಕ್ಷೀಣ
ದೀನ ದಣಿದ ದನಿ. ವಿದಗ್ಧ.
ಹೊರಬಂದೆ.
ಕುಸಿವಂತಿದ್ದ ವೃದ್ಧ ಭಿಕ್ಷುಕನೊಬ್ಬ ನಿಂತಿದ್ದ
ಶತಮಾನಗಳ ಹಸಿವೆ ದಾರಿದ್ರ್ಯ ದೈನ್ಯಗಳ ಮೈ
ಹೊತ್ತು ಬಂದಿದ್ದ
ತುತ್ತು ಅನ್ನಕ್ಕಾಗಿ ಚಾಚಿದ್ದ ಕೈ
ತೊದಲು ನಾಲಗೆಯಲ್ಲಿ ಮನೆಮನೆಯ ಬಾಗಿಲಲಿ
ಮಾತಿರದ ಮಾತಿನಲಿ ನೀಡುಗೈ ಮಾತೆಯರ ಹುಡುಕಿದ್ದ.
ನಿಂತೆ ಸ್ತಬ್ಧ.

ಮನೆಯೊಡತಿ ಮಾಯೆ ಬಂದಳು ಹೊರಗೆ
ತಟ್ಟನೇ ಹೇಳಿದಳು–
'ಹೋಗು ಮುಂದಿನ ಮನೆಗೆ...'
(ಹೋಗುವುದು ಯಾರು?–
ಬಾಗಿಲಲಿ ಇಬ್ಬರು!)

'ಬೆಳಗಾದ ಕೂಡಲೇ ಭಿಕ್ಷುಕರ ಹಾವಳಿ
ಇನ್ನೊಬ್ಬ ಮತ್ತೊಬ್ಬ ಮಗುದೊಬ್ಬ ಹೀಗೆಯೇ ಸರಪಳಿ
ಹೋಗು ಮುಂದಿನ ಮನೆಗೆ...'

ಎಷ್ಟು ಕಾಲದ ಬಳಿಕ ನನ್ನ ಕೈ ಹಿಡಿದಳು–
ತಬ್ಬಿದಳೆ? ಇಲ್ಲ– ದಬ್ಬಿದಳೆ?
'ನಡೆಯಿರಿ ಒಳಗಡೆಗೆ,
ನಿಮಗೆ ತಿಳಿಯುವುದಿಲ್ಲ ಇಂಥವರ ಮೋಸ
ಇದು ಹಗಲು ವೇಷ.
ಭಿಕ್ಷೆ ನೆಪ ಕಾಲಕ್ಷೇಪ ಮಾಡುವುದಕ್ಕೆ,
ನೋಡುತ್ತಾರೆ ಮನೆ ಹಿತ್ತಿಲು
ಯಾರುಂಟು ಯಾರಿಲ್ಲ ಅತ್ತಿತ್ತ ಸುತ್ತಲು
ಹಾಕುತ್ತಾರೆ ಹೊಂಚು
ಬಲ್ಲೆ ನಾ ಇವರ ಸಂಚು
ವಂಚಕರು ಕಳ್ಳರು...
ನಾವಲ್ಲ ಮಳ್ಳರು.
ಬನ್ನಿ ಒಳಗಡೆಗೆ...'

ತಳ್ಳಿದಳು.

ಒಳಬಂದೆ
ಬಂದಿ.
ತೆರೆಯತೊಡಗಿದವು ನಿಧಾನ ಒಂದೊಂದೆ
ಬಾಗಿಲು ಸಂದಿಗೊಂದಿ.

ತೆರಳುವನು ಭಿಕ್ಷುಕನು ಮುಂದಿನ ಮನೆಗೆ...
ಅವನು ಬೇಡಿದ್ದು ಒಂದು ಹೊಟ್ಟೆಗೆ
ಒಂದು ಹೊತ್ತಿಗೆ ಮಾತ್ರ ಒಂದು ತುತ್ತಿಗೆ
ಹೀಗೆ ಬೇಡುವ ಬೇಡಿ

ಪಡೆಯುವ ಆತ
ಭಿಕ್ಷುಕ ವಂಚಕ ಹಗಲು ವೇಷದ ಕಳ್ಳ
ಮತ್ತೆ ನಾ? ನನ್ನಂಥ ಮಂದಿ?
ತೆರೆಯತೊಡಗಿದವು ಒಂದೊಂದೆ ಬಾಗಿಲು ಸಂದಿಗೊಂದಿ...

ಒಂದೆ? ಎರಡೆ?– ಬೇಡಿದ್ದು ಬಯಸಿದ್ದು?
ಸಿದ್ಧಿಸಲು ಹವಣಿಸಿದ್ದು?
ಎಷ್ಟು ಮನೆಯೆದುರು, ಎಷ್ಟು ಬಾಯಿಗಳೆದುರು
ಬೇಡಿಲ್ಲ ಭಿಕ್ಷೆ ನಾವು?
ಸಹಿಸಿಲ್ಲ ಎಂಥೆಂಥ ಅವಮಾನ ಶಿಕ್ಷೆಯ ಸಾವು?
ಸೌಂದರ್ಯ ರೂಪ ಕಾಮದ ಹಸಿವೆಗೆ ಭಿಕ್ಷೆ
ವಿಧವಿಧದ ವಾಸನೆಯ ಹಲವು ಹೆಣ್ಣುಗಳೆದುರು,
ಅಧಿಕಾರ ಅಂತಸ್ತು ಆಸ್ತಿ ಅಹಂಕಾರ
ಸ್ಥಾನ ಮಾನ ಹೆಸರು ಗೌರವ ಕೀರ್ತಿಯ ಭಿಕ್ಷೆ
ಅಸಂಖ್ಯ ಅಣ್ಣಗಳೆದುರು,
ಲಾಲಸಾಗ್ನಿಯ ಸುಖಕೆ ಲೋಲುಪ ಗಾನ
ದೇಹದುಷ್ಣ ಶೀತಕ್ಕೆ ಸಮಪಾಲು ಪಾನ
ಹೊತ್ತು ಹೊತ್ತಿಗೆ ಏರುತ್ತಿದ್ದ ಮತ್ತಿಗೆ
ತುತ್ತು ತುತ್ತಿಗೆ ಬಿಗಿಯುತ್ತಿದ್ದ ಕತ್ತಿಗೆ
ಎಲ್ಲದಕ್ಕೂ ಬಯಸಿದ್ದು ಮರಮರಳಿ ಯತ್ನಿಸುತ
ಪಡೆದದ್ದು ಅಲ್ಲವೇ ಭಿಕ್ಷೆ?

ಅವನು– ಆ ವೃದ್ಧ– ಬೇಡಿದ್ದು
ಒಂದು ಹೊತ್ತಿನ ತುತ್ತು ಮಾತ್ರ
ತನ್ನ ಒಂದೇ ಒಂದು ಹೊಟ್ಟೆಗೆ.
ನಾವು ತಿಂದದ್ದು ಹೊಡೆದದ್ದು ಹಲವರ ಹೊಟ್ಟೆಗೆ.
ಯುಗಯುಗದ ಮಟ್ಟಿಗೆ.
ನಮ್ಮ ಒಬ್ಬೊಬ್ಬರಲ್ಲೂ
ಹಲವು ಬಗೆ ಹಲವು ಜನ ಭಿಕ್ಷುಕರು

ತಕ್ಷಕರು
ಸರ್ವಸ್ವ ಭಕ್ಷಕರು
ಒಟ್ಟಾಗಿ ಒಂದಾಗಿ ನೆರೆದಿದ್ದೆವು.

ನಾವು ಭುಂಜಿಸಿದ ಒಂದೊಂದು ತುತ್ತು
ಹಸಿದು ಕಂಗಾಲಾದವರ ಬಾಯಿಂದ ಕಸಿದಿದ್ದೆವು,
ನಮ್ಮ ಬಯಕೆಗಳಲ್ಲಿ ಅವರನ್ನು ಹುಗಿದಿದ್ದೆವು
ಎಲ್ಲಿ ಸಿಗುವರು ಈಗ ನಮ್ಮಂಥ
ಸರ್ವಾವತಾರಿಗಳು ರಾಕ್ಷಸ ಭಿಕ್ಷುಕರು...

ಹೋಗಬಹುದು ಮುಂದಿನ ಮನೆಗೆ
ತುತ್ತು ಭಿಕ್ಷೆಯ ಬೇಡಿ ಆ ಮುದುಕ
ಯಾವ ಮನೆ ಬಾಗಿಲಿಗೆ ನಾ ಹೋಗಲಿ?
ಯಾರು ನೀಡುವರು ಎಲ್ಲಿ ಸಿಕ್ಕುವುದು
ನಿರ್ಮಲ ನೆಮ್ಮದಿ ಭಿಕ್ಷೆ,
ಈ ಕೋಣೆ ಮಂಚ ದೇಹ ಲಾಸ ವಿಲಾಸದಲಿ
ಅನುರಣಿಸುತಿದೆ–
'ಹೋಗು ಹುಡುಕು ಮುಂದಿನ ಮನೆ...'

ನಿಜ
ಹುಡುಕಿ ಹೋಗಬೇಕು ಮುಂದೆ
ಒಂದಲ್ಲ ನೂರಲ್ಲ ಸಾವಿರದ ಮನೆ ಮುಂದೆ
ನೋವ ಖಪ್ಪರ ಚಾಚುವೆ, ಬೇಡುವೆ ಕ್ಷಮಾ
ಭಿಕ್ಷೆ ತೊದಲು
ಬದುಕ ತೋರಿಸಿದ ಮಾಯಿ ತಾಯಿ
ನಿನಗೆ ವಂದನೆ ಮೊದಲು
ಈ ಮನೆ ಆ ಮನೆ ಆಚೆ ಮನೆ...
ಸಿಗುವುದೇ ತೆರೆವುದೇ ಬಾಗಿಲು...
ಇದು ಎಂಥ ದಿಗಿಲು!

ಒಳಗೆ ಅವತರಿಸಿ ಕರಗಿರುವ ಭಿಕ್ಷುಕ
ನನಗಿಂದು ಶಿಕ್ಷಕ.

* * * *

೬. ಹರಕೆ

ಬೆಳದಿಂಗಳಲ್ಲಿ ಹಾಲು ಸಕ್ಕರೆ ಕರಗಿವೆ
ಹೆದ್ದಾರಿ ಮೇಲೆ ಹೆಜ್ಜೆ ನಿಃಶಬ್ದ ಹರಿದಿವೆ

ಗಂಗಾ ತಟದಿ ರಾಗ ಆಮೋದ ಸಂಗೀತ ಮಗ್ನ
ವಿಸ್ತರದ ನೀಲ ಸಾಗರದಿ ನಕ್ಷತ್ರ ನಗ್ನ

ತಂಗಾಳಿ ಸುಳಿಯುತಿದೆ ಹಕ್ಕಿ ಹಾಡುತಿವೆ
ವರ್ಷ ವರ್ಷಗಳ ನೋವು ಬಾಡುತಿವೆ

ಮುಸ್ಸಂಜೆ ನಸುಕು ಅಪ್ಪಿ ಮುದ್ದಾಡುತಿವೆ
ಸಂಗ ನಿಃಸಂಗ ತಾಯ ತೊಡೆಯಲ್ಲಿ ಆಡುತಿವೆ

ಯಾವ ನೆಲೆಯಿಂದ ಎಂಥೆಂಥ ಸೆಲೆ ಪುಟಿದು ಚಿಮ್ಮುತಿವೆ
ಹತ್ತು ದಿಕ್ಕುಗಳಿಂದ ಹತ್ತತ್ತು ರಸ ಉಕ್ಕಿ ಹೊಮ್ಮುತಿವೆ

ಇಂಥ ಬೆಳಕಿನ ಹೊತ್ತು ನಬ್ಬೆರಗು ನಲಿಯುತಿದೆ
ನನ್ನೆದೆಯ ಪಾಡು ಹರ್ಷದ ಹಾಡು ಮೆಲ್ಲನುಲಿಯುತಿದೆ

ಅವ್ವ ಅಟ್ಟದ ಮೇಲೆ ಗುರುವು ಗದ್ದುಗೆಯಲ್ಲಿ ನಲಿವ ಸುರಿಸಿದ್ದಾರೆ
ಮೌನದಲಿ ಮಿಡಿವ ಒಳಶಬ್ದಗಳ ಹಾಡು ನೀಡಿ ಹರಸಿದ್ದಾರೆ

* * * *